# 16. ಶ್ರಾವಕ ಧರ್ಮದಲ್ಲಿ ಪಂಚಾಣು ವ್ರತಗಳು

ಜೈನ ಸಂಘದಲ್ಲಿ ಮುನಿ, ಆರ್ಯಿಕಾ, ಶ್ರಾವಕ ಮತ್ತು ಶ್ರಾವಿಕಾ ಎಂದು ನಾಲ್ಕು ವಿಭಾಗಗಳು. ಶ್ರಾವಕನು ಮನೆಮಾಡಿಕೊಂಡಿರುವ ಪುರುಷ, ಗೃಹಸ್ಥ ಶ್ರಾವಿಕೆಯು ಮನೆಮಾಡಿಕೊಂಡಿರುವ ಸ್ತ್ರೀ. ಈ ಶ್ರಾವಕ ಶ್ರಾವಿಕೆಯರಿಗೆ ಜೈನ ಸಂಘದಲ್ಲಿ ಬಹಳ ಮಹತ್ವದ ಸ್ಥಾನವಿದೆ. ಇವರಿಲ್ಲದೆ ಮುನಿಯ ಅವಸ್ಥೆಯಲ್ಲಿ ಬಾಳಲು ಸಂಘಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲದೆ ಶ್ರಾವಕರೆ, ಮುಂದೆ ಮುನಿಗಳೂ ಆಗುವವರಿರುತ್ತಾರೆ. ಅದರಿಂದ ಜೈನ ಗೃಹಸ್ಥನ ಆಚಾರವು ಮುನಿ ಚಾರಿತ್ರದ ಪಾರ್ಶ್ವಭೂಮಿಯಂತೆ ಇರುವುದು.

ಜೈನ ಗೃಹಸ್ಥನು ನ್ಯಾಯಮಾರ್ಗದಿಂದ ಧನವನ್ನು ಸಂಪಾದಿಸುವವನು, ಸದ್ಗುಣಗಳನ್ನು ಆದರಿಸುವವನು, ಸವಿಯಾದ ಹಾಗೂ ಸತ್ಯವಾದ ಮಾತುಗಳನ್ನು ಆಡುವವನು, ಇನ್ನೊಬ್ಬರಿಗೆ ಬಾಧೆಯಾಗದಂತೆ ಧರ್ಮಾರ್ಥ ಕಾಮಗಳನ್ನು ಸಂಪಾದಿಸುವವನು. ಆಹಾರ-ವಿಹಾರಗಳನ್ನೂ ಯೋಗ್ಯವಾಗಿ ಇಟ್ಟುಕೊಂಡಿರುವವನು, ಸಜ್ಜನರ ಸಂಘದಲ್ಲಿ ಇರುವವನು, ಶಾಸ್ತ್ರಜ್ಞ, ದಯಾಳು, ಪಾಪಭೀರು, ಜಿತೇಂದ್ರಿಯನೂ ಆಗಿರುವವನು. ಈ ಎಲ್ಲ ಗುಣಗಳುಳ್ಳವನೇ ಜೈನ ಶ್ರಾವಕ ಧರ್ಮವನ್ನು ಆಚರಿಸುವವನೆಂದು ಜೈನಶಾಸ್ತ್ರಗಳು ಹೇಳುತ್ತವೆ. ಇಂಥ ಸದ್ಗುಣಸಂಪನ್ನನಾದವನು ಆದರ್ಶ ಗೃಹಸ್ಥನಲ್ಲದೆ ಮತ್ತೇನು ? ಜೈನಧರ್ಮದ ಶ್ರದ್ಧಾವಂತ, ವಿವೇಕ ಶಾಲಿ, ಕ್ರಿಯಾಶೀಲನೇ ಶ್ರಾವಕ.

ಇಂಥ ಶ್ರಾವಕರಲ್ಲಿ ಪಾಕ್ಷಿಕ, ನೈಷ್ಠಿಕ ಮತ್ತು ಸಾಧಕರೆಂದು ಮೂರು ತರಗತಿಗಳಾಗುತ್ತವೆ. ಯಾರು ಒಂದು ರೀತಿಯಿಂದ ಹಿಂಸೆಯನ್ನು ತ್ಯಾಗ ಮಾಡಿ ಶ್ರಾವಕ ಧರ್ಮವನ್ನು ಸ್ವೀಕರಿಸುತ್ತಾರೋ ಅವರು ಪಾಕ್ಷಿಕ ಶ್ರಾವಕನೆನಿಸುತ್ತಾರೆ. ಅತಿಚಾರರಹಿತ ಶ್ರಾವಕ ಧರ್ಮವನ್ನು ಪಾಲಿಸುವವನು ನೈಷ್ಠಿಕ ಶ್ರಾವಕನು. ಯಾರು ದೇಶ ಚಾರಿತ್ರವನ್ನು ಪೂರ್ಣ ಮಾಡಿ ತನ್ನ ಆತ್ಮ ಸಾಧನೆಯಲ್ಲಿ ತನ್ಮಯನಾಗಿರುವರೋ ಅವರು ಸಾಧಕ ಶ್ರಾವಕನೆನಿಸುತ್ತಾರೆ. ಅರ್ಥಾತ್ ಆರಂಭದ ಅವಸ್ಥೆಯು ಪಾಕ್ಷಿಕನದಾಗಿದೆ. ಮಧ್ಯಸ್ಥಿತಿಯು ನೈಷ್ಠಿಕನದಾಗಿದೆ. ಪೂರ್ಣಾವಸ್ಥೆಯು ಸಾಧಕನಿಗೆ ಲಭಿಸುವುದು. ಈ ರೀತಿ ಅವಸ್ಥಾ ಭೇದದಿಂದ ಶ್ರಾವಕರಲ್ಲಿ ಮೂರು ತರಗತಿಗಳು ಆಗುತ್ತವೆ.



**ಪಾಕ್ಷಿಕ ಶ್ರಾವಕನ ಆಚಾರ :-**

ಪಾಕ್ಷಿಕ ಶ್ರಾವಕನು ಎಂಟು ಮೂಲಗುಣಗಳನ್ನು ಪಾಲಿಸುತ್ತಾನೆ. ಎಂದರೆ ಅಹಿಂಸಾ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹಗಳನ್ನು ಸ್ವಲ್ಪ ಸ್ವಲ್ಪವಾಗಿ ಪಾಲಿಸುತ್ತಾನೆ, ಮತ್ತು ಮಧ್ಯ, ಮಾಂಸ ಮಧುಗಳನ್ನು ಸರ್ವಥಾ ತ್ಯಾಗ ಮಾಡುತ್ತಾನೆ. ಇವು ಮುಂದಿನ ಉದಾತ್ತ ಚಾರಿತ್ರ ವೃಕ್ಷದ ಮೂಲದಂತೆ ಇರುತ್ತವೆ. ಅದಕ್ಕಾಗಿ ಇವುಗಳಿಗೆ ಮೂಲ ಗುಣಗಳೆಂದು ಹೆಸರು. ಇವು ಇಲ್ಲದವನು ಜೈನ ಶ್ರಾವಕನೆನಿಸುವುದಿಲ್ಲ.

**ಅಹಿಂಸಾಣುವ್ರತ :-** ಜೈನದರ್ಶನದಲ್ಲಿ ಹೇಳಿದಂತೆ ಜೀವಗಳು ಸ್ಥಾವರ ಮತ್ತು ತ್ರಸ ಎಂದು ಎರಡು ವಿಧವಾಗಿವೆ. ಮನುಷ್ಯ, ಪಶುಪಕ್ಷಿ, ಮೊದಲಾದ ಸಂಚರಿಸುವ ಜೀವಿಗಳು ತ್ರಸಜೀವಿಗಳೆನಿಸುತ್ತವೆ. ಪೃಥ್ವಿ, ಜಲ, ಅಗ್ನಿ ವನಸ್ಪತಿಯೇ ಮೊದಲಾದ ರೂಪಗಳಲ್ಲಿ ಇರುವ ಜೀವಿಗಳು ಸ್ಥಾವರ ಜೀವಗಳು. ಗೃಹಸ್ಥನು ಸ್ಥಾವರಜೀವಿಗಳ ಹಿಂಸೆಯಿಂದ ದೂರವಿದ್ದು ಬಾಳುವುದು ಸಾಧ್ಯವಿಲ್ಲ. ಯಾಕೆಂದರೆ, ಬದುಕಲಿಕ್ಕೆ ಅನೇಕ ವಸ್ತುಗಳು ಬೇಕಾಗುತ್ತವೆ. ಅವುಗಳನ್ನು ಸಂಪಾದಿಸುವಾಗ ಎಚ್ಚರಿಕೆಯಿಂದ ಇರುವುದೇ ಅಹಿಂಸಾಣುವ್ರತದ ಪಾಲನೆಯಾಗಿದೆ. ಇನ್ನು ತ್ರಸಜೀವಿಗಳ ಹಿಂಸೆಯು ಸಂಕಲ್ಪೀ, ಆರಂಭೀ, ಉದ್ಯೋಗೀ ಮತ್ತು ವಿರೋಧೀ ಎಂಬ ನಾಲ್ಕು ಪ್ರಕಾರದಿಂದ ಆಗುತ್ತವೆ, ಇವುಗಳಲ್ಲಿ ಶ್ರಾವಕನು ಸಂಕಲ್ಪೀ ಹಿಂಸೆಯನ್ನು ಮಾತ್ರ ತ್ಯಾಗ ಮಾಡುವವನು, ಆರಂಭೀ ಹಿಂಸೆಯಲ್ಲಿ ಕೂಡ ರುಚಿಗಾಗಿ ಮನಸ್ಸಿನ ವಿವಿಧ ಆಸೆಗಳ ತೃಪ್ತಿಗಾಗಿ, ಮನೋರಂಜನೆಗಾಗಿ, ಚರ್ಮದ ಸಾಮಾನುಗಳನ್ನು ಉಪಯೋಗಿಸುವುದಕ್ಕಾಗಿಯೇ ಮೊದಲಾದ ಕಾರಣಗಳಿಗಾಗಿ ಆಗುವ ಹಿಂಸೆಯನ್ನು ಶ್ರಾವಕನು ಮಾಡಕೂಡದು. ಮಾಡುವವರಿಗೆ ಪೋಷಕವಾಗುವಂತೆ ತನ್ನ ಆಚರಣೆಯು ಇರಬಾರದು. ಇನ್ನು ಜೀವನವನ್ನು ಸಾಗಿಸುವುದಾಕ್ಕಾಗಿ ಮಾಡುವ ವಿವಿಧ ಉದ್ಯೋಗಗಳಲ್ಲಿ ಹಿಂಸೆಯು ಆಗುತ್ತಿದ್ದರೂ, ಶಕ್ತಿಇದ್ದಷ್ಟೂ ಹಿಂಸೆಯಾಗದಂತೆ ಎಚ್ಚರಿಕೆ ವಹಿಸಿ ಉದ್ಯೋಗಗಳನ್ನು ಮಾಡುವುದು ಶ್ರಾವಕಧರ್ಮವಾಗಿದೆ. ಇದರಲ್ಲಿ ತನಗೆ ಸಾಕಾಗುವಷ್ಟನ್ನೇ ಉತ್ಪಾದನೆ ಮಾಡುವುದು ಸಂಗ್ರಹ ಪ್ರವೃತ್ತಿಯು ಇರಕೂಡದು. ಇಂಥವನೇ ಅಹಿಂಸಾಣುವ್ರತವನ್ನು ಪಾಲಿಸುವಂಥವನಾಗುವನು. ಜೈನಶಾಸ್ತ್ರಕಾರರು ಅಹಿಂಸಾಣುವ್ರತದ ಐದು ದೋಷಗಳನ್ನು ವಿವರಿಸಿದ್ದಾರೆ. ಇವುಗಳಿಂದ ದೂರವಿರಲಿಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ಆ ದೋಷಗಳು ಹೀಗಿವೆ :-

1. ಕೆಟ್ಟ ಉದ್ದೇಶದಿಂದ ಮನುಷ್ಯ ಹಾಗೂ ಪಶುಗಳನ್ನು ಕಟ್ಟಿ ಹಾಕುವುದು. (ಮನೆಗೆ ಬೆಂಕಿ ಮೊದಲಾದುದು ಹತ್ತಿದರೂ ಸಹ, ಸಾಕಿದ ಪಶುಗಳನ್ನು ಬಿಚ್ಚಿಕೊಂಡು ಬರುವಂತೆ ಕಟ್ಟುವುದು ಒಳಿತು.)

2. ಕ್ರೂರತೆಯಿಂದ ಕಟ್ಟಿಗೆ-ಬಾರುಕೋಲುಗಳಿಂದ ಹೊಡೆಯುವುದು.

3. ನಿರ್ದಯತೆಯಿಂದ ಕೈ, ಕಾಲು, ಕಿವಿ, ಮೂಗುಗಳನ್ನು ಕತ್ತರಿಸುವುದು.

4. ಆಸೆಗೆ ಒಳಗಾಗಿ ಪಶುಗಳಿಂದಲೂ ಸೇವಕರಿಂದಲೂ ಅವರ ಶಕ್ತಿ ಮೀರಿ ಕೆಲಸ ಮಾಡಿಸಿಕೊಳ್ಳುವುದು.

5. ಹಸಿವೆ ನೀರಡಿಕೆಗಳಿಂದ ಪ್ರಾಣಿಗಳು ಸಾಯುವ ಸಂಭವವಿರುವುದು. ಅದರಿಂದ ಆಹಾರ, ನೀರುಗಳಿಗೆ ಯಾರಿಗೂ ಅಡ್ಡಿಯನ್ನು ಮಾಡಬಾರದು.

ಅಹಿಂಸಾವ್ರತಿಯು ರಾತ್ರಿ ಭೋಜನವನ್ನು ತ್ಯಾಗಮಾಡಬೇಕು. ರಾತ್ರಿಯಲ್ಲಿ ಊಟಮಾಡುವುದರಿಂದ ಅನೇಕ ಸೂಕ್ಷ್ಮ ಜಂತುಗಳ ಹಿಂಸೆಯು ಆಗುವುದು. ಅದರಿಂದ ಆರೋಗ್ಯಕ್ಕೂ ಹಿತಕರವಲ್ಲ. ಆದುದರಿಂದ ಸೂರ್ಯನ ಬೆಳಕು ಇರುವಾಗಲೇ ಊಟಮಾಡಬೇಕು.

ಇದರಂತೆಯೇ ಅಹಿಂಸಾಣುವ್ರತಿಯು ನೀರನ್ನು ಕೂಡ ಸೋಸಿ ಕುಡಿಯಬೇಕು. ಇದರಿಂದ ಅನೇಕ ಸೂಕ್ಷ್ಮಜೀವಿಗಳನ್ನು ರಕ್ಷಿಸಿದಂತೆ ಆಗುವುದು. ಅಲ್ಲದೆ ಸೋಸಿದ ನೀರಿನ ಉಪಯೋಗದಿಂದ ಸಾಂಕ್ರಾಮಿಕ ರೋಗಗಳಿಗೂ ತಡೆಯನ್ನು ಒಡ್ಡಿದಂತೆ ಆಗುವುದು.

**ಸತ್ಯಾಣುವ್ರತ :–** ಜೈನಧರ್ಮದ ದೃಷ್ಟಿಯಿಂದ ಇದೊಂದು ಸ್ವತಂತ್ರ ವ್ರತವೆನ್ನಿಸುವುದು. ಅಹಿಂಸೆಯನ್ನು ಪೋಷಿಸುವ ವ್ರತವಾಗಿದೆ. ಯಾವುದನ್ನು ಹೇಗೆ ಕಂಡಿರುವೆವೋ ಹೇಗೆ ಕೇಳಿರುವೆವೋ ಹಾಗೆಯೇ ಹೇಳುವುದು. ಸತ್ಯ ವಚನವೆನಿಸುವುದು. ಇಂಥ ಸತ್ಯ ಮಾತಿನಿಂದ ಇನ್ನೊಬ್ಬರ ಮನಸ್ಸು ನೋಯುತ್ತಿದ್ದರೆ ಸುಮ್ಮನಿರುವುದೇ ಒಳಿತೆಂದು ಜೈನ ಆಚಾರಶಾಸ್ತ್ರವು ಹೇಳುತ್ತಿದೆ. ಒಟ್ಟಾರೆ ಹಿಂಸೆಯಾಗದಂತೆ ನಮ್ಮ ಮಾತುಗಳು ಇರಬೇಕು. ಅವು ಹಿತ, ಮಿತ, ಮೃದು, ಮಧುರವಾಗಿರಬೇಕು.

**ಅಚೌರ್ಯಾಣುವ್ರತ :–** ಅನ್ಯರ ಪದಾರ್ಥವನ್ನು ಕಳುವಿನ ಉದ್ದೇಶದಿಂದ ತಕ್ಕೊಳ್ಳುವುದು, ತಕ್ಕೊಂಡು ಇನ್ನೊಬ್ಬರಿಗೆ ಕೊಡುವುದು ಚೌರ್ಯವೆನಿಸುವುದು. ಇದನ್ನು ತ್ಯಾಗಮಾಡಿದ ಶ್ರಾವಕನು ಅಚೌರ್ಯಣುವ್ರತಿಯೆನಿಸುವನು. ಇಂಥವನು



1) ಯಾವ ಕಳ್ಳನಿಗೂ ಸಹ ತಾನು ಪ್ರೋತ್ಸಾಹ ಕೊಡಕೂಡದು 2) ಕಳುವಿನ ವಸ್ತುಗಳನ್ನು ಕೊಳ್ಳಬಾರದು 3) ತೂಕ-ಮಾಪುಗಳನ್ನು ಚಿಕ್ಕದಾಗಲಿ ದೊಡ್ಡದಾಗಲಿ ಉಪಯೋಗಿಸಬಾರದು. ಒಳ್ಳೆಯ ಪದಾರ್ಥಗಳಲ್ಲಿ ಕಡಿಮೆ ತರಗತಿಯ ವಸ್ತುಗಳನ್ನು ಸೇರಿಸಿ ಮಾರಕೂಡದು 4) ರಾಜ್ಯದಲ್ಲಿ ದುರವಸ್ಥೆಯುಂಟಾದಾಗ, ಬರಗಾಲ ಬಂದಾಗ ತನ್ನಲ್ಲಿರುವ ವಸ್ತುಗಳನ್ನು ಹೆಚ್ಚಿನ ದರದಿಂದ ಕೊಡುವುದೂ ಕೂಡ ಕಳುವಿನಲ್ಲಿಯೇ ಬರುವುದು, ಇಲ್ಲಿ ವ್ಯಾಪಾರವನ್ನು ಲಕ್ಷದಲ್ಲಿಟ್ಟುಕೊಂಡು ಈ ಕೆಲವು ಮಾತುಗಳನ್ನು ಹೇಳಿದೆ. ಉಳಿದ ಉದ್ಯೋಗಗಳಲ್ಲಿ ಕೂಡ ತನ್ನಿಂದ ಅಚೌರ್ಯಾಣುವ್ರತಕ್ಕೆ ಬಾಧಕವಾಗುವಂತಹ ಚಾರಿತ್ರವಿರಬಹುದು. ತನ್ನದಲ್ಲದ ವಸ್ತುಗಳನ್ನು ಅಪಹರಿಸದಿರುವುದು ಅಚೌರ್ಯಾಣು ವ್ರತ.

**ಸ್ವದಾರ ಸಂತೋಷಾಣು ವ್ರತ (ಬ್ರಹ್ಮಚರ್ಯ) :–**

ವಿಧಿಪೂರ್ವಕ ಮದುವೆಯಾದ ಸ್ವಸ್ತ್ರೀಯಲ್ಲಿ ಮಾತ್ರ ಸಂತೋಷವನ್ನು ಅನುಭವಿಸಬೇಕು. ಮಿಕ್ಕೆಲ್ಲಾ ಸ್ತ್ರೀಯರನ್ನು ಅಕ್ಕ ತಂಗಿ ಮಗಳು ತಾಯಂದಿರಂತೇ ಭಾವಿಸಿರಬೇಕು. ವಿಷಯಭೋಗಾಕಾಂಕ್ಷೆ ಎಂಬುದು ಮಹಾ ಕೆಡುಕನ್ನುಂಟು ಮಾಡುವಂತಹದು. ಈ ಮಾಯಾಜಾಲಕ್ಕೆ ವಶವಾದವರು ತಮ್ಮ ನೈಜಗುಣವನ್ನು ಕಳೆದುಕೊಳ್ಳುವರು. ಆದುದರಿಂದ ಗೃಹಸ್ಥನು ತನ್ನ ಗೃಹಿಣಿಯಲ್ಲಿ ಮಾತ್ರ ಹಿತ ಮಿತವಾದ ಭೋಗವನ್ನು ಅನುಭವಿಸಬಹುದು. ಹಾಗೂ ವ್ರತ, ನೌಂಪಿ, ಪರ್ವಕಟ್ಟಲೆಗಳಲ್ಲಿ ಬ್ರಹ್ಮಚಾರ್ಯವನ್ನುಪಾಲಿಸಿ ಜ್ಞಾನಮಾರ್ಗದಲ್ಲಿ ಚರಿಸುತ್ತಾ ಇಹಪರ ಸಾಧನೆ ಮಾಡಿಕೊಳ್ಳಲು ಶ್ರಾವಕನಿಗೆ ಅವಕಾಶ ಉಂಟು.

**ಪರಿಗ್ರಹ ಪರಿಮಾಣುವ್ರತ :–** ಸ್ತ್ರೀ, ಪುತ್ರ, ಧನ, ದ್ರವ್ಯ ಮೊದಲಾದ ವಸ್ತುಗಳಲ್ಲಿ ಅವು ತನ್ನವೆಂದು ಮಹತ್ವವನ್ನು ಇಡುವುದರ ಪರಿಣಾಮವೇ ಪರಿಗ್ರಹವಾಗಿದೆ. ಈ ಮಹತ್ವಕ್ಕೊಂದು ಮಿತಿಯನ್ನಿಟ್ಟುಕೊಳ್ಳುವುದೇ ಪರಿಗ್ರಹ ಪರಿಮಾಣುವ್ರತವಾಗಿದೆ. ಜಗತ್ತಿನಲ್ಲಿರುವ ವಸ್ತುಗಳೆಲ್ಲ ಪರಿಗ್ರಹವೆಂದು ಹೇಳುವರು. ನಿಜವಾಗಿ ನೋಡಿದರೆ ಅವು ಪರಿಗ್ರಹಗಳಲ್ಲ. ಅವು ಪರಿಗ್ರಹಗಳಾಗಿದ್ದರೆ. ಬಡವನು ಪರಿಗ್ರಹ ಪರಿಮಾಣವ್ರತಿಯಾಗಬೇಕಿತ್ತು. ಆದರೆ ಹಾಗಿಲ್ಲ. ಹತ್ತಿರ ಏನೂ ಇಟ್ಟುಕೊಳ್ಳದವನು ಕೂಡ ಅನೇಕ ವಸ್ತುಗಳ ಸಂಪಾದನೆಯ ಆಕಾಂಕ್ಷೆಯಲ್ಲಿದ್ದರೆ ಆತನು ಪರಿಗ್ರಹವುಳ್ಳವನೆನಿಸಿಸುವನು. ಅದೇ ಸಿರಿವಂತನಿದ್ದು ಕೂಡ ಅವನು ತನ್ನಲ್ಲಿರುವ ಸುಖಸಾಧನೆಗಳ ವಿಷಯಕ್ಕೆ ಆಸಕ್ತಿಯನ್ನು ಇಟ್ಟುಕೊಳ್ಳದೆ ಇದ್ದರೆ ಅವನು ಪರಿಗ್ರಹ ಪರಿಮಾಣು ವ್ರತಿಕನೆನಿಸುವನು. ಅದರಿಂದ ವಸ್ತುಗಳ ವಿಷಯಕ್ಕೆ

ನಮ್ಮಲ್ಲಿರುವ ಮಮತ್ವಭಾವವೇ ಪರಿಗ್ರಹ ಎನಿಸುವುದು. ಯಾವ ರೀತಿ ಬಾಹ್ಯ ವಸ್ತುಗಳಾದ ಧನ, ಧಾನ್ಯಗಳು ಪರಿಗ್ರಹಕ್ಕೆ ಕಾರಣ ಮಾತ್ರ ಆಗಿರುವುದೋ ಹಾಗೆಯೇ ಕಾಮ, ಕ್ರೋಧ, ಮದ, ಮೋಹಗಳು ಅಭ್ಯಂತರ ಪರಿಗ್ರಹಗಳಾಗಿವೆ. ಇವುಗಳ ಮೇಲೆಯೂ ಸಹ ನಿಯಂತ್ರಣವು ಅವಶ್ಯವಾಗಿದೆ. ಇದಕ್ಕೊಂದು ಉಪಾಯವಿದೆ. ಮನುಷ್ಯನು ತನಗೆ ಬೇಕಾಗುವಷ್ಟು ವಸ್ತುಗಳ ಒಂದು ಮರ್ಯಾದೆಯನ್ನು ಕಲ್ಪಿಸಿಕೊಳ್ಳಬೇಕು; ಅದಕ್ಕಿಂತ ಹೆಚ್ಚಿನವುಗಳನ್ನು ತನ್ನ ಹತ್ತಿರ ಇಟ್ಟುಕೊಳ್ಳಬಾರದು. ಇದರಿಂದ ಮನುಷ್ಯನು ಸ್ವತಃ ಸುಖಿಯಾಗುವುದಲ್ಲದೆ ಸಮಾಜ ರಾಷ್ಟ್ರಗಳೂ ಸುಖಿಯಾಗುವುವು.

ಹೀಗೆ ಶ್ರಾವಕನು ಆಚಾರ ಮತ್ತು ವಿಚಾರ ಶೀಲನಾಗಿ ಬಾಳಿದರೆ ಅವನ ಬಾಳು ಬಂಗಾರವಾಗುತ್ತದೆ. ಶ್ರಾವಕ ಎಂದರೆ ಶ್ರದ್ಧಾವಂತನೂ ವಿಚಾರಶೀಲನೂ ಕ್ರಿಯಾಶಾಲಿಯೂ ಆದವನೆಂದೂ ಅದೇ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರ ಪಾಲಕನೆಂದೂ, ಇದರ ಗುರುತಾದ ಯಜ್ಞೋಪವನ್ನು ಧರಿಸಿ ತನ್ನ ಜೀವನವನ್ನು ಒಂದು ನಿಜವಾದ ಧಾರ್ಮಿಕವಾದ ಚೌಕಟ್ಟಿಗೆ ಒಳಪಡಿಸಿಕೊಂಡು ಕೆಸರಿನಲ್ಲಿ ಹುಟ್ಟಿದರೂ ತಾವರೆಯಂತೇ ಪವಿತ್ರವಾಗಿಯೂ, ಎಣ್ಣೆಗೈ ಮಾಡಿಕೊಂಡು ಹಲಸಿನಹಣ್ಣನ್ನು ಬಿಚ್ಚುವವನಂತೆಯೂ ಈ ಸಂಸಾರದಲ್ಲಿ ಅಂಟಿಯೂ ಅಂಟದವನಂತೆ ಬಾಳುತ್ತಾ ದೇವಪೂಜೆ, ಗುರುಸೇವೆ, ಸ್ವಾಧ್ಯಾಯ ಸಂಯಮ, ತಪ ಮತ್ತು ದಾನಾದಿಕ್ರಿಯೆಗಳಿಂದ ಶ್ರಾವಕೋತ್ತಮನೆನಿಸುತ್ತಾನೆ. ಈ ಪಾಕ್ಷಿಕ ಶ್ರಾವಕನೇ ಮುಂದೆ ದಾರ್ಶನಿಕ, ವ್ರತಿಕಾದಿ ಹನ್ನೊಂದು ರೀತಿಯ ನೆಲೆಗಳನ್ನು ಏರಿ ನೈಷ್ಠಿಕನಾಗಿ ಮುಂದೆ ಮುನಿಯಾಗಿ ಸರ್ವಾರಂಭಪರಿತ್ಯಾಗಿಯಾಗಿ ಸದಾ ಜ್ಞಾನ ಧ್ಯಾನ ತಪಗಳನ್ನು ಮಾಡಲು ಅರ್ಹನಾಗುತ್ತಾನೆ.

ಶ್ರಾವಕನೇ ಅಂತಿಮ ಸಮಯದಲ್ಲಿ (ಮರಣ ಕಾಲದಲ್ಲಿ) ಧರ್ಮ ಭಾವನೆಯಿಂದ ಭಗವಧ್ಯಾನದಿಂದ ಸಮಾಧಿ ಪೂರ್ವಕ ಮರಣಹೊಂದುವಂತಹ ನಿಷ್ಠನೇ ಸಾಧಕ ಶ್ರಾವಕನೆನಿಸುತ್ತಾನೆ. ಇಂತಹ ಸಾಧಕನಿಗೆ ಸದ್ಗತಿ ಪ್ರಾಪ್ತಿಯಾಗುವುದಂತೂ ನಿಜ.



# 17. ವೀರವಾಣಿ ಜಯಂತಿ

ಅನಾದಿ ಕಾಲದಿಂದಲೂ ಪರಂಪರಾನುಗತವಾಗಿ ಬಂದ ಶ್ರೀ ಜಿನಧರ್ಮದ ತೀರ್ಥಪ್ರವರ್ತಕರಲ್ಲಿ ವರ್ತಮಾನಕಾಲದ ಕೊನೆಯವರಾದ ಭಗವಾನ್ ಮಹಾವೀರರು ಒಬ್ಬರು. ಇವರು ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಸರ್ವ ಸಂಗ ಪರಿತ್ಯಾಗಿಗಳಾಗಿ ಹನ್ನೆರಡು ವರ್ಷ ಘೋರವಾದ ತಪಸ್ಸನ್ನು ಮಾಡಿದರು. ಆತ್ಮನಿಗೆ ಅಂಟಿದ್ದ ಜ್ಞಾನಾವರಣ, ದರ್ಶನಾವರಣ, ಮೋಹನೀಯ ಮತ್ತು ಅಂತರಾಯಗಳೆಂಬ ಘೋರ ಕರ್ಮಗಳನ್ನು ಶುಕ್ಲ ಧ್ಯಾನದ ಬಲದಿಂದ ನಾಶಮಾಡಿದರು. ಆಗ ಅವರಿಗೆ ಕೇವಲ ಜ್ಞಾನ, ಕೇವಲದರ್ಶನ, ಅಮಿತಸುಖ, ಅಮಿತಶಕ್ತಿಗಳು ಉಂಟಾದುವು. ಆಗ ಅವರು ಸರ್ವಜ್ಞರಾದರು. ಸ್ವಾತ್ಮೋಪಲಬ್ಧಿಯನ್ನು ಪಡೆದರು. ಕೂಡಲೇ ಅವರ ಪರಮೌದಾರಿಕ ದಿವ್ಯ ಶರೀರವು ಐನೂರು ಬಿಲ್ಲು ಎತ್ತರದ ಆಕಾಶದಲ್ಲಿ ನಿಂತಿತು. ಕರ್ಮ ನಿರ್ಮೂಲನ ಮಾಡಿದವರ ಆತ್ಮವು ಶರೀರಧಾರಿಯಾದರೂ ಲಘುವಾಗಿ ಊರ್ಧ್ವಗಮನ ಉಳ್ಳದ್ದಾಗಿರುತ್ತದೆ. ಆದರೆ ಮುಕ್ತಿಪುರಕ್ಕೆ ಹೋಗಲು ಅದೂ ಬೇಕಿಲ್ಲ. ಕೇವಲ ನಿರಂಜನಾತ್ಮವೇ ಹೋಗುತ್ತದೆ.

ಸಂಪ್ರದಾಯದಂತೆ ದೇವೇಂದ್ರನ ಅಪ್ಪಣೆಯಿಂದ ಕುಬೇರನು ಇಂದ್ರ ನೀಲಮಣಿಯಿಂದ ಸವಿಸ್ತಾರವಾದ ಸಮವಸರಣ ಮಂಟಪವನ್ನು ರಚಿಸಿದನು. ವರ್ಧಮಾನರು ಆ ವೈಭವವನ್ನು ಅಪೇಕ್ಷಿಸದೇ ಇದ್ದರೂ ಭಕ್ತರು ತಮ್ಮ ಭಕ್ತಿಭಾವವನ್ನು ಅನೇಕ ವಿಧದಲ್ಲಿ ಅರ್ಪಿಸಿ ತಮ್ಮ ಆತ್ಮಲಾಭದ ಉಪಾಯವನ್ನು ಕೇಳಲು ಅಪೇಕ್ಷಿಸಿದರು. ಗಂಧಕುಟಿಯ ತ್ರಿಮೇಖಲಾಪೀಠದ ಮೇಲಿನ ಸಹಸ್ರದಳ ಕಮಲಕ್ಕೆ ಸೋಂಕದೇ ನಾಲ್ಕು ಬೆರಳ ಮೇಲಿನ ಅಂತರದಲ್ಲೇ ವಿರಾಜಮಾನರಾದರು. ಅವರ ಮೇಲೆ ಮುಕ್ಕೊಡೆ ಅರಳಿತು, ಪ್ರಭಾವಲಯವು ಪ್ರಕಾಶಮಾನವಾಯಿತು. ವೀರರು ಪರಮ ಪರಂಜ್ಯೋತಿಗಳೂ, ಕೋಟಿ ಚಂದ್ರಾದಿತ್ಯಪ್ರಕಾಶರೂ ಆಗಿ ಸಮವಸರಣವನ್ನು ಬೆಳಗಿದರು.

ಸುರ-ನರರೆಲ್ಲಾ ಸಭೆಯಲ್ಲಿ ಸೇರಿದ್ದಾರೆ. ಭವ್ಯಜನರ ಅಪೇಕ್ಷೆಯಂತೆ ಉಪದೇಶ ಮಾಡುವ ದಿವ್ಯಧ್ವನಿ ಹೊರಡಲಿಲ್ಲ. ಕಾರಣ ಅಲ್ಲಿ ಭಗವಂತನ ಓಂಕಾರ

ಧ್ವನಿಯನ್ನು ಗ್ರಹಿಸಿ, ಅದರ ಅರ್ಥವಿವರಣೆಯನ್ನು ಪ್ರಸಾರಮಾಡುವ ಮನಃಪರ್ಯಾಯ ಜ್ಞಾನಿಗಳಾದ ಗಣಧರರಿರಲಿಲ್ಲ. ದ್ವಾದಶಗಣಕೂಟಕ್ಕೆ ಒಡೆಯರಾದ ಗಣಧರರಿರಲಿಲ್ಲ. ಅದಕ್ಕಾಗಿಯೇ 66 ದಿನಗಳು ವರೆಗೂ ಸಮವಸರಣದಲ್ಲಿ ಮೌನವೇ ಆವರಿಸಿತ್ತು. ಈ ಸೂಕ್ಷ್ಮವನ್ನು ಅರಿತ ಸೌಧರ್ಮೇಂದ್ರನು ಗಣಧರರಾಗುವ ಅರ್ಹತೆಯುಳ್ಳವರನ್ನು ಶೋಧಿಸಿ ಕರೆತರಲು ಹೊರಟನು. ಆ ಕಾಲಕ್ಕೆ ವಿದ್ಯಾನಿಪುಣರಾದ, ಶಾಸ್ತ್ರಪಾರಂಗತರಾದ ಪಾರ್ಶ್ವ ಭಟ್ಟಾರಕರ ಹತ್ತಿರ ಹೋದಾಗ ಅವರು ಮಾನಕಷಾಯದಿಂದ ದೇವೇಂದ್ರನನ್ನು ತಿರಸ್ಕರಿಸಿದರು. 'ನನ್ನನ್ನು ಕರೆಯಲು ಸಕಲ ಮರ್ಯಾದೆ ಪಲ್ಲಕ್ಕಿ, ಚಾಮರವಿಲ್ಲದೆ ಬಂದಿದ್ದೀಯೇ? ನಾನೇನು ಸಾಮಾನ್ಯನೇ' ಎಂದು ಜರಿದರು. ದೇವೇಂದ್ರನು ಅವರನ್ನು ಕಂಡಾಗಲೇ 'ಬನ್ನಿ, ನೀವು ಮೈ ಬತ್ತಲೆ ಮನ ಕತ್ತಲೆಯುಳ್ಳವರು. ಭಾವಲಿಂಗಿಗಳಲ್ಲ, ದ್ರವ್ಯಲಿಂಗಿಗಳು. ನಿಮ್ಮಿಂದ ನಮ್ಮ ಉದ್ದೇಶ ನೆರವೇರುವುದಿಲ್ಲ' ವೆಂದು ಮುಂದೆ ಹೊರಟನು.

ಒಂದು ಕಡೆ ಇಂದ್ರಭೂತಿ ಎಂಬ ಬ್ರಾಹ್ಮಣರು ತನ್ನ ಐನೂರು ಮಂದಿ ಶಿಷ್ಯರೊಂದಿಗೆ ಗೌತಮ ಗ್ರಾಮದ ಬಳಿ ಇರುವುದನ್ನು ಕಂಡನು. ಆತನನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಈತನಲ್ಲಿ ಗಣಧರನಾಗುವ ಯೋಗ್ಯತೆ ಇದೆ. ಸ್ವಲ್ಪ ಅಜ್ಞಾನದ ಪರೆ ಹರಿದರೆ ಸಾಕು, ಈತ ಸಮವಸರಣಕ್ಕೆ ಬಂದರೆ ಸಾಕು. ತಾನಾಗಿಯೇ ಸುಜ್ಞಾನ ಉದಯವಾಗಿ ಮನಃಪರ್ಯಾಯ ಜ್ಞಾನ ಪಡೆಯುವನೆಂದು ತನ್ನ ಅವಧಿಯಿಂದ ದೇವೇಂದ್ರನು ತಿಳಿದನು. ಆಗ ಅವನು ಓರ್ವ ವೃದ್ಧ ಬ್ರಾಹ್ಮಣನ ವೇಶದಿಂದ ಇಂದ್ರಭೂತಿಯ ಬಳಿಗೆ ಹೋದನು. ಈ ವೃದ್ಧನು ಬಂದ ಕಾರಣವನ್ನು ಆ ಇಂದ್ರಭೂತಿಯು ಕೇಳಲು- 'ಸ್ವಾಮಿ ನನಗೆ ಒಂದು ಧರ್ಮದ ಸೂಕ್ಷ್ಮವನ್ನು ತಿಳಿಸುವ ಶ್ಲೋಕದ ಅರ್ಥ ಗೊತ್ತಾಗದೆ, ಎಷ್ಟೋ ಕಡೆ ತಿರುಗಿದೆ. ಅದರ ಅರ್ಥವನ್ನು ತಿಳಿಸುವ ವಿದ್ವಾಂಸರಾರೂ ನನಗೆ ಸಿಗಲಿಲ್ಲ. ತಮ್ಮ ಪ್ರಖ್ಯಾತಿಯನ್ನು ಕೇಳಿ ಇಲ್ಲಿಗೆ ಬಂದು ತಮ್ಮನ್ನು ನೋಡಿದರೆ ಅದು ತಮ್ಮಿಂದ ಸಾಧ್ಯವೋ ಇಲ್ಲವೋ ಎಂಬ ಅನುಮಾನವಾಗುತ್ತಿದೆ' ಎಂದನು.

ಇಂದ್ರಭೂತಿಯು- 'ಅಯ್ಯಾ, ನನ್ನಂತಹವನಿಗೂ ತಿಳಿಯದೆಂದು ಅನುಮಾನಿಸುವ ಅಂತಹ ಸಮಸ್ಯೆ ಯಾವುದು ಹೇಳು' ಎಂದನು.

ಇಂದ್ರ:- ಸ್ವಾಮಿ, ತಾವು ಒಂದು ಒಪ್ಪಂದಕ್ಕೆ ಬಂದರೆ ಹೇಳುತ್ತೇನೆ.

ಗೌತಮ:- ಅದೇನು ಹೇಳು.



ಇಂದ್ರ:- ತಾವು ಇದಕ್ಕೆ ಅರ್ಥವನ್ನು ಹೇಳದಿದ್ದರೆ...!

ಗೌತಮ:- ಹೇಳದಿದ್ದರೆ...! ಏಕೆ ಅನುಮಾನವೇ? ಹೇಳು...

ಇಂದ್ರ:- ಅದರ ಅರ್ಥವನ್ನು ಹೇಳುವವರನ್ನು ಹುಡುಕಿಕೊಂಡು ಹೋಗಲು ತಾವೂ ನನ್ನೊಂದಿಗೆ ಬರಬೇಕು.

ಗೌತಮ:- ಅಯ್ಯಾ, ವಿದ್ಯೆಗೆ ಪಕ್ಷಪಾತವೇ? ಹೇಳು. ನನಗೂ ಅರ್ಥವಾಗದಿದ್ದ ಪಕ್ಷದಲ್ಲಿ ತಾನೇ? ನಿನಗಿನ್ನೂ ನನ್ನ ಪರಿಚಯವಿಲ್ಲ. ಆಗಲಿ, ನೀನು ಹೇಳಿದಂತೆಯೇ ಆಗಲಿ.

ಆಗ ಇಂದ್ರನು ಗೌತಮರು ತನ್ನ ದಾರಿಗೆ ಬಂದರೆಂದು ತಿಳಿದು ಜೈನಧರ್ಮದ ಸಾರಸರ್ವಸ್ವವೂ ಅಡಕವಾಗಿರುವ ಒಂದು ಶ್ಲೋಕವನ್ನು ಹೇಳುತ್ತಾನೆ.

ತ್ರೈಕಾಲ್ಯಂ ದ್ರವ್ಯಷಟ್ಕಂ ನವಪದಸಹಿತಂ ಜೀವಷಟ್ಕಾಯಲೇಶ್ಯಾಃ
ಪಂಚಾನ್ಯೇ ಚಾಸ್ತಿಕಾಯಾಃ ವ್ರತಸಮಿತಿಗತಿ ಜ್ಞಾನಚಾರಿತ್ರ ಭೇದಾಃ।
ಇತ್ಯೇತನ್ಮೋಕ್ಷಮೂಲಂ ತ್ರಿಭುವನಮಹಿತೈಃ ಪ್ರೋಕ್ತಮರ್ಹದ್ಭಿರೀಶೈಃ
ಪ್ರತ್ಯೇತಿ ಶ್ರದ್ಧಧಾತಿ ಸ್ಪೃಶತಿ ಚ ಮತಿಮಾನ್ ಯಃ ಸ ವೈ ಶುದ್ಧದೃಷ್ಟಿಃ॥

'ಇಷ್ಟೇ ಸ್ವಾಮಿ. ತಾವು ಇದರ ಅರ್ಥವನ್ನು ವಿವರಿಸಬೇಕು' ಎಂದನು. ಇದನ್ನು ಕೇಳುತ್ತಲೇ ಗೌತಮನ ತಲೆ ಚಕ್ರದಂತೆ ಸುತ್ತಲಾರಂಭಿಸಿತು. ಏನಿದು! ಇಷ್ಟು ಕ್ಲಿಷ್ಟವಾಗಿದೆಯಲ್ಲಾ. ತ್ರಿಕಾಲ :- ಭೂತ, ಭವಿಷ್ಯತ್, ವರ್ತಮಾನಕಾಲ, ದ್ರವ್ಯಷಟ್ಕಂ ಎಂದರೆ...ಏನೂ ಗೊತ್ತಾಗುವುದಿಲ್ಲವಲ್ಲಾ, ಎಂದು ಆ ವೃದ್ಧನನ್ನು ಕುರಿತು 'ಅಯ್ಯಾ ಇದರಲ್ಲಿ ಏನೋ ಚಮತ್ಕಾರವಿದೆ. ಇದು ಜೈನಧರ್ಮದ ಸಿದ್ಧಾಂತದ ಮುದ್ದೆ. ಇದು ಕೇವಲ ಅತಿಶಯವನ್ನು ಪಡೆದ ಮಹಾವೀರನಿಗೆ ಗೊತ್ತು. ನಡೆ, ನಾನು ಈ ಜಾಲದಲ್ಲಿ ಸಿಕ್ಕಿದೆ...ನನಗೂ ಇದರ ಅರ್ಥವನ್ನು ತಿಳಿಯಬೇಕೆನಿಸಿದೆ. ನನ್ನ ಬಂಡವಾಳದಲ್ಲಿ ಇದಕ್ಕೆ ವ್ಯಾಖ್ಯಾನ ಸಿಕ್ಕದು. ನಡೆ, ಮಹಾವೀರರಲ್ಲಿಗೆ ಹೋಗೋಣವೆಂದು ತನ್ನ ಐನೂರು ಮಂದಿ ಶಿಷ್ಯರಿಗೂ ಹೊರಡಲು ಆಜ್ಞೆ ಮಾಡಿದರು.

ದೇವೇಂದ್ರನು ಹರ್ಷಿತನಾಗಿ ಸೀದಾ ಮಹಾವೀರರ ಸಮವಸರಣದತ್ತ ನಡೆದನು. ಆ ವೇಳೆಗೆ ಗೌತಮನಲ್ಲಿ ಕ್ಷಯೋಪಶಮವು ಉಂಟಾಗಿತ್ತು.

ಸಮವಸರಣವನ್ನು ತಲುಪಿ ಭಗವಂತನ ಎದುರಿಗಿದ್ದ ಮಾನಸ್ತಂಭವನ್ನು

ನೋಡುತ್ತಿದ್ದಂತೆಯೇ ತನ್ನ ವಿದ್ಯಾಭಿಮಾನ, ಮೂಢನಂಬಿಕೆ ಮತ್ತು ಅಜ್ಞಾನವೆಲ್ಲಾ ನಾಶವಾಯಿತು. ತದನಂತರ ಶುದ್ಧಭಾವದಿಂದ ವೀರಸ್ವಾಮಿಯನ್ನು ಕಂಡು ನಮಸ್ಕರಿಸಿ, ಭಗವಂತನ ಮಹಿಮೆಯನ್ನು ಮನಸಾರೆ ಮನದಲ್ಲೇ ಸ್ಮರಿಸಿದ ಕೂಡಲೇ ಸಂಸಾರ, ಶರೀರ, ಭೋಗಗಳಲ್ಲಿ ವೈರಾಗ್ಯ ಉಂಟಾಗಿ ತೊಟ್ಟ ಬಟ್ಟೆಯನ್ನು ಕಿತ್ತು ಬದಿಗೊಗೆದಾಗಲೇ ಮನಃಪರ್ಯಾಯ ಜ್ಞಾನ ಉಂಟಾಯಿತು. ಕೂಡಲೇ ದೇವೇಂದ್ರನು ಜಯಕಾರ ಮಾಡಿದನು. ಆಗ ಗೌತಮರಿಗೆ ಇಂದ್ರನ ಚಮತ್ಕಾರ ಗೊತ್ತಾಯಿತು. ತಾವು ಭಗವಂತನ ಪಕ್ಕದಲ್ಲಿ ಗಣಧರ ಕೋಷ್ಠದಲ್ಲಿ ವಿರಾಜಮಾನರಾದರು. ಅವರ ತಮ್ಮಂದಿರಾದ ಅಗ್ನಿಭೂತಿ, ವಾಯುಭೂತಿಗಳೂ ಧರ್ಮನಿಷ್ಠರಾಗಿ ಮುನಿಗಳಾದರು. ಮಿಕ್ಕ ಶಿಷ್ಯರೂ ಧರ್ಮಾನುಯಾಯಿಗಳಾಗಿ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತರು. ದೇವೇಂದ್ರನು ಭಗವಂತನನ್ನು ಅನೇಕ ಸ್ತೋತ್ರಗಳಿಂದ ಕೊಂಡಾಡಿ ಧರ್ಮೋಪದೇಶವನ್ನು ಕರುಣಿಸಬೇಕೆಂದು ಬೇಡಿಕೊಂಡನು. ಭಗವಂತನಿಗೆ ಇದಾವುದೂ ಬೇಕಾಗದಿದ್ದರೂ ಲೋಕ ಕಲ್ಯಾಣಾರ್ಥವಾಗಿ, ಇರುವ ಆಯುಷ್ಯವನ್ನು ಧರ್ಮಪ್ರಭಾವನೆಗಾಗಿ ಕಳೆಯಲು ಜಗತ್ತಿನ ಜೀವಿಗಳ ದುಃಖದ ನಿವಾರಣೆಯ ಉಪಾಯವನ್ನು ತಿಳಿಸುವ ಧರ್ಮಾಮೃತ ಗಂಗೆಯನ್ನು ಓಂಕಾರ ದಿವ್ಯಧ್ವನಿಯ ಮೂಲಕ ಹರಿಸಿದರು. ಅದನ್ನು ಗ್ರಹಿಸಿದ ಗೌತಮ ಗಣಧರರು ಅಲ್ಲಿದ್ದವರಿಗೆಲ್ಲಾ ಅರ್ಥವಾಗುವಂತೆ ವ್ಯಾಖ್ಯಾನ ಮಾಡಿದರು. ಮೊದಲು ಇಂದ್ರನು ಗೌತಮರಿಗೆ ಕೇಳಿದ್ದ ಶ್ಲೋಕದ ಅರ್ಥವನ್ನೇ ವಿವರಿಸಿದರು. ಇದೇ ಜೈನಧರ್ಮದ ಸಾರಸರ್ವಸ್ವ ಎಂದು ಗೌತಮರು ತಿಳಿಸಿದರು. ಅದರ ಸ್ಥೂಲ ಅರ್ಥ ಹೀಗಿದೆ:

**ತ್ರೈಕಾಲ್ಯಂ** :– ಭೂತ, ಭವಿಷ್ಯತ್ ವರ್ತಮಾನವೆಂಬ ಮೂರು ಕಾಲಗಳು.

**ದ್ರವ್ಯಷಟ್ಕಂ** :– ಜೀವ, ಅಜೀವ, ಧರ್ಮ, ಅಧರ್ಮ, ಆಕಾಶ, ಕಾಲ ಎಂಬ ಆರು ದ್ರವ್ಯಗಳು.

**ನವಪದಸಹಿತಂ** :– ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷ, ಪಾಪ, ಪುಣ್ಯ ಎಂಬವು ಒಂಭತ್ತು ಪದಾರ್ಥಗಳು.

**ಜೀವಷಟ್ಕಾಯ** :– ಪೃಥ್ವೀ, ಜಲ, ಅಗ್ನಿ, ವಾಯು, ವನಸ್ಪತಿ, ತ್ರಸ ಎಂಬ ಆರು ಜೀವ ಕಾಯಕಗಳು.

**ಷಡ್ ಲೇಶ್ಯಾ** :– ಕೃಷ್ಣ, ನೀಲ, ಕಪೋತ, ಪೀತ, ಪದ್ಮ, ಶುಕ್ಲ ಎಂಬ ಆರು ಲೇಶ್ಯಗಳು.



**ಪಂಚಾಸ್ತಿಕಾಯ** :– ಜೀವ, ಅಜೀವ, ಧರ್ಮ, ಅಧರ್ಮ, ಆಕಾಶ ಎಂಬ ಐದು ಅಸ್ತಿಕಾಯಗಳು.

**ಪಂಚವ್ರತ** :– ಅಹಿಂಸಾ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಐದು ವ್ರತಗಳು.

**ಪಂಚಸಮಿತಿ** :– ಈರ್ಯಾ, ಭಾಷಾ, ಏಷಣಾ, ಆದಾನನಿಕ್ಷೇಪಣಾ, ಉತ್ಸರ್ಗ.

**ಪಂಚಗತಿ** :– ದೇವ, ನರಕ, ಮನುಷ್ಯ, ತಿರ್ಯಂಚ ಮತ್ತು ಸಿದ್ಧ ಎಂಬ ಐದು ಗತಿಗಳು.

**ಪಂಚಜ್ಞಾನ** :– ಮತಿ, ಶ್ರುತ, ಅವಧಿ, ಮನಃಪರ್ಯಾಯ, ಕೇವಲ ಎಂಬ ಐದು ಜ್ಞಾನಗಳು.

**ಪಂಚಚಾರಿತ್ರ** :– ಸಾಮಾಯಿಕ, ಛೇದೋಪಸ್ಥಾಪನಾ, ಪರಿಹಾರ ವಿಶುದ್ಧಿ, ಸೂಕ್ಷ್ಮಸಾಂಪರಾಯ, ಯಥಾಖ್ಯಾತ ಎಂಬ ಐದು ಚಾರಿತ್ರಗಳು.

ಎಂಬುದಾಗಿ ಜೈನಸಿದ್ಧಾಂತದ ತತ್ತ್ವಗಳ ಸ್ಥೂಲಭೇದಗಳಾಗಿವೆ. ಇವುಗಳ ವಿಸ್ತಾರ ಅರ್ಥವನ್ನು ತಿಳಿದು ನಂಬಿ ಅದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಇವುಗಳ ಜ್ಞಾನವನ್ನು ಆತ್ಮನಿಗೆ ಸ್ಪರ್ಶಮಾಡಿಕೊಂಡಾಗಲೇ ಶುದ್ಧ ಸಮ್ಯಗ್ದೃಷ್ಟಿಯಾಗುವುದು. ಅಲ್ಲಿಂದಲೇ ಮುಕ್ತಿಮಾರ್ಗ ಮುಂದುವರಿಯುವುದು.

ಹೀಗೆ ಆ ಒಂದು ಶ್ಲೋಕದ ಅರ್ಥವನ್ನೂ ಸಂಬಂಧಿಸಿದ ಸಕಲ ವಿಷಯಗಳನ್ನೂ ಕ್ರಮಕ್ರಮವಾಗಿ ಮಹಾವೀರರು ಉಪದೇಶ ಮಾಡಿದರು. ಈ ವಾಣಿಯು ಪ್ರಾರಂಭವಾದುದು ಶ್ರಾವಣ, ಕೃಷ್ಣ, ಪಾಡ್ಯದ ಪ್ರಥಮ ಜಾವದಲ್ಲಿ. ಆಗ ಸಮವಸರಣವು ವಿಪುಲಾಚಲದ ಮೇಲಿತ್ತು. ಅಂದಿನ ನೆನಪಿಗಾಗಿ ಈಗಲೂ ಆ ದಿನವನ್ನು **ವೀರವಾಣಿ ಜಯಂತಿಯ ಪರ್ವವನ್ನಾಗಿ** ಆಚರಿಸುತ್ತಾರೆ.

ಮೇಲ್ಕಂಡ ಸಿದ್ಧಾಂತಸಾರಸರ್ವಸ್ವವನ್ನು ಗೌತಮ ಗಣಧರರು ಶ್ರುತರೂಪದಲ್ಲಿ ಸಂಗ್ರಹಿಸಿದರು. ಅವನ್ನೇ ಆಚಾರ್ಯರು ಪರಂಪರಾನುಗತವಾಗಿ ಗ್ರಂಥಗಳಲ್ಲಿ ಉಳಿಸಿಕೊಂಡು ಬಂದರು. ಇವುಗಳ ಸವಿಸ್ತಾರ ವರ್ಣನೆಯನ್ನು ತಿಳಿಯಲು ತತ್ತ್ವಾರ್ಥಸೂತ್ರ, ದ್ರವ್ಯಸಂಗ್ರಹ, ಪಂಚಾಸ್ತಿ ಕಾಯ, ಧವಲಗ್ರಂಥ, ಮಹಾಪುರಾಣ, ತಿಲೋಯಪಣ್ಣತ್ತಿ, ಶ್ರಾವಕಾಚಾರ ಮುಂತಾದುವುಗಳನ್ನು ಸ್ವಾಧ್ಯಾಯ ಮಾಡಬೇಕು. ಇವುಗಳ ಅಭ್ಯಾಸದಿಂದ ಸಂಸಾರಿ ಜೀವಿಯು

ಮುಕ್ತನಾಗುವ ಭೇದ ವಿಜ್ಞಾನವನ್ನು ಪಡೆಯಬಹುದು. ಆ ಶ್ಲೋಕವನ್ನು ಗಟ್ಟಿ ಮಾಡಿ ಅವುಗಳ ಅರ್ಥವನ್ನು ತಿಳಿದುಕೊಳ್ಳುವುದು ಒಳ್ಳೆಯದು. ಜೈನಸಿದ್ಧಾಂತದಲ್ಲಿ ಬಧ್ಧಾತ್ಮನು ಶುದ್ಧಾತ್ಮನಾಗುವ ಮಾರ್ಗೋಪಾಯವಿದೆ. ಅದು ಜಿನವಾಣಿಯ ಜ್ಞಾನಗಂಗೆ. ಅದರಲ್ಲಿ ಯಾರು ಬೇಕಾದರೂ ಸ್ನಾನ ಮಾಡಿ ತಮ್ಮನ್ನು ತಾವು ಪವಿತ್ರರನ್ನಾಗಿ ಮಾಡಿಕೊಳ್ಳಬಹುದು, ಶಕ್ತಿ ಇದ್ದಷ್ಟು ಪವಿತ್ರ ಜ್ಞಾನ ಜಲವನ್ನು ತುಂಬಿಟ್ಟುಕೊಳ್ಳಬಹುದು. ಒದಗಿರುವ ಮನುಜತ್ವ, ಜೈನತ್ವಗಳನ್ನು ವ್ಯರ್ಥಮಾಡಿಕೊಳ್ಳಬಾರದು. ಪೂರ್ವಾಚಾರ್ಯರು ಶ್ರಮಪಟ್ಟು ಬರೆದು ಇಟ್ಟಿರುವ ಶಾಸ್ತ್ರಗಳನ್ನೊಮ್ಮೆ ಓದಿದರೆ ಚಂಚಲವಾದ ಮನಸ್ಸನ್ನು ನಿಗ್ರಹಿಸಿ ಸಾತ್ವಿಕನಾಗಿ ಬಾಳಬಹುದು. ಆಗ ಹೊತ್ತು ತಂದ ಜನ್ಮ ಸಾರ್ಥಕವಾಗುವುದು.

## 18. ಧರ್ಮ ಪರಿಭಾಷೆ

ವಸ್ತುವಿನ ಸ್ವಭಾವವೇ ಧರ್ಮವಾಗಿದೆ. ಸಮ್ಯಗ್ದರ್ಶನಾದಿ ರತ್ನತ್ರಯವೂ ಧರ್ಮವಾಗಿದೆ. ಕ್ಷಮಾದಿ ಹತ್ತು ವಿಧಗಳ ಧರ್ಮವಾಗಿದೆ. ಅಹಿಂಸೆಯೇ ಶ್ರೇಷ್ಠ ಧರ್ಮವಾಗಿದೆ. ಹೀಗೆ ಧರ್ಮ, ಧರ್ಮದ ಪರಿಭಾಷೆ ಬಹು ವಿಸ್ತಾರವಾದುದು.

'ಧರ್ಮ'ವೆಂದರೆ ನಾವಿಂದು ಮೂಗು ಮುರಿಯುತ್ತೇವೆ. ಅದರ ಬಗ್ಗೆ ಬಹಳ ಹಗುರವಾಗಿ ಮಾತಾಡುತ್ತೇವೆ. ಅದಕ್ಕೆ ಕಾರಣ ಅದರ ಅರ್ಥವನ್ನು ನಾವು ಸರಿಯಾಗಿ ತಿಳಿಯದಿರುವುದೇ ಆಗಿದೆ. ಅದಕ್ಕೆ ಜಾತಿ ಎನ್ನುತ್ತ ಬಹಳ ಸೀಮಿತವಾದ ಅರ್ಥದಲ್ಲಿ ಅದನ್ನು ಬಳಸುತ್ತೇವೆ. 'ಧರ್ಮ'ವೆಂದರೆ ಜಾತಿ ಅಲ್ಲ. 'ಧೃ' ದಿಂದ ಧರ್ಮ ನಿಷ್ಪನ್ನವಾಗಿದೆ. 'ಧೃ'ದ ಅರ್ಥ ಧರಿಸು ಅಂದರೆ ಯಾವುದು ನಮ್ಮನ್ನು ಸುಸ್ಥಿತಿಯಲ್ಲಿರಿಸಿದೆಯೊ ಅದು ಧರ್ಮ. ಧರ್ಮಕ್ಕೆ ನಾವು ಇಂಥ ವಿಧವಿಧವಾದ ಅರ್ಥಗಳನ್ನು ಹೇಳಿದರೂ, ಈ ಅರ್ಥಗಳಲ್ಲಿ ಅದು ಬಂಧಿತವಾಗಿಲ್ಲ. ಅದರ ಅರ್ಥ ವಿಶಾಲವಾದುದು, ಧರ್ಮವು ಸಂಪೂರ್ಣವಾಗಿ ಮಾನವನನ್ನೇ ಆವರಿಸಿರುವ ಒಂದು ವಿಚಾರ ಪ್ರಣಾಲಿಯಾಗಿದೆ. ಅದು ಆತನ ಸಂಸ್ಕೃತಿಯ ಉದಯದೊಂದಿಗೇ ಬಂದಿದೆ. ನಮ್ಮೆಲ್ಲರ ಜೀವನದಲ್ಲಿ ಅದು ಹಾಸುಹೊಕ್ಕಾಗಿದೆ. ಅದೊಂದು ವಿಧದ ಮನೋಧರ್ಮವೇ ಆಗಿದೆ. ಆ ಮನೋಧರ್ಮವನ್ನು ನಾವು ಹೊರಗಿರಿಸಿ



ಬದುಕಲಾರೆವು. ನಮ್ಮ ನಡೆ-ನುಡಿಗಳಲ್ಲಿಯ ಆದರ್ಶಗಳೇ ಧರ್ಮವೆಂದರೂ ನಡೆದೀತು. ಅದೊಂದು ವಿಧದ ಸ್ವಭಾವಿಕ ವಿಶೇಷವೇ ಆಗಿದೆ. ಅದರ ಉದ್ದೇಶ ವ್ಯಕ್ತಿಯನ್ನು, ಸಮಾಜವನ್ನು ಉದ್ಧರಿಸುವುದಾಗಿದೆ. ಆತ್ಮನಿಗೆ ಅಂಟಿದ ಕರ್ಮವನ್ನು ಕಳೆದು, ಸಂಸಾರಿಕ ದುಃಖವನ್ನು ನಿವಾರಿಸಿ ಉತ್ತಮವಾದ ಸುಖವನ್ನು ನೀಡುವ ಸಾಧನೆಯೇ ಧರ್ಮ. ಧರ್ಮದ ಮೂಲ ಅಹಿಂಸೆಯಾಗಿದೆ.

ಧರ್ಮಕ್ಕೆ ಎರಡು ಮುಖಗಳಿವೆ. ಒಂದು ತತ್ವ, ಇನ್ನೊಂದು ಆಚಾರ. ಜೀವ ಜಗತ್ತು ಇವುಗಳ ಸ್ವರೂಪ ಸಂಬಂಧಗಳನ್ನು, ಜೀವಾತ್ಮನು ಪರಮಾತ್ಮನುನಾಗುವ ಸಮರಸದ ಅನುಭವವನ್ನು ಕಾಲ ಕಾಲಕ್ಕೆ ದಾರ್ಶನಿಕರು, ತತ್ವಜಿಜ್ಞಾಸುಗಳು ನಡೆಸಿದ ಚಿಂತನವೇ, ಧರ್ಮದ ತತ್ವಮುಖವಾಗಿದೆ. ಇನ್ನು ಆಚರಣೆ ಮುಖದಲ್ಲಿ ಈ ಕೃತಿಗಳಲ್ಲಿನ ತತ್ವಗಳನ್ನು ಅರಿತು ಅರಗಿಸಿಕೊಂಡು ಮಾನವ ತನ್ನ ದೈನಂದಿನ ಬದುಕಿನಲ್ಲಿ ಕ್ರಿಯಾಮುಖವಾಗಿ ಅಳವಡಿಸಿಕೊಂಡು ಆಚರಿಸಿ ತೋರಿಸುವುದಾಗಿದೆ. ಇದೇ ಬಹು ಮುಖ್ಯವಾದುದು. ಇವೆರಡೂ ಜ್ಞಾನ ಮತ್ತು ಕ್ರಿಯೆಗಳಿದ್ದ ಹಾಗೆ, ಜ್ಞಾನಕ್ಕೆ ಮಹತ್ವವಿರುವುದಕ್ಕಿಂತ-ಆ ಜ್ಞಾನವನ್ನು ಕ್ರಿಯೆಯಲ್ಲಿ ತಂದು ತೋರಿಸುವುದಕ್ಕೆ ಮಿಗಿಲಾದ ಸ್ಥಾನವಿದೆ. ಜ್ಞಾನವೇನೋ ಪುಸ್ತಕ ಓದಿದರೆ, ಇನ್ನೊಬ್ಬರ ಬಾಯಿಂದ ಕೇಳಿದರೆ ಬರುತ್ತದೆ. ಆದರೆ ಆ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಕಷ್ಟವಿದೆ. ಜ್ಞಾನಸಹಿತ ಆಚರಣೆ ಮಾಡಿದಾಗ ಮಾತ್ರ ನಾವು ಧರ್ಮವನ್ನು ಸರಿಯಾಗಿ ಅರ್ಥಯಿಸಿಕೊಂಡಂತಾಗುತ್ತದೆ. ಧರ್ಮವನ್ನು ಆಚರಿಸುವ ಮೂಲಕ ತೋರಿಸಬೇಕು. ದಾನ, ಪೂಜಾ, ಪರೋಪಕಾರ, ವ್ರತ ನೇಮನಿಷ್ಠೆಗಳು ಧರ್ಮದ ಕ್ರಿಯೆಗಳು.

ಧರ್ಮವನ್ನು ಮತವೆಂದು ಕೆಲವರು ಕರೆಯುವರು. ಇನ್ನು ಕೆಲವರು ಧರ್ಮದ ಹಿಂದೆ ಮತವನ್ನು ಸೇರಿಸಿ ಒಟ್ಟಿಗೆ ಮತಧರ್ಮವೆಂದು ಕರೆಯುವರು. ಆದರೆ ಧರ್ಮವೇ ಬೇರೆ, ಮತವೇ ಬೇರೆ. ಎರಡಕ್ಕೂ ಬಹಳ ವ್ಯತ್ಯಾಸವಿದೆ. ಮತ ನಂಬಿಕೆಗಳು, ತತ್ವಗಳ ಮಡುವಿದ್ದ ಹಾಗೆ. ಈ ಮಡು ಒಂದೆಡೆ ಮಡುಗಟ್ಟಿ ನಿಂತರೆ ಸುತ್ತಲಿನ ವಾತಾವರಣವೇ ದೂಷಿತವಾಗುವುದು. ಧರ್ಮ ಹೀಗೆ ಮಡುಗಟ್ಟಿನಿಂತ ತತ್ವಗಳನ್ನು ಚಲಾವಣೆಯಲ್ಲಿ ತರುತ್ತದೆ. ಮಡುಗಟ್ಟಿ ನಿಲ್ಲದಂತೆ ಮಾಡುತ್ತದೆ. ನಂಬಿಕೆ ಹಾಗೂ ತತ್ವಗಳಿಗೆ ನವಚೈತನ್ಯ ತುಂಬಿ ಅವುಗಳನ್ನು ಸಮಾಜದಲ್ಲಿ ಕ್ರಿಯಾಮುಖವಾಗಿ ಸಂವಹನಗೊಳಿಸುತ್ತದೆ. ಹೀಗೆ ತತ್ವಗಳನ್ನು ಸಂವಹನಗೊಳಿಸುವುದರ ಮೂಲಕ ಧರ್ಮ ಮನುಷ್ಯ-ಮನುಷ್ಯರನ್ನು ಹತ್ತಿರಕ್ಕೆ ತರುತ್ತದೆ. ಅವರನ್ನು ಭಾವನಾತ್ಮಕವಾಗಿ ಬೆಸೆಯುತ್ತದೆ. ಮಾನವೀಯ ಮಂದಾರಗಳನ್ನು

ಅರಳಿಸುತ್ತ ಪರಸ್ಪರರಲ್ಲಿ ಸಂಬಂಧವನ್ನು ಏರ್ಪಡಿಸುತ್ತದೆ. ಹೀಗೆಂದ ಮಾತ್ರಕ್ಕೆ ಧರ್ಮವು ತತ್ವಗಳನ್ನು ಒಳಗೊಂಡಿಲ್ಲವೆಂದಲ್ಲ. ತತ್ವಗಳನ್ನು ತಿಳಿಸಲಾರದೂ ಎಂದಲ್ಲ. ಪರೋಕ್ಷವಾಗಿ ಜನತೆಗೆ ತತ್ವಗಳನ್ನು ಮನಗಾಣಿಸುತ್ತದೆ. ಆ ಮೂಲಕ ಅವರ ಮನಸ್ಸನ್ನು ಪ್ರವೇಶಿಸಿ ಅವರನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತದೆ. ಮೇಲು-ಕೀಳು ಎಂಬುದೇ ಧರ್ಮದಲ್ಲಿ ಇಲ್ಲ. ಜಾತಿ ಗೋಡೆಗಳಂತೂ ಮೊದಲೇ ಇಲ್ಲ. ಜಾತಿಗೋಡೆಗಳು ನೆಲಸಮವಾದಾಗಲೇ ಧರ್ಮ ಅಲ್ಲಿ ನೆಲೆಸುತ್ತದೆ. ಆ ಗೋಡೆಗಳು ನೆಲಸಮವಾಗದ ಹೊರತು ಧರ್ಮ ಅತ್ತ ಸುಳಿಯದು. ಧರ್ಮ ಸಾರ್ವಜನಿಕವಾದ ಉತ್ತಮ ಜೀವನದ ಕಲೆ.

ಒಟ್ಟಿನಲ್ಲಿ ಧರ್ಮ ಮಾನವನ ಒಳಿತಿಗಾಗಿ, ಕಲ್ಯಾಣಕ್ಕಾಗಿ ಇರುವಂಥದು. ದುಃಖಿತರ, ಆರ್ತರ, ಅಸಹಾಯಕರ, ಮೊರೆಹೋದವರನ್ನು ರಕ್ಷಿಸುವಲ್ಲಿ, "ತನ್ನಂತೆಯೇ ಇನ್ನೊಬ್ಬರೂ" ಎಂದು ತಿಳಿಯುವಲ್ಲಿ, ಇನ್ನೊಬ್ಬರ ಸುಖದಲ್ಲಿ ತನ್ನ ಸುಖವನ್ನು ಕಾಣುವಲ್ಲಿ, ಧರ್ಮ ತನ್ನ ಸಹಾಯ ಹಸ್ತ ನೀಡಿ ಸಾರ್ಥಕತೆಯನ್ನು ಕಂಡುಕೊಳ್ಳುತ್ತದೆ. ಧರ್ಮದ ಕಾರ್ಯರಂಗ ಅತ್ಯಂತ ವ್ಯಾಪಕವೂ ವೈವಿಧ್ಯಮಯವೂ ಆಗಿದೆ. ಮಾನವನಲ್ಲಿರುವ ಹುಟ್ಟು ಸ್ವಭಾವಕ್ಕೆ ಧರ್ಮವೆಂದು ಪ್ರಾರಂಭಿಸಿ ಸಾಮಾಜಿಕ ನೀತಿ ನಡಾವಳಿಕೆವರೆಗೆ ಅದು ಅರ್ಥವ್ಯಾಪ್ತಿಯನ್ನು ಹೊಂದಿದ್ದು, ಮಾನವನ ಮೇಲೆ ಅವ್ಯಾಹತವಾದ ಪ್ರಭಾವವನ್ನು ಬೀರುತ್ತದೆ. ಜೀವನದ ಎಲ್ಲಾ ರಂಗಗಳಲ್ಲೂ ಧರ್ಮವು ಮಾನವನ ಮೇಲೆ ಸವಾರಿ ಮಾಡುತ್ತ ಅವನನ್ನು ಹಿಡಿತದಲ್ಲಿಟ್ಟುಕೊಂಡು ಬಂದಿದೆ. ಆತನನ್ನು ನಿಯಂತ್ರಿಸುವ ಕೇಂದ್ರ ಶಕ್ತಿಯೇ ಆಗಿದೆ. ಆತನ ವಿಕಾಸದ ಪ್ರತಿಯೊಂದು ಹಂತದಲ್ಲೂ ವಿಧ ವಿಧದ ಮಾರ್ಗದರ್ಶನ, ಮೇಲ್ವಿಚಾರಣೆ ಮಾಡುತ್ತ ಬಂದಿದೆ. ಯಾರು ಧರ್ಮವನ್ನು ಪಾಲಿಸುವರೋ, ಅವರನ್ನು ಧರ್ಮವೇ ಕೈಬಿಡದೆ ಕಾಪಾಡುವುದು. ಧರ್ಮವು ಮಾನವನ ರಕ್ಷಾ ಕವಚವಾಗಿದೆ.

ಧರ್ಮ ಅಮಲು ತರಿಸುವ ಸಾಧನವೆಂದು ಕೆಲವರು ಅಭಿಪ್ರಾಯಪಟ್ಟರೆ, ಇನ್ನು ಕೆಲವರಿಗೆ ಧರ್ಮವೆಂದರೆ ಒಂದು ವಿಧದ ಅಲರ್ಜಿ. ಇವರೀರ್ವರೂ ಧರ್ಮದ ಅರ್ಥವನ್ನೇ ಅರಿಯದವರು. ಹಾಗೆ ನೋಡಿದರೆ ಧರ್ಮ ಮನುಷ್ಯನನ್ನು ನಿಜವಾದ ಅರ್ಥದಲ್ಲಿ ಮನುಷ್ಯನನ್ನಾಗಿ ಮಾಡಿದೆ. ಆತನ ಜೀವನದ್ದಕ್ಕೂ ಆತನ ಸುಖದುಃಖಗಳಲ್ಲಿ ಭಾಗಿಯಾಗುತ್ತ ಬಂದಿದೆ. ಆದರೆ ಅದು ಲೌಕಿಕ ದಂದುಗದಲ್ಲೇ ಮುಳುಗಿಹೋದ ಎಷ್ಟೋ ಜನರನ್ನು, ಅಹಂಭವಿಗಳನ್ನು ಅದುಲೆಕ್ಕಿಸಿಲ್ಲ. ಅಂಥ ಎಷ್ಟೋ ಜನ ಅಧರ್ಮದ ಚಕ್ರಕ್ಕೆ ಸಿಕ್ಕಿ ಉಚ್ಚುನೂರಾಗಿ ಹೋಗಿದ್ದಾರೆ. ಧರ್ಮದ



ದೃಷ್ಟಿ ಯಾವಾಗಲೂ ಪ್ರಾಮಾಣಿಕರ, ಸತ್ಯಸಂಧರ, ನೀತಿಮಾರ್ಗದಲ್ಲಿ ನಡೆಯುವವರ ಕಡೆಗೇ ಇರುತ್ತದೆ. ಧಾರ್ಮಿಕ ಮಹಾಪುರುಷರ ಚರಿತ್ರೆಯನ್ನು, ಸಂದೇಶಗಳನ್ನು ಅಚ್ಚಳಿಯದೆ ಉಳಿಸಿಕೊಂಡು ಬಂದಿದೆ. ಸಾಮಾನ್ಯ ಜನತೆಯ ಬಾಳಹಾದಿಯಲ್ಲಿ ಬೆಳಕಿನ ಕಂಬಗಳಾಗಿ ನಿಲ್ಲುವ ಮಹಾತ್ಮರ ಸಂದೇಶಗಳನ್ನು ಸಮಾಜದಲ್ಲಿ ಕ್ರಿಯಾಮುಖವಾಗಿ ಪ್ರಸಾರ ಮಾಡುವುದೆಂದರೆ ಅದಕ್ಕೆ ಎಲ್ಲಿಲ್ಲದ ಹರ್ಷ. ಇಂದಿನ ಜನಾಂಗಕ್ಕೆ ಧಾರ್ಮಿಕ ಮಹಾಪುರುಷರೇ ಆದರ್ಶ. ಅವರೇ ಮಾರ್ಗದರ್ಶಕರು. ಅವರದು ಸಾತ್ವಿಕವಾದ ಮಹಾಜೀವನ. ಲೌಕೀಕ ಮಾನವರಂತೆ ಅವರು ಸ್ವಾರ್ಥ, ಆಸೆ, ಆಮಿಷಗಳಿಗೆ ಹೋರಾಡಿದವರಲ್ಲ. ತಮ್ಮ ವೈಯಕ್ತಿಕ ಬದುಕು ಅವರಿಗೆ ಗೌಣ-ಮೇಣಬತ್ತಿಯಂತೆ ತಮ್ಮನ್ನೇ ಇಲ್ಲವಾಗಿಸಿಕೊಂಡು, ತಮ್ಮ ಬದುಕಿಗೆ ಒಂದು ಭವ್ಯ ಅರ್ಥವನ್ನು ತಂದು ಕೊಟ್ಟಿರುತ್ತಾರೆ. ಅವರ ಜೀವನ ಸಂದೇಶ ಯುಗಯುಗಗಳವರೆಗೂ ಮುಂದುವರಿದುಕೊಂಡು ಹೋಗುತ್ತದೆ. ಶ್ರದ್ಧೆ ಅಳಿಸದೇ ಉಳಿಯುತ್ತದೆ. ಹೀಗೆ ಮುಂದುವರಿಸಲು, ಧರ್ಮಪರ ಪಕ್ಷಪಾತಿಯಾಗಿ ನಿಲ್ಲುತ್ತದೆ. ಈ ಧರ್ಮ ಭೋದಕರೇ ಜಿನರು.

ಧರ್ಮ ಜೀವನಮೌಲ್ಯಗಳನ್ನು ನಿರಂತರವಾಗಿ ಅನ್ವೇಷಣೆ ಮಾಡುತ್ತಲೇ ಇರುತ್ತದೆ. ಮತ್ತು ಕಾಲಕಾಲಕ್ಕೆ ಆ ಮೌಲ್ಯಗಳನ್ನು ಪರಿಷ್ಕರಿಸುತ್ತ ಬರುತ್ತದೆ. ಮಾನವನ ನಿತ್ಯದ ಸಮಸ್ಯೆಗಳಾದ ಜನನ, ಮರಣ, ಜೀವನದ ಗುರಿ, ವಿಚಾರ, ವಿಶ್ವಾಸ, ದೈವ, ಪಾಪ, ಪುಣ್ಯ, ಒಳಿತು-ಕೆಡುಕು, ಸದ್ಗತಿ, ದುರ್ಗತಿ, ಕರ್ಮ-ಈ ಎಲ್ಲ ಸಮಸ್ಯೆಗಳಿಗೆ ಸೂಕ್ತವಾದ ಸಮಾಧಾನಕರ ಉತ್ತರಗಳನ್ನು ಧರ್ಮ ಹೇಳುತ್ತದೆ. ಹೇಳಿ ಜನತೆಯ ಕದಡಿದ ಮನಸ್ಸನ್ನು ತಿಳಿಗೊಳಿಸುತ್ತದೆ.' ಒತ್ತಿ ಬಂದ ದುಃಖವನ್ನು ತಡೆಯುತ್ತದೆ. ತುಂಬಿ ಬಂದ ಕಣ್ಣೀರನ್ನೊರಸಿ ಶಾಂತಿ ಸಂದೇಶವನ್ನು ಸಾರುತ್ತದೆ. ಭಾವೋದ್ವೇಗಕ್ಕೆ ಒಳಗಾದ ಮನಸ್ಸನ್ನು ಸ್ಥಿಮಿತಕ್ಕೆ ತಂದು ಆತನಿಗೆ ಉಚಿತ ಮಾರ್ಗದರ್ಶನ ಮಾಡುತ್ತದೆ. ಆತನ ಜೀವನವನ್ನು ಮುನ್ನಡೆಸುವಲ್ಲಿ ಧರ್ಮದ ಪಾತ್ರ ಬಹು ಮುಖ್ಯವಾದುದು. ಧರ್ಮವು ಮಂಗಳಕರವೂ ಶ್ರೇಷ್ಠವೂ ಆದುದು. ಅದು ಅಹಿಂಸೆ-ಸಂಯಮ, ತಪಗಳಿಂದ ಪ್ರಕಟವಾಗುತ್ತದೆ. ಧರ್ಮ ನೀತಿಯುತ ಆಚಾರ ಪ್ರಧಾನವಾದುದು.

'ಧರ್ಮವು ಸಂಸ್ಕೃತಿಯ ಸಂವರ್ಧನೆಯ ಕಾರ್ಯದಲ್ಲಿ ವಹಿಸುತ್ತಿರುವ ಪಾತ್ರ ಅಮೋಘವಾದುದು. ಪ್ರಾಚೀನ ಹಾಗೂ ಮಧ್ಯಯುಗೀನ ಚರಿತ್ರೆಯನ್ನು ಅವಲೋಕಿಸಿದರೆ ಅದರ ಸಂಸ್ಪರ್ಶವಿಲ್ಲದ ಯಾವ ಜೀವನ ವಿಭಾಗವೂ ಸಿಗದು. ಸಾಹಿತ್ಯ, ಕಲೆಗಳ ಉಗಮ-ಪೋಷಣೆ, ನೀತಿಶಾಸ್ತ್ರ, ರಾಜ್ಯಶಾಸ್ತ್ರಗಳು ಸಂಸ್ಕರಣ,

ತರ್ಕ-ವ್ಯಾಕರಣಾದಿ ಶಾಸ್ತ್ರಗಳ ಬೆಳವಣಿಗೆ, ಲೋಕ ಸೃಷ್ಟಿ, ಗ್ರಹಗಳಗತಿ, ಜ್ಯೋತಿಷ್ಯ, ಔಷಧಾದಿ ಶಾಸ್ತ್ರಗಳ ಸೃಷ್ಟಿ-ಇಂತಹ ಅನೇಕ ವಿಷಯಗಳಿಗೆ ಧರ್ಮವು ವಿಧವಿಧವಾಗಿ ಸ್ಫೂರ್ತಿ ನೀಡಿದೆ, ಸಂಜೀವಿನಿಯಾಗಿ ಪೋಷಿಸಿದೆ. ಒಟ್ಟಿನಲ್ಲಿ ಧರ್ಮವು ಮಾನವ ಸಂಸ್ಕೃತಿಗೆ ತಾಯ್ತೊಟ್ಟಿಲಾಗಿ ತೂಗುತ್ತ ಬೆಳೆಸಿದೆ, ರಕ್ಷಿಸಿದೆ. ಧರ್ಮವು ಮಾನವೀಯತೆಯನ್ನು ಕಲಿಸುತ್ತದೆ.

ಮಾನವನ ಮೂಲ ಪ್ರವೃತ್ತಿಗಳಾದ ಆಹಾರ, ನಿದ್ರೆ, ಭಯ, ಮೈಥುನ, ಸ್ನೇಹ, ಆಸೆ, ಶೀಲಗಳಂತೆ ಧರ್ಮವನ್ನು ಒಂದು ಮೂಲ ಪ್ರವೃತ್ತಿ ಎನ್ನಬಹುದೇ? ಆಸ್ಟ್ರೇಲಿಯಾದ ಕೆಲ ಮೂಲ ನಿವಾಸಿಗಳು ಅಲ್ಲವೆನ್ನುತ್ತಾರೆ. ಅವರಲ್ಲಿ ಧಾರ್ಮಿಕ ಪ್ರವೃತ್ತಿ ಕಂಡುಬಂದಿಲ್ಲವೆನ್ನುತ್ತಾರೆ. ಆಧುನಿಕ ಇಂದಿನ ವೈಜ್ಞಾನಿಕ ಯುಗದಲ್ಲೂ ಧರ್ಮವು ಮಾನವನ ಒಂದು ಮೂಲ ಪ್ರವೃತ್ತಿ ಎಂದು ಒಪ್ಪಿಕೊಳ್ಳುವುದು ಕಷ್ಟವಾದರೂ ಅದರ ಪ್ರಭಾವ ಆಗದೇ ಇಲ್ಲ. ಧರ್ಮವೂ ಮಾನವನ ಒಂದು ಮೂಲಭೂತ ಅವಶ್ಯಕ ಪ್ರವೃತ್ತಿಯೆಂದೇ ಹೇಳಬಹುದು.

'ಧರ್ಮದಿಂದಾದುದು ಸಿರಿ ಎಂದು ಸುಖಿಸುತ ಧರ್ಮವ ಮರೆಯರುತ್ತಮರು'' ಎಂಬಂತೆ ದಾನ, ಪೂಜೆ, ಶೀಲ, ನೇಮ ನಿಯಮ ಧರ್ಮಕ್ರಿಯೆಗಳನ್ನು ನಿಷ್ಠೆಯಿಂದ ಉತ್ತಮರು ಪಾಲಿಸಿ ಸುಖಿಗಳಾಗುತ್ತಾರೆ.

ಧರ್ಮಕರತ ಸಂಸಾರ ಸುಖ, ಧರ್ಮಕರತ ನಿರ್ವಾಣ್।
ಧರ್ಮಪಂಥ ಸಾಧೇಬಿನಾ, ನರತಿರ್ಯಂಚ ಸಮಾನ್ ॥

ಧರ್ಮವು ಸಂಸಾರದಲ್ಲಿ ಎಲ್ಲಾ ಸುಖವನ್ನು ನೀಡುತ್ತದೆ. ಕ್ರಮವಾಗಿ ನಿಯಮದಿಂದ ಮೋಕ್ಷ ಸುಖವನ್ನು ನೀಡುತ್ತದೆ. ಧರ್ಮ ಮಾರ್ಗದಲ್ಲಿ ನಡೆಯದ ಮಾನವನು ತಿರ್ಯಂಚ ಪ್ರಾಣಿಗೆ ಸಮನಾಗುತ್ತಾನೆ.

# 19. ಧರ್ಮದ ನೆಲೆ ಬೆಲೆ

ಸಧರ್ಮೋ ಯೋದಯಾ ಯುಕ್ತಂ
ಸರ್ವಪ್ರಾಣಿ ಹಿತ ಪ್ರದಾ
ಜಿನೈ ರ್ನಿಗದಿತಂ ಧರ್ಮಂ
ಸರ್ವ ಸೌಖ್ಯ ಮಹಾನಿಧಿಂ॥



ಸರ್ವ ಪ್ರಾಣಿಗಳಿಗೆ ಹಿತಕಾರಿಯೂ, ಸರ್ವಸೌಖ್ಯಗಳ ಮಹಾಗಣಿಯೂ, ದಯೆಯೇ ಮೂಲವಾಗಿ ಉಳ್ಳುದೂ. ಜಿನೇಂದ್ರ ಭಗವಂತರಿಂದ ಹೇಳಲ್ಪಟ್ಟರೂ ಆದ ಧರ್ಮವೇ ಸದ್ಧರ್ಮ. ಅದೇ ಜೈನಧರ್ಮ.

ಈ ಧರ್ಮವು ಸದ್ಧರ್ಮವೆನಿಸಬೇಕಾದರೆ ಈ ಧರ್ಮದ ಮೂಲದಲ್ಲಿ ದಯೆ ಇದೆ. ದಯೆಯು ಸರ್ವ ಪ್ರಾಣಿಗಳಿಗೆ ಹಿತವೂ ಆಗಿದೆ. ಸರ್ವರ ಸುಖ ಶಾಂತಿಗಳಿಗೆ ಬೇಕಾದ ಮಾರ್ಗೋಪಾಯವನ್ನು ಸರ್ವಜ್ಞನೂ, ನಿರ್ದೋಷಿಯೂ. ಹಿತೋಪದೇಶಿಯೂ ಆದ ಪರಿಶುದ್ಧ ಪರಮಾತ್ಮರೆನಿಸಿದ ಜಿನೇಂದ್ರರು ಹೇಳಿದ್ದಾರೆ.

ವ್ಯಾಧಿಗ್ರಸ್ಥನಾದ ಯಾರೇ ಆಗಲೀ ತನ್ನ ರೋಗ ನಿವಾರಣೆಗೆ ಕಾತುರನಾಗಿರುವುದು ಸ್ವಾಭಾವಿಕ, ಹಾಗೆಯೇ ಜನ್ಮ ಜರಾ ಮೃತ್ಯುರೂಪೀ ಮಹಾರೋಗದಿಂದ ಮುಕ್ತನಾಗಬೇಕೆಂದು ಈ ಸ್ನೇಹ ಪಂಜರದಲ್ಲಿರುವ ಆತ್ಮನು ಕಾತುರನಾಗಿರುವುದು ಸ್ವಾಭಾವಿಕ. ಆತ್ಮನಿಗೆ ಈ ಕಾತುರತೆ ಏಕೆಂದರೆ ರಕ್ತ ಮಾಂಸ ಮಲ ಮೂತ್ರ ಮುಂತಾದ ಅಶುಚಿ ಪದಾರ್ಥಗಳು ತುಂಬಿದ ದುರ್ಗಂಧಮಯವಾದ ಈ ದೇಹ ರೂಪೀ ಕಾರಾಗೃಹದಲ್ಲಿ ವಾಸ ಮಾಡೀ ರೋಸಿಹೋಗಿದೆ. ಆದುದರಿಂದ ಈ ಬಂಧನದಿಂದ ಪಾರಾಗಿ ಹೋಗಲು ಉಪಾಯವನ್ನು ಹುಡುಕುತ್ತಾ ಇರುವುದು ಸ್ವಭಾವಿಕವೇ ಆಗಿದೇ ಅದಕ್ಕಾಗಿಯೇ ಯಾವುದೇ ಶರೀರದಲ್ಲಿ ಈ ಆತ್ಮನು ಶಾಶ್ವತವಾಗಿನಿಂತಿಲ್ಲ. ಅಶರೀರತ್ವವೇ ಆತ್ಮನ ಅಪೇಕ್ಷೆ, ಆತ್ಮನು ಅಶರೀರನಾದ ಜ್ಞಾನ ಚೇತನನೇ ಆಗಿದ್ದಾನೆ.

ಜಿನೇಂದ್ರ ಭಗವಾನರು ಈ ಮಾರ್ಗೋಪಾಯವನ್ನು ಕಂಡು ಅದನ್ನು ಜೀವಿಗೆ ಕಲ್ಯಾಣಾರ್ಥ ಬೋಧಿಸಿದ್ದಾರೇ ಈ ಮುಕ್ತಿ ಮಾರ್ಗವನ್ನೂ ಹೇಳಿದ ಜಿನರನ್ನೂ ಕಾಯ ವಾಚಾ ಮನಸಾ ನಂಬಿ ಈ ಮಾರ್ಗೋಪಾಯಗಳ ಬಗ್ಗೆ ವಿಚಾರ ಪೂರ್ವಕ ಮಂಥನ ಮಾಡುತ್ತಾ ತನ್ನ ನಿತ್ಯಜೀವನದಲ್ಲಿ ಕಾರ್ಯಾನುಷ್ಠಾನಕ್ಕೆ ತಂದು ಕೊಳ್ಳುವುದರಿಂದ ಈ ಭವರೋಗದಿಂದ ನಿವಾರಣೆಯನ್ನು ಹೊಂದಬಹುದು. ಇಹದಲ್ಲೂ ನೆಮ್ಮದಿಯನ್ನು ಕಾಣಬಹುದು.

ರೋಗನಿವಾರಣೆಗೆ ಮೊದಲು ವೈದ್ಯನಮೇಲೆ ನಂಬಿಕೆ ಹುಟ್ಟಿ. ಔಷಧಿಯನ್ನು ತೆಗೆದುಕೊಳ್ಳುವ ಕ್ರಮವನ್ನು ಅರಿತು ಪಥ್ಯವನ್ನು ಅನುಸರಿಸಬೇಕಾದುದು ಹೇಗೆ ಅವಶ್ಯಕವೋ ಹಾಗೆಯೇ ಮೇಲ್ಕಂಡಂತೆ ಒಳ್ಳೆಯ ನಂಬಿಕೆ, ಜ್ಞಾನ ಆಚರಣೆಗಳು ಭವರೋಗದ ಬಿಡುಗಡೆಯ ಮಾರ್ಗೋಪಾಯವಾಗಿದೆ.

ಈ ಮಾರ್ಗೋಪಾಯವನ್ನು ನಿಷ್ಕಂಟಕವಾಗಿಯೂ, ಸುಲಭ ಗ್ರಾಹ್ಯ

ವಾಗಿಯೂ ಈ ಜಿನ ಧರ್ಮದಲ್ಲಿ ಪ್ರಾಪ್ತಿ ಮಾಡಿಕೊಳ್ಳಬಹುದು. ಇಹಪರಗಳ ದುಃಖ, ದೌರ್ಬಲ್ಯ, ಅಸೌಖ್ಯ ಅಶಾಂತಿಗಳ ಬಿಡುಗಡೆಗಾಗಿ ಉತ್ತಮ ಸುಖದ ಸಿದ್ಧಿಗಾಗಿ ಒಂದು ಒಳ್ಳೆಯ ವ್ಯವಸ್ಥಾ ಪೂರ್ವಕವಾದ ಪದ್ಧತಿಯುಳ್ಳ ಸಾಧನ ಸಾಮಗ್ರಿಗಳ ಉಪದೇಶವು ಸರ್ವಾಂಗ ಸುಂದರ ರೀತಿಯಲ್ಲಿ ಈ ಜೈನ ದರ್ಶನದಲ್ಲಿ ಕಂಡುಬರುತ್ತವೆ.

ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ ಅಪರಿಗ್ರಹಗಳೆಂಬ ಪಂಚ ಮೂಲ ತತ್ತ್ವಗಳನ್ನು ಜೀವನ ಕ್ರಮದಲ್ಲಿ ಹೇಗೆ ಆಚರಣೆಗೆ ತಂದು ತನ್ಮೂಲಕ ಆದರ್ಶನಾಗ ಬಹುದೆಂಬುದನ್ನು ಜೈನ ಧರ್ಮವು ಸರಳವಾಗಿ ತಿಳಿಸಿದೆ.

ಆತ್ಮನ ಉತ್ತರೋತ್ತರ ವಿಕಾಸ ಶ್ರೇಣಿಗಳಾದ ಗುಣಸ್ಥಾನ, ಮಾರ್ಗಣ ಸ್ಥಾನಗಳ ವಿಚಾರಣೀಯವೂ ಮನನೀಯವೂ ಆದ ಸಿದ್ಧಾಂತಗಳವರ್ಣನೆ ಇದೆ. ಇವುಗಳಿಂದ ಆತ್ಮೋತ್ಥಾನವಾಗಿ ಆತ್ಮನು ನಿತ್ಯವೂ ಸ್ವತಂತ್ರವೂ ಆದ ಆನಂದ ಹೊಂದಲು ಸಾಧ್ಯ. ಈ ಆಧ್ಯಾತ್ಮ ಬೋಧೆಯಲ್ಲಿ ಜಿನೇಂದ್ರರು ಬಹು ಮಾರ್ಮಿಕವಾಗಿ ನಿರೂಪಿಸಿದ್ದಾರೆ. 'ಯುಕ್ತಭಾವಂ ಭವೇತತ್ತ್ವಂ, ಎಂಬಂತೇ ಜೈನಸಿದ್ಧಾಂತವು ಧರ್ಮ ವಿಷಯವನ್ನು ಯುಕ್ತಿಯಿಂದ ಬೋಧಿಸುವ ಶೈಲಿಯು ಬಹಳ ಸುಂದರವಾದುದು. ಕಾರಣ ಇದರಲ್ಲಿರುವ ಸರ್ವಾಂಗ ಸುಂದರವಾದ ಸ್ಯಾದ್ವಾದವೆಂಬ ನ್ಯಾಯವಿದೆ. ತತ್ತ್ವವೆಂಬ ಸಿದ್ಧಾಂತವಿದೆ.

ಇದು ಜೈನದರ್ಶನದ ಮುಖ್ಯ ಅಂಗವಾಗಿದೆ. ಈ ನ್ಯಾಯ ಪ್ರಯೋಗದಿಂದ ಜಗತ್ತಿನ ಪರಸ್ಪರ ವಿಚಾರಗಳ ವಿರೋಧ ಮತ್ತು ವೈಮನಸ್ಯಗಳು ನಿವಾರಣೆ ಯಾಗುತ್ತವೆ. ಅದರಿಂದಾಗಿ ಇದನ್ನು ಅನೇಕಾಂತವಾದವೆಂದೂ, ಅಪೇಕ್ಷಾವಾದ ವೆಂದೂ ಕರೆದಿದ್ದಾರೆ. ಇದರ ಮರ್ಮವನ್ನರಿತವನು ವಿವಾದಗ್ರಸ್ಥನೂ, ಹಟವಾದಿಯೂ ಆಗಲಾರ. ವಿಶಾಲ ಮನೋಭಾವದಿಂದ ವಿಶ್ವಧರ್ಮದ ಮೂಲ ಸಿದ್ಧಾಂತವನ್ನು ನಂಬಿ ಆನಂದಾನುಭವಿಯಾಗುತ್ತಾನೆ.

ವಿಶ್ವದ ಜೀವರಾಶಿಗೆಲ್ಲಾ ಹಿತಕಾರಿಯಾದ 'ಪರಸ್ಪರೋಪ ಗ್ರಹೋಜೀವಾನಾಂ' ಎಂಬ ಜಿನವಾಣಿಯು ಬಹು ವಿಶಾಲ ಅರ್ಥದಿಂದ ಕೂಡಿದೆ. ವಿಶ್ವವೆಲ್ಲಾ ಒಂದೇ ಕುಟುಂಬವೆಂಬ ಅರ್ಥದ್ಯೋತಕವಾಗಿದೆ, ಇಲ್ಲಿ ಪರಸ್ಪರ ಹೊಂದಿಕೆಯಿಂದ ಸುಖಿಶಾಂತಿಯಿಂದ ಬಾಳಲು ಪರಸ್ಪರ ಸಹಕರಿಸಿರಿ. 'ನೀನೂ ಇರು ಇತರರೂ ಇರಲು ಅವಕಾಶಕೊಡು' ಎಂಬ ವಿಶಾಲ ಭಾವನೆ ಈ ಜಿನಧರ್ಮದಲ್ಲಿ ಎದ್ದು ತೋರುತ್ತದೆ. ಇದೇ ದಯಾ ಧರ್ಮದ ಮರ್ಮ.



ಪ್ರಕೃತಿ ನಿಯಮಗಳಿಗೆ ಅನುಗುಣವಾಗಿಯೂ, ಸುವ್ಯವಸ್ಥಿತ ಮತ್ತು ವೈಜ್ಞಾನಿಕ ರೀತಿಗನುಗುಣವಾಗಿಯೂ ನಡೆಯುತ್ತಿರುವ ವಿಶ್ವವ್ಯವಹಾರದ ಮೂಲ ತತ್ತ್ವಗಳ ಯತಾರ್ಥ ವಿವರಣೆಯು ಜೈನಧರ್ಮದಲ್ಲಿ ಅಡಕವಾಗಿದೆ. ಆಧುನಿಕ ವಿಚಾರವಂತರು ಇದನ್ನು ಪ್ರಮಾಣಸಿದ್ಧೀ ಮತ್ತು ಹೇತುವಾದೀ ದರ್ಶನ ಶಾಸ್ತ್ರವೆಂದಿದ್ದಾರೆ.

ವೈಜ್ಞಾನಿಕರು ತಮ್ಮ ಮೇಧಾಶಕ್ತಿಯ ಮೂಲಕ ನಡೆಸಿದ ತಮ್ಮ ಪರಿ ಶೋಧನೆಗಳಮೂಲಕ ಗಳಿಸಿದ ಸಿದ್ಧಿಯ ಬಹಳಅಂಶಗಳು, ಅದರಲ್ಲೂ ಅಣುಸಿದ್ಧಾಂತ ಗಣಿತಶಾಸ್ತ್ರ, ಲೋಕವಿವರಣೆಗಳು ಬಹು ಪೂರ್ವದಲ್ಲಿಯೇ ಜೈನಸಿದ್ಧಾಂತದಲ್ಲಿ ವಿವರಿಸಲ್ಪಟ್ಟಿವೆ. ಜಡಚೇತನಗಳ ಸಂಪರ್ಕ ಬಿಡುಗಡೆಯ ಸಂಬಂಧದಲ್ಲಿ 'ಕರ್ಮ' ಸಿದ್ಧಾಂತವನ್ನು ತುಂಬಾ ವೈಜ್ಞಾನಿಕವಾಗಿ ಜಿನೇಂದ್ರರು ನಿರೂಪಿಸಿದ್ದಾರೆ. ಜೀವನ ಏರು ಪೇರು, ಉಚ್ಚ ನೀಚ, ಸುಖ ದುಃಖ, ಗತಿ ಗಮನಗಳಿಗೆ ಕರ್ಮವೆಂಬುದು ಹೇಗೆ ಕಾರಣವಾಗಿದೆ, ಈ ಕರ್ಮದ ಬಂಧ ಹೇಗೆ, ಮತ್ತದರ ಬಿಡುಗಡೆ ಹೇಗೆ, ಎಂಬುದನ್ನೂ ಜಿನಧರ್ಮ ನಿರೂಪಿಸುತ್ತದೆ.

ಅಹಿಂಸೆ, ಸತ್ಯ, ಅಪರಿಗ್ರಹ, ಅನೇಕಾಂತಗಳು ಜೀವನನ್ನು ಜೀವನ್ಮುಕ್ತ ನನ್ನಾಗಿಮಾಡಲು ಹೇಗೆ ಸಹಕಾರಿಯಾಗಿವೆ ಎಂಬುದನ್ನು ಜಿನಧರ್ಮ ಸ್ಪಷ್ಟೀಕರಿಸುತ್ತದೆ. ಈ ಜಿನ ಧರ್ಮವನ್ನು ಪ್ರಚಾರ ಮಾಡುತ್ತಿರುವ ಜಿನ ಮುನಿಗಳು ಈಗಲೂ ಈ ಧರ್ಮ ಮಾರ್ಗವನ್ನು ತಮ್ಮ ಬಾಳುವೆಯಲ್ಲಿ ಅನುಷ್ಠಾನಕ್ಕೆ ತಂದು ತನ್ಮೂಲಕ ಆಧ್ಯಾತ್ಮಿಕ ಆನಂದದಲ್ಲಿ ವಿಹರಿಸುತ್ತಿದ್ದಾರೆ.

ಈ ತತ್ತ್ವಗಳನ್ನು ಸವಿಸ್ತಾರವಾಗಿ ನಿರೂಪಿಸುವ ಧರ್ಮಶಾಸ್ತ್ರಗಳು ವಿಪುಲವಾಗಿವೆ. ಇವುಗಳ ಆಶ್ರಯ ಹೊಂದಿದ ಜೀವನು ವಿಕಾಸಹೊಂದಿ ತನ್ನ ಬಾಳುವೆಯಲ್ಲಿ ಸುಖ ಶಾಂತಿಯನ್ನು ಹೊಂದಬಲ್ಲನು. ಈ ಜಿನ ಗುರು, ಜಿನ ಶಾಸ್ತ್ರಗಳು ಮಾನವನಿಗೆ ಮಾರ್ಗದರ್ಶಿಗಳಾಗಿ ಸುಖ ದುಃಖದಲ್ಲಿ ಸಮಾನ ಭಾಗಿಯಾಗಿ ತಾಳ್ಮೆಗೆಡದೆ ಮನ ವಚನ ಕಾಯಗಳ ಕಾರ್ಯಗಳನ್ನು ಶುಭವಾಗಿಟ್ಟುಕೊಳ್ಳಲು ಬೇಕಾದ ಉಪಾಯವನ್ನು ತಿಳಿಸುತ್ತವೆ. ಆದ್ದರಿಂದ ಈ ಜಿನಧರ್ಮ ಸರ್ವೋದಯತೀರ್ಥವೆನಿಸಿದೆ. ಸರ್ವಮಂಗಲ ಮಾಂಗಲ್ಯವಾಗಿದೆ. ಸರ್ವಕಲ್ಯಾಣಕಾರಿಯಾಗಿ. ಸರ್ವಧರ್ಮಪ್ರಧಾನವೂ ಮಂಗಲವೂ ಸರ್ವಮಾನ್ಯವೂ ಆಗಿ ಕಂಗೊಳಿಸುತ್ತಿದೆ. "ಜೈನಂ ಜಯತಿ ಶಾಸನಂ"

# 20. ಆತ್ಮನೂ ಪರಮಾತ್ಮನೂ

ಜೈನಧರ್ಮದ ಮಹತ್ವಪೂರ್ಣ ಸಿದ್ಧಾಂತವೆಂದರೆ ಪ್ರತಿಯೊಂದು ಆತ್ಮವೂ ಪರಮಾತ್ಮವಾಗಬಲ್ಲುದೆಂಬುದಾಗಿದೆ. ಪತಿತರಲ್ಲಿ ಪತಿತವಾಗಿರುವ ಆತ್ಮವೂ ಮಹಾತ್ಮ ಇಲ್ಲವೆ ಪರಮಾತ್ಮಪದವನ್ನು ಏರಬಲ್ಲುದು ಎಂದ ಮೇಲೆ ಇದು ಆತ್ಮೋನ್ನತಿಯ ಮಾರ್ಗದಲ್ಲೇ ಚಿತ್ತವನ್ನು ಕೇಂದ್ರೀಕರಿಸುವುದಕ್ಕೆ ಪರಮೋಚ್ಚ ಸಾಧನವೆನಿಸುವುದು. ಯಾವ ಯಾವ ಆತ್ಮಗಳು ಪರಮಾತ್ಮಪದವನ್ನು ಪಡೆದಿವೆಯೋ ಅವೆಲ್ಲಾ ನಮ್ಮಂತೆ ಸಾಧಾರಣ ಅವಸ್ಥೆಯಲ್ಲಿಯೇ ಇದ್ದುವೆಂಬುದು ನಾವು ತಿಳಿಯತಕ್ಕ ವಿಷಯ. ಶಕ್ತಿಯ ದೃಷ್ಟಿಯಲ್ಲಿ ಹೇಳುವುದಿದ್ದರೆ ಆತ್ಮಪರಮಾತ್ಮರೊಳಗೆ ಭೇದವಿರುವುದಿಲ್ಲ; ಭೇದವಿರುವುದಾದರೆ ಇಷ್ಟೆ, ಜೀವಾತ್ಮನಲ್ಲಿ ಆ ಶಕ್ತಿಯು ವ್ಯಕ್ತವಾಗಿರುವುದಿಲ್ಲ, ಪರಮಾತ್ಮನಲ್ಲಿ ಆ ಶಕ್ತಿಯು ವ್ಯಕ್ತವಾಗಿರುತ್ತದೆ.

ಜೈನಧರ್ಮವು ಆತ್ಮನು ಯಾವುದೋ ಪರಮಾತ್ಮನ ಅಂಶವೆಂದು ಉಪದೇಶಿಸುವುದಿಲ್ಲ. ಈ ಸಿದ್ಧಾಂತವು ಆತ್ಮದ ಸ್ವತಂತ್ರತೆಯ ಮೇಲೆ ಕುಠಾರಪ್ರಾಯವಾಗಿದೆ. ಆತ್ಮನೇ ಪರಮಾತ್ಮನಾಗಬಲ್ಲನು. ಪರಮಾತ್ಮನು ಆತ್ಮನ ಪರಿಶುದ್ಧ ಸ್ವರೂಪವಾಗಿದೆ. 'ಪ್ರತಿಯೊಂದು ಆತ್ಮವು ಪ್ರಯತ್ನಪಟ್ಟರೆ ಪರಮಾತ್ಮಪದವನ್ನು ಪಡೆಯ ಬಲ್ಲದು' ಈ ವಿಷಯವು ಎಷ್ಟು ಸ್ವತಂತ್ರದಾಯಕವಾಗಿದೆ. ಪ್ರತಿಯೊಂದು ಆತ್ಮವು ಪರಮಾತ್ಮನ ಅಂಶ' ಈ ವಿಷಯವು ಎಷ್ಟು ಪರತಂತ್ರದಾಯಕವಾಗಿದೆ ನೋಡಿ. ಆತ್ಮನಿಗೆ ಪೂರ್ಣ ಸ್ವತಂತ್ರತೆಯ ಉಪದೇಶ ಕೊಡುವ ಏಕಮಾತ್ರ ಧರ್ಮವೆಂದರೆ ಜೈನಧರ್ಮ. ಈ ಕಾರಣದಿಂದ ಜೈನಧರ್ಮದ ಅನುಯಾಯಿಯು ಪರಮಾತ್ಮನ ಪೂಜೆ ಮತ್ತು ಉಪಾಸನೆ ಮಾಡುತ್ತಿರುವಾಗಲೂ ತಾನು ಪರಮಾತ್ಮನ ಉಪಾಸಕನಾಗಿ ಭಕ್ತಿಯ ಭಾವನೆ ತಾಳುತ್ತಾ ಮುಂದುವರಿದು ಅವನು ಹೀಗೆ ಪ್ರಾರ್ಥಿಸುತ್ತಾನೆ: 'ಹೇ ಭಗವಾನ್! ಶಕ್ತಿಯ ದೃಷ್ಟಿಯಿಂದ ಹೇಳುವುದಿದ್ದರೆ ನಾನು ಮತ್ತು ನೀನು ಸಮಾನರು. ನಾನು ಇಚ್ಛಿಸುವುದೇನೆಂದರೆ ನಾನು ಕೂಡಾ ನೀನು ಹೇಳಿದ ಮಾರ್ಗದಲ್ಲಿ ನಡೆದು ನಿನ್ನಂತೆಯೇ ಆಗುಬೇಕು.' ಈ ಶ್ರದ್ಧೆಯು ಪ್ರತಿಯೊಂದು ಆತ್ಮಕ್ಕೆ ಪರಮಾತ್ಮನಾಗಲು ಸಹಾಯವಾಗುತ್ತದೆ. ಈ ಆತ್ಮನಿಗೆ ಪೂರ್ಣ



ಸ್ವತಂತ್ರತೆಯನ್ನು ದೊರಕಿಸುವುದೇ ಜೈನಧರ್ಮದ ಶ್ರೇಷ್ಠ ಕೊಡುಗೆಯಾಗಿದೆ.

ಅನಾದಿ ಕಾಲದಿಂದಲೂ ಈ ಸಂಸಾರೀ ಜೀವವು ಕರ್ಮಗಳ ವಶೀಭೂತವಾಗಿ, ಚತುರ್ಗತಿರೂಪ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತ ನಡೆದಿದೆ ಮತ್ತು ಮಿಥ್ಯಾತ್ವ ಹಾಗೂ ಅಜ್ಞಾನದ ಕಾರಣದಿಂದ ನೈಜಸ್ವರೂಪವನ್ನರಿಯದೆ ಕರ್ಮಜನಿತ ಅವಸ್ಥೆಗಳಲ್ಲಿಯೇ ತನ್ಮಯವಾಗಿ, ಅದಕ್ಕನುಕೂಲವಾದ ಆಚರಣೆಯಿಂದಾಗಿ ಸಂಸಾರದಲ್ಲಿ ಸುತ್ತುತ್ತಿದೆ. ಅದೇ ಜೀವವು ರತ್ನತ್ರಯದ ಆರಾಧನೆ ಮಾಡುತ್ತ ಪೂರ್ವಸಂಚಿತ ಕರ್ಮಗಳ ಬಂಧನವನ್ನು ಮೆಲ್ಲಮೆಲ್ಲನೆ ದೃಢತಾಪೂರ್ವಕವಾಗಿ ಕಳಚುತ್ತ, ನವೀನ ಕರ್ಮಬಂಧನವನ್ನು ಮಾಡಿಕೊಳ್ಳುತ್ತದೆ. ಸಾಧು ಅವಸ್ಥೆಯಲ್ಲಿ ಆ ಸಾಧಕನು ತನ್ನ ಆತ್ಮವನ್ನು ಪ್ರತಿದಿನ ಅಧಿಕಾಧಿಕ ನಿರ್ಮಲ ಮತ್ತು ಶುದ್ಧಗೊಳಿಸುತ್ತ ಮುಂದುವರಿಯುತ್ತಾನೆ. ಅಂತ್ಯದಲ್ಲಿ ಆ ಸಾಧಕನು ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ ಹಾಗೂ ಅಂತರಾಯ ಈ ನಾಲ್ಕು ಘಾತೀಯ ಕರ್ಮಗಳನ್ನು ನಷ್ಟಗೊಳಿಸಿ ಶುದ್ಧ ಸ್ವರೂಪವನ್ನು ಪ್ರಾಪ್ತ ಮಾಡಿಕೊಳ್ಳುವ ಒಂದು ಶುಭ ಕಾಲಲಬ್ಧಿ ಒದಗಿದಾಗ ಅನಂತಜ್ಞಾನ, ಅನಂತದರ್ಶನ, ಅನಂತಸುಖ ಹಾಗೂ ಅನಂತವೀರ್ಯಗಳನ್ನು ಹೊಂದಿ ಅರಹಂತ ಪರಮಾತ್ಮನಾಗುತ್ತಾನೆ.

ಈ ಜೀವನ್ಮುಕ್ತ (ಅರಹಂತ) ಪರಮಾತ್ಮನಾದ ಜ್ಞಾನಸೂರ್ಯನು ಕರ್ಮರೂಪಿ ಮೇಘಗಳ ಆವರಣದಿಂದ ಹೊರಬಂದು ಪೂರ್ಣ ಜ್ಞಾನ ಪ್ರಕಾಶದಿಂದ ಪ್ರಜ್ವಲಿತನಾಗುತ್ತಾನೆ. ಅವನು ಜ್ಞಾನದಲ್ಲಿ ಲೋಕದ ಸಮಸ್ತ ಪದಾರ್ಥಗಳು ತಂತಮ್ಮ ಭೂತ, ಭವಿಷ್ಯತ್ ಹಾಗೂ ವರ್ತಮಾನಕಾಲ ಸಂಬಂಧಿ ಸಮಸ್ತ ಗುಣ ಹಾಗೂ ಪರ್ಯಾಯಗಳನ್ನು ತಿಳಿಯುತ್ತಾನೆ. ಜ್ಞಾನ ಪ್ರಕಾಶದ ಜೊತೆ ಆ ಜೀವನ್ಮುಕ್ತ ಆತ್ಮವು ದಿವ್ಯ, ಅಲೌಕಿಕ, ಅನುಪಮ ಆನಂದದಲ್ಲಿ ಮಗ್ನವಾಗುವುದು. ಈ ಅನುಪಮ ಆನಂದ ಅಮೃತರಸವನ್ನು ಪ್ರತಿಕ್ಷಣವೂ ಸೇವಿಸುತ್ತದೆ. ಲೋಕದ ಕಲ್ಯಾಣಾರ್ಥವಾಗಿ ಆ ಜೀವನ್ಮುಕ್ತ ಪರಮಾತ್ಮನ ದಿವ್ಯವಾಣಿಯ ಸಂಚಾರವಾಗುವುದು; ಅದನ್ನು ಕೇಳಿದ ಮಾತ್ರಕ್ಕೆ ಅನೇಕ ಪ್ರಾಣಿಗಳಿಗೆ ಜ್ಞಾನವು ಪ್ರಾಪ್ತಿಯಾಗುವುದು ಮತ್ತು ನಿಜ ಆತ್ಮೋನ್ನತಿಯ ಕಡೆಗೆ ಶ್ರದ್ಧೆಯುಂಟಾಗುವುದು.

ಮೇಲೆ ಹೇಳಿದ ಜೀವನ್ಮುಕ್ತ ಅವಸ್ಥೆಯಲ್ಲಿದ್ದುಕೊಂಡು, ಸಂಸಾರದ ಅನೇಕ ಭವ್ಯಜೀವಗಳ ಕಲ್ಯಾಣವನ್ನುಂಟುಮಾಡುತ್ತ, ನಾಮ, ಆಯು, ಗೋತ್ರ ಹಾಗೂ ವೇದನೀಯ ಈ ನಾಲ್ಕು ಅಘಾತೀಯ ಕರ್ಮಗಳ ನಾಶವೂ ಆಗಿ, ಪೂರ್ಣ ಕರ್ಮವು

ಕ್ಷೀಣವಾದ ಮೇಲೆ ಪರಮಶುದ್ಧ ಆತ್ಮನು ಭೌತಿಕ ಶರೀರವನ್ನು ತ್ಯಜಿಸಿ, ಕರ್ಮಬಂಧನದಿಂದ ಸರ್ವಥಾ ಮುಕ್ತನಾಗಿ ಲೋಕದ ಶಿಖರದ ಮೇಲೆ ವಿರಾಜಮಾನವಾಗುವನು. ಅಲ್ಲಿ ಆ ಶುದ್ಧ ಸಿದ್ಧಪರಮಾತ್ಮನು ಎಂದೆಂದಿಗೂ ಅನುಪಮ ದಿವ್ಯ ಆನಂದದಲ್ಲಿ ಮಗ್ನವಾಗಿರುವನು ಮತ್ತು ಅದರ ಅನಂತ ದಿವ್ಯಜ್ಞಾನಜ್ಯೋತಿಯಲ್ಲಿ ಸಂಸಾರದ ಸಮಸ್ತ ಪದಾರ್ಥಗಳು ತಮ್ಮ ಅನಂತಗುಣ ಮತ್ತು ಪರ್ಯಾಯಗಳ ಸಹಿತ ಆಲೋಕಿತವಾಗಿರುವವು. ಕರ್ಮಬಂಧನದಿಂದ ಸರ್ವಥಾ ಮುಕ್ತವಾದ ಮೇಲೆ, ಪರಮಾತ್ಮನನ್ನು ಪುನಃ ಯಾವುದಾದರೂ ನವೀನ ಕರ್ಮಬಂಧನಕ್ಕೆ ಸಿಲುಕಿಸುವ ಯಾವುದೇ ದೋಷವು ಉಳಿಯುವುದಿಲ್ಲ. ಈ ಪ್ರಕಾರ ಆ ಸಿದ್ಧಪರಮಾತ್ಮನು ತನ್ನ ಶುದ್ಧ ಚಿದಾನಂದ ಸ್ವರೂಪದಲ್ಲಿ ಶಾಶ್ವತವಾಗಿ ಹಾಗೂ ವಿರಾಜಮಾನನಾಗಿರುತ್ತಾನೆ. ಸಿದ್ಧಅವಸ್ಥೆಯಲ್ಲಿ ಈ ಆತ್ಮವು ಕೃತಕೃತ್ಯವಾಗುವುದು ಎಂದರೆ, ಯಾವುದನ್ನು ಮಾಡಲಿಕ್ಕಿತ್ತೋ ಅದನ್ನು ಮಾಡಿಕೊಂಡು ಇನ್ನು ಮಾಡಲು ಏನೂ ಉಳಿಯದಂತಿರುವ ಅವಸ್ಥೆಯನ್ನು ಹೊಂದುವುದು. ಮುಕ್ತಾತ್ಮವು ತನ್ನ ನಿರಾವರಣ ಅನಂತಶಕ್ತಿ ಸಹಿತ ತನ್ನ ಅನಂತದರ್ಶನ ಹಾಗೂ ಅನಂತಜ್ಞಾನ ಸ್ವರೂಪಗಳಿಂದ ಪರಮ ಜ್ಞಾನಾನಂದದಲ್ಲಿ ಅತಿಶಯ ಮಗ್ನವಾಗಿ ನಿರಂತರವೂ ಲೋಕದ ಶಿಖರಸ್ಥಿತ ಮೋಕ್ಷ ಸ್ಥಾನದಲ್ಲಿ ಪ್ರಕಾಶಮಾನ ವಾಗಿರುವುದು. ಆ ಕುರಿತು ಹೀಗೆ ಹೇಳಿದೆ:

ಲೋಕಾಗ್ರ ಶಿಖರವಾಸೀ ಸರ್ವಲೋಕ ಶರಯ್ಯಕಃ।
ಸರ್ವ ದೇವಾಧಿಕೋ ದೇವೋ ಹ್ಯಷ್ಟಮೂರ್ತಿ ದಯಾಧ್ವಜಃ॥
ಅಚ್ಛೇದ್ಯೋ ನಭೇದ್ಯಶ್ಚ ಸೂಕ್ಷ್ಮೋ ನಿತ್ಯೋ ನಿರಂಜನಃ।
ಅಜರೋಹ್ಯಮರಶ್ಚೈವ ಶುದ್ಧ ಸಿದ್ಧೋ ನಿರಾಮಯಃ॥
ಅಕ್ಷಯೋಹ್ಯವ್ಯಯಃ ಶಾಂತಃ ಶಾಂತಿ ಕಲ್ಯಾಣಕಾರಕಃ।
ಸ್ವಯಂಭೂ ವಿಶ್ವ ದೃಶ್ವಾಚ ಕುಶಲಃ ಪುರುಷೋತ್ತಮಃ॥

**ಅರ್ಥ:–** ಸಿದ್ಧ ಪರಮಾತ್ಮನು ಲೋಕಾಗ್ರ ಶಿಖರದಲ್ಲಿ ವಾಸ ಮಾಡಿಕೊಂಡಿರುತ್ತಾನೆ. ಸಂಪೂರ್ಣ ಸಂಸಾರದ ಪ್ರಾಣಿಗಳಿಗೆ ಶರಣಭೂತನಾಗಿರುತ್ತಾನೆ. ಸರ್ವ ದೇವರಿಗೆ ಮಹಾದೇವನಾಗಿರುತ್ತಾನೆ. ಸಮ್ಯಕ್ತ್ವಾದಿ ಅಷ್ಟಗುಣಧಾರಿ ಶುದ್ಧಾತ್ಮಸ್ವರೂಪಿಯಾಗಿರುತ್ತಾನೆ. ದಯೆಯ ಧ್ವಜವೂ, ಭೇದರಹಿತನೂ, ಭೇದಭಾವರಹಿತನೂ ಹಾಗೂ ಅತೀಂದ್ರಿಯ ಮತ್ತು ಸೂಕ್ಷ್ಮನೂ ಆಗಿರುತ್ತಾನೆ. ಅವಿನಾಶಿಯೂ ಕರ್ಮಾಂಜನ ರಹಿತ ನಿರಂಜನನೂ ಆಗಿರುತ್ತಾನೆ. ಅಜರನೂ, ಅಮರನೂ, ಶುದ್ಧನೂ, ಸಿದ್ಧನೂ, ಬಾಧಾರಹಿತನೂ,



ಪ್ರತ್ಯಕ್ಷನೂ, ಅವ್ಯಯನೂ, ಶಾಂತನೂ, ಸುಖಿ ಮತ್ತು ಸದಾನಂದನೂ, ಸ್ವಯಂಭುವೂ, ವಿಶ್ವದರ್ಶಿಯೂ, ಮಂಗಲಮಯನೂ, ಪರಮಾತ್ಮನೂ ಆಗಿರುತ್ತಾನೆ. ಹೀಗಾಗಿ ಪತಿತಾತ್ಮನೇ ಪ್ರಯತ್ನದಿಂದ ಮಹಾತ್ಮನಾಗಿ ಸಾಧನೆಯಿಂದ ಪರಮಾತ್ಮಸಿದ್ಧಾತ್ಮನಾಗುತ್ತಾನೆ. ಅದು ಮತ್ತೆ ಈ ಸಂಸಾರಕ್ಕೆ ಹಿಂದಿರುಗುವುದಿಲ್ಲ.

## 21. ಯಾರ ಭಕ್ತಿ ಶ್ರೇಷ್ಠವಾದುದು?

ಯಾರು ಭಗವಂತನನ್ನು ದ್ರವ್ಯಗುಣಪರ್ಯಾಯಗಳೊಂದಿಗೆ ತಿಳಿಯುತ್ತಾರೋ ಅವರು ತನ್ನ ಆತ್ಮಸ್ಥಿತಿಯನ್ನೂ ತಿಳಿದು ಉತ್ತರೋತ್ತರ ಭಗವಂತನ ಸಾನ್ನಿಧ್ಯವನ್ನು (ಮುಕ್ತಿಯನ್ನು) ಪಡೆಯುತ್ತಾರೆ. ತನ್ನಾತ್ಮನ ಸಹಜಶಕ್ತಿಯನ್ನು ಗುರ್ತಿಸಿ ವೀತರಾಗ ಭಾವಮುದ್ರೆಯಲ್ಲಿ ಅಂತರ್ಮುಖಿ ಯಾದರೆ ಜಿನಗುಣಸಂಪತ್ತಿಯು ಒದಗುತ್ತದೆ. ಇದರ ಕ್ರಮವಾದ ಅಭ್ಯಾಸ ದಿಂದಲೇ ಮುಕ್ತಿಮಂದಿರವನ್ನು ತಲುಪಬಹುದು. ಇಲ್ಲಿ ದೃಢತೆ ಅಥವಾ ಭಕ್ತಿ ಬೇಕು. ಅದಕ್ಕಾಗಿಯೇ ಈ ಭವದಲ್ಲಿ ಶ್ರದ್ಧಾಭಕ್ತಿ, ಜ್ಞಾನವೈರಾಗ್ಯಗಳ ಅಭ್ಯಾಸ ಬೇಕು. ಇದಕ್ಕೆ ಯಾರುಬೇಕಾದರೂ ತೀವ್ರವಾದ ಶುದ್ಧ ಪರಿಣಾಮದಿಂದ ಭವಮಾಲೆಯನ್ನು ಹರಿದು ಮುಕ್ತಿಪುರವನ್ನು ಸೇರಬಹುದು.

ಒಮ್ಮೆ ಸೌಧರ್ಮಸ್ವರ್ಗದಲ್ಲಿ ಇಂದ್ರ ಮತ್ತು ಶಚೀದೇವಿಯರು ರತ್ನಖಚಿತವಾದ ದಿವ್ಯಸಿಂಹಾಸನದಲ್ಲಿ ಕುಳಿತಿದ್ದರು. ಅವರ ಎದುರಿಗೆ ಸಾಮಾನಿಕ ದೇವತೆಗಳೂ, ಪರಿಷದ್ ದೇವತೆಗಳೂ ಯಥಾಸ್ಥಾನದಲ್ಲಿ ಮಂಡಿಸಿದ್ದರು. ಅಂದಿನ ಸಭೆಯಲ್ಲಿ ಭಕ್ತಿಯ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಗ ಶಚೀದೇವಿಯು ಇಂದ್ರನನ್ನು ಕುರಿತು ಹೇಳುತ್ತಾಳೆ: 'ಸ್ವಾಮಿ ತಮ್ಮ ಜೀವನವು ಪವಿತ್ರವೂ ಕೃತಕೃತ್ಯವೂ ಆಗಿದೆ ತಾವೇ ಪ್ರಪ್ರಥಮವಾಗಿ ಜಿನಶಿಶುವಿಗೆ ಜನ್ಮಾಭಿಷೇಕ ಸಮಯದಲ್ಲಿ 1008 ಕಲಶಗಳಿಂದ ಅಭಿಷೇಕ ಮಾಡುತ್ತೀರಿ; ಭಕ್ತಿಭಾವೋದ್ರೇಕದಿಂದ ನೃತ್ಯಮಾಡುತ್ತೀರಿ; ಐರಾವತವನ್ನು ನಡೆಸುವ ಮಾವಟಿಗನಾಗುತ್ತೀರಿ; ಛತ್ರಿಯನ್ನಿಡಿಯುತ್ತೀರಿ; 1008 ಹೆಸರುಗಳಿಂದ ಭಗವಂತನ ಸ್ತುತಿ ಮಾಡುತ್ತೀರಿ; ಭಗವಂತನ ಪಂಚಕಲ್ಯಾಣಗಳೆಲ್ಲಾ ತಮ್ಮ ನೇತೃತ್ವದಲ್ಲೇ ಆಗುತ್ತವೆ. ಆದುದರಿಂದ ತಮ್ಮ ಭಕ್ತಿಯು ಮಹಾ ಶ್ರೇಷ್ಠ ವಾದುದು. ಮುಂದಿನ ಭವದಲ್ಲೇ ಮುಕ್ತಿಯನ್ನು ಪಡೆಯುತ್ತೀರಿ. ತಮ್ಮ ಜೀವನ

ಸಫಲವಾಯಿತು' ತಾವು ಧನ್ಯರು ಎಂದಳು.

ಆಗ ಇಂದ್ರನು ನಸುನಕ್ಕು ಹೇಳುತ್ತಾನೆ- 'ಮಹಾದೇವಿ ನೀನು ಹೇಳಿದುದೆಲ್ಲಾ ನಿಜ. ಆದರೂ ನೀನು ಮಾಡುವ ಭಕ್ತಿಯು ಕಡಿಮೆಯಾದುದೇ? ನೀನು ನನಗಿಂತಲೂ ಮುಕ್ತಿಮಾರ್ಗದಲ್ಲಿ ಮುಂದೆ ಇದ್ದೀಯೇ. ನನಗಿಂತಲೂ ಮುಂಚೆ ಜನ್ಮಕಲ್ಯಾಣದ ಪ್ರಾರಂಭದಲ್ಲಿ ಪ್ರಥಮವಾಗಿ ಹೋಗಿ ಜಿನಮಾತೆಯ ಪ್ರಸೂತಿಕಾಗೃಹವನ್ನು ತಲುಪಿ ಜಿನಶಿಶುವನ್ನು ದರ್ಶನ ಮಾಡಿ ನಮಸ್ಕರಿಸುತ್ತೀಯೆ. ಭಗವಂತನ ಪ್ರಥಮ ದರ್ಶನ ನಿನಗಾಗುತ್ತದೆ. ನಿನ್ನ ಕೋಮಲಕರಗಳಿಂದ ಜಿನಶಿಶುವನ್ನು ಎತ್ತಿ ಮುದ್ದಾಡುತ್ತೀಯೇ. ಈ ಸೌಭಾಗ್ಯ ನಿನಗೆ ತಾನೇ ಲಭಿಸುವುದು. ನೀನು ಜಿನಶಿಶುವನ್ನು ನನಗೆ ತಂದುಕೊಟ್ಟನಂತರ ತಾನೇ ನಾನು ಅಭಿಷೇಕ ಇತ್ಯಾದಿಗಳನ್ನು ಮಾಡುವುದು. ಆ ಕೆಲಸ ಕಾರ್ಯಗಳಲ್ಲಿ ನೀನೂ ಭಾಗಿಯಾಗುವೆಯಲ್ಲಾ! ಇಲ್ಲಿನ ದೇವಗಣವೂ ಭಾಗವಹಿಸುವುದು. ಆದ್ದರಿಂದ ನನಗಿಂತಲೂ ನಿನ್ನ ಜೀವನವು ಸಫಲವಾಯಿತು.'

ಈ ಮಾತು ಕೇಳಿ ಶಚೀದೇವಿಯು ಅನಂದದಿಂದ ನಕ್ಕು ತಲೆತಗ್ಗಿಸಿದಳು. ಸಭಾಸದರೂ ಶಚೀದೇವಿಯನ್ನು ಕೊಂಡಾಡಿದರು.

ಇಂದ್ರನು ತನ್ನ ಮಾತನ್ನು ಮುಂದುವರಿಸುತ್ತಾ "ಮಹಾದೇವಿ ನನ್ನ ಆಯಸ್ಸು ಇನ್ನೂ ಒಂದು ಸಾಗರಕ್ಕಿಂತಲೂ ಹೆಚ್ಚಿದೆ. ನಿಜವಾಗಿ ನೋಡಿದರೆ ನಿನ್ನ ಆಯಸ್ಸು ಬಹಳ ಕಡಿಮೆ, ಆದುದರಿಂದ ನೀನು ನನಗಿಂತಲೂ ಮುಂಚೆಯೇ ಸ್ವರ್ಗದಿಂದ ಚ್ಯುತಳಾಗಿ ಮಾನವ ಲೋಕದಲ್ಲಿ ಪುರುಷ ಜನ್ಮವನ್ನು ಹೊಂದಿ ಶುಭಭಾವನೆಯಿಂದ ಅರಹಂತರ ದ್ರವ್ಯಗುಣ ಪರ್ಯಾಯಗುಣಗಳನ್ನು ತಿಳಿದು ಭಕ್ತಿಯಿಂದ ಪೂಜಿಸಿ ಪ್ರಾರ್ಥಿಸಿ ಸಂಸಾರ ಶರೀರ ಭೋಗಗಳಿಂದ ವಿರಾಗವನ್ನು ಹೊಂದಿ ಮುನಿಪದವಿಯನ್ನು ಪಡೆದು ಅತಿಚಾರ ರಹಿತವಾಗಿ ತಪವನ್ನು ಮಾಡಿ ಕೇವಲ ಜ್ಞಾನವನ್ನು ಪಡೆದು ನಂತರ ಮುಕ್ತಿಯನ್ನು ಹೊಂದುತ್ತೀಯೇ. ಆಗ ನಾನು ನಿನ್ನ ತಪ, ಕೇವಲ ಜ್ಞಾನ, ನಿರ್ವಾಣ ಕಲ್ಯಾಣಗಳ ಪೂಜೆಯನ್ನು ಮಾಡಿ ನಮಿಸಬೇಕಾಗುತ್ತದೆ. ಈಗ ಹೇಳು-ಯಾರ ಭಕ್ತಿಶ್ರೇಷ್ಠವಾದುದು? ಯಾರ ಜೀವನವು ಧನ್ಯವಾದುದು? ಇದಕ್ಕೆ ಕಾರಣ: ಈ ಹಿಂದೆ ಜಿನಗುಣ ಸಂಪತ್ತಿಯನ್ನು ಪಡೆಯುವ ಅರಹಂತರ ಪೂಜೆ, ಗುರುಸೇವೆ, ಧರ್ಮಪ್ರಭಾವನೆ ಸಂಯಮಸಾಧನೆ, ತಪಸ್ಸು, ಮತ್ತುದಾನ, ವ್ರತ, ನೋಂಪಿ ಇತ್ಯಾದಿಗಳನ್ನು ಭಕ್ತಿಭಾವದಿಂದ ಮಾಡಿ ಈ ದೇವಿಪರ್ಯಾಯವನ್ನು ಪಡೆದಿದ್ದೀಯೆ ಸ್ತ್ರೀಯಾದರೇನು? ಈ



ಜಿನಗುಣಸಂಪತ್ತಿಯಲ್ಲಿ ಪುರುಷರಿಗಿಂತ ಮಿಗಿಲಾಗಲಿಲ್ಲವೆ? ಇಲ್ಲಿಯೂ ತೀರ್ಥಂಕರರ ಪಂಚಕಲ್ಯಾಣ, ನಂದೀಶ್ವರ ಭಕ್ತಿ, ಅಕೃತಿಮ ಚೈತ್ಯಾಲಯಗಳ ದರ್ಶನವನ್ನು ಮಾಡುತ್ತಾ ಈ ದೇವಪರ್ಯಾಯವನ್ನು ಸಾರ್ಥಕ ಮಾಡಿ ಕೊಂಡಿದ್ದೀಯೆ. ಈ ದೃಷ್ಟಿಯಿಂದ ನೀನು ಧನ್ಯಳು. ಯಾರೇ ಆಗಲಿ ಇದ್ದದ್ದರಲ್ಲಿ ತೃಪ್ತಿಪಟ್ಟುಕೊಂಡು ಕರ್ತವ್ಯವನ್ನು ಬಿಡದೇ ನಿಶ್ಚಯದಲ್ಲಿ ನಡೆಯುತ್ತಿರಬೇಕು." ಎಂದನು.

ಇಂದ್ರಾಣಿಗೆ ಆನಂದವಾಯಿತು. ಆಕೆಯ ಭಕ್ತಿಯಭಾವನೆ ಮತ್ತಷ್ಟು ದೃಢವಾಯಿತು. ಸಭಾಸದರು ಇಂದ್ರ-ಇಂದ್ರಾಣಿಯರು ಜಿನೇಂದ್ರ ಭಕ್ತಿಯಲ್ಲಿ ತೋರಿಸುತ್ತಿರುವ ಸ್ಪರ್ಧೆಯನ್ನು ಹೊಗಳಿದರು.

## 22. ಯೋಗ್ಯತೈವ ಕಾರಣಮ್

ಜಗತ್ತಿನಲ್ಲೆಲ್ಲಾ ಸರ್ವಶ್ರೇಷ್ಠವೆನಿಸಿದ ಜೈನಧರ್ಮದ ಹೆಗ್ಗುರುತಾದ ಮಹಾಪುರಾಣವು ಸಮಾಜದ ಅಮೃತಕಲಶವಿದ್ದಂತೆ. ಇದು ಚಿರಕಾಲವೂ ಧರ್ಮಾಮೃತದ ಹೊನಲನ್ನು ಹರಿಸುತ್ತಲಿರುತ್ತದೆ. ಈ ಪವಿತ್ರ ಧರ್ಮತೀರ್ಥದಲ್ಲಿ ಸ್ನಾನಮಾಡಿದ ಜೀವಿಗಳು ಅಂದರೆ ಮಹಾಪುರಾಣವನ್ನು ಓದಿ ಕೇಳಿದವರು ಪಾವನರಾಗುವುದರಲ್ಲಿ ಸಂದೇಹವೇ ಇಲ್ಲ. ಇಂತಹ ಪವಿತ್ರ ಬೃಹದ್ ಗ್ರಂಥದ ರಚನೆಯು ಭಗವತ್ ಜಿನ ಸೇನಾಚಾರ್ಯರು ಮತ್ತು ಅವರ ಶಿಷ್ಯರಾದ ಗುಣಭದ್ರಾಚಾರ್ಯರಿಂದ ಆದುದು ಎಂಬುದು ಜೈನ ಜಗತ್ತಿಗೇ ಗೊತ್ತಿದೆ. ಇಂತಹ ಆಚಾರ್ಯರಿಗೆ ಪರಮಶಿಷ್ಯನಾದ ಅಮೋಘವರ್ಷನು ರಾಷ್ಟ್ರಕೂಟ ನರೇಶನೆಂದ ಮೇಲೆ ಆ ಪರ್ವ ಕಾಲದಲ್ಲಿ ರಚನೆಯಾದ ಮಹಾಪುರಾಣವೂ ಮತ್ತು ಕರ್ಮಪ್ರಾಭೃತ ಜಯಧವಲವೆಂಬ ಟೀಕಾ ಗ್ರಂಥವೂ ಶಾಶ್ವತವಾಗಿ ಬೆಳಗುವುದು ಸಹಜವೇ ಸರಿ.

ಅಮೋಘವರ್ಷನ ಆಡಳಿತ ಕಾಲವೆಂದರೆ ಕ್ರಿ.ಶ. 815 ರಿಂದ 877 ಎಂದು ನಿಶ್ಚಯವಾಗಿದೆ. ಈತನಿಗೆ ಗುರು ಕೃಪೆಯು ಅಪಾರವಾಗಿತ್ತು. ಅವರ ಸೇವಾ

ತತ್ಪರತೆಯ ಫಲದಿಂದಲೇ ಕವಿರಾಜ ಮಾರ್ಗದಂತಹ ಲಕ್ಷಣ ಗ್ರಂಥವನ್ನೂ ಮತ್ತು ಪ್ರಶ್ನೋತ್ತರ ಮಾಣಿಕ್ಯಮಾಲಾ ಎಂಬ ಸಂಸ್ಕೃತ ಗ್ರಂಥವನ್ನೂ ಆತ ಬರೆದು ಸಂಸ್ಕೃತ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಕಲಶಪ್ರಾಯನಾದನು. ಈ ಅಮೋಘವರ್ಷನ ಕಾಲದಲ್ಲೇ ಶ್ರೀ ಜಿನಸೇನಾ ಚಾರ್ಯರ ಪರಮ ಗುರುಗಳಾದ ಶ್ರೀ ವೀರಸೇನಾಚಾರ್ಯರು ಮಹಾವೀರ ಸ್ವಾಮಿಯವರ ತೀರ್ಥಕಾಲದಿಂದ ಬಂದ ಗುರುಪರಂಪರೆಯಲ್ಲಿ ಆ ಕಾಲಕ್ಕೆ ಮುಖ್ಯಸ್ಥರಾದ ಒಬ್ಬ ಯತಿವರ್ಯರಾಗಿದ್ದರು. ಇವರ ಆಶೀರ್ವಾದ ಕೃಪಾಕಟಾಕ್ಷದಲ್ಲಿ ಅಮೋಘವರ್ಷನು ಬಹು ಧಾರ್ಮಿಕನೆನಿಸಿ ರಾಜ್ಯವಾಳಿದನು.

ಈ ವೀರಸೇನಾಚಾರ್ಯರಿಗೆ ಅನಾದಿ ಪರಂಪರೆಯಿಂದ ಬಂದ ಜೈನಧರ್ಮ ಸಿದ್ಧಾಂತದ ಪರಿಚಯವಿತ್ತು. ಇವರು ಷಟ್ ಖಂಡಾಗಮದ ಜೀವ ಟ್ಠಾಣಾದಿ ಐದು ಖಂಡಗಳ ಮೇಲೆ ಸುಮಾರು ಇಪ್ಪತ್ತು ಸಾವಿರ ಶ್ಲೋಕ ಪ್ರಮಾಣದ ಕರ್ಮ ಪ್ರಾಭೃತವೆಂಬ ಗ್ರಂಥವನ್ನು ರಚನೆಮಾಡಿ ಇಂದಿನ ಪೀಳಿಗೆಗೆ ಜಿನಾಗಮದ ಸಿದ್ಧಾಂತದ ಸೂಕ್ಷ್ಮ ವಿಷಯವನ್ನು ತಿಳಿಸಿಹೋದರು. ಅವರು ಬಿಟ್ಟಿದ್ದ ಭಾಗವನ್ನು ಅವರ ಶಿಷ್ಯರಾದ ಶ್ರೀ ಜಿನಸೇನಾಚಾರ್ಯರು ಸುಮಾರು ನಲವತ್ತುಸಾವಿರ ಶ್ಲೋಕಗಳಿಂದ ಅದನ್ನು ಪೂರೈಸಿದರು. ಅವೆರಡೂ ಸೇರಿ ಅರವತ್ತು ಸಹಸ್ರ ಶ್ಲೋಕ ಪರಿಮಿತವಾದ ಜಯಧವಲವೆಂಬ ಜೈನ ಸಿದ್ಧಾಂತಗ್ರಂಥವು ಆಜರಾಮರವಾಗಿ ಈಗಲೂ ಮೂಡುಬಿದರೆಯ ಸಿದ್ಧಾಂತ ಬಸದಿಯಲ್ಲಿದೆ.

ಒಮ್ಮೆ ಶ್ರೀ ವೀರಸೇನಾಚಾರ್ಯರು ಕರ್ಮ ಪ್ರಾಭೃತ ಗ್ರಂಥವನ್ನು ರಚಿಸುತ್ತಾ ಅದರ ವ್ಯಾಖ್ಯಾನವನ್ನು ತನ್ನ ಶಿಷ್ಯವೃಂದಕ್ಕೆ (ತ್ಯಾಗಿಗಳಿಗೆ) ವಿವರಿಸುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಅಮೋಘವರ್ಷ ನರೇಶನು ಬಂದು ಭಕ್ತಿಯಿಂದ ಗುರುವಂದನೆ ಮಾಡಿ ಕುಳಿತನು. ಗುರುಗಳು ಗ್ರಂಥರಚನಾ ಕಾರ್ಯವನ್ನು ನಿಲ್ಲಿಸಿ ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಬಂದ ತನ್ನ ಶಿಷ್ಯನ ಯೋಗಕ್ಷೇಮವನ್ನು ವಿಚಾರಿಸಿ ಬಂದ ಕಾರಣವನ್ನು ಕೇಳಿದರು. ಅದಕ್ಕೆ ಅಮೋಘವರ್ಷನು ಕೈಜೋಡಿಸಿಕೊಂಡು 'ಭಗವಾನ್ ನನಗೊಂದು ಸಂಶಯ ಬಂದು ಅದರ ನಿವಾರಣೆಗೆಂದು ಬಂದೆ. ತಮ್ಮ ಬೃಹದ್ ಕಾರ್ಯಕ್ಕೆ ಅಡಚಣೆಮಾಡಿದೆ. ಕ್ಷಮಿಸಿರಿ. ದಯೆ ಇಟ್ಟು ನನ್ನ ಸಂಶಯ ನಿವಾರಣೆ ಮಾಡಿರಿ' ಎಂದನು. ಅದಕ್ಕೆ ಗುರುಗಳು,

'ಅದೇನು ನಿನ್ನಂತಹವನಿಗೆ ಬಂದ ಸಂಶಯ?' ಎಂದರು. 'ಸ್ವಾಮಿ ಇಂದ್ರನು ವಿಶಿಷ್ಟ ಜ್ಞಾನಿಯಾಗಿದ್ದರೂ ಸಹ ಒಂದು ಮಹತ್ತರವಾದ ಅಪರಾಧ ಮಾಡಿದ್ದಾನೆ. ಅದನ್ನು ಇಲ್ಲಿನವರೆಗೆ ಯಾರೂ ಪತ್ತೆಹಚ್ಚೇ ಇಲ್ಲ. ಹೀಗೇ ನಾನು



ಮಹಾವೀರಸ್ವಾಮಿಯ ಜೀವನ ದರ್ಶನವನ್ನು ಓದುತ್ತಿದ್ದಾಗ ನಾನು ಪತ್ತೆಮಾಡಿದ್ದೇನೆ. ಅವನು ಮಾಡಿರುವ ಅಪರಾಧಕ್ಕೆ ಈ ವಿಶ್ವದಲ್ಲೇ ಉಪಮೆ ಇಲ್ಲ. ಆತ ಹೀಗೇಕೆ ಮಾಡಿದ?' ಎಂದು ಉದ್ವೇಗ ಗೊಂಡವನಂತೆ ರಾಜ ಹೇಳಿದ.

ಅದಕ್ಕೆ ಗುರುಗಳು 'ರಾಜನ್ ಆತ ಮಾಡಿದ ಅಪರಾಧವಾದರೂ ಏನು? ಅದನ್ನೆ ನೀನು ಹೇಳಲಿಲ್ಲವಲ್ಲಾ?' ಎಂದರು.

'ಆಚಾರ್ಯರೇ ತ್ರಿಲೋಕ ಪೂಜ್ಯ ಭಗವಾನ್ ಮಹಾವೀರರಿಗೆ ಕೇವಲ ಜ್ಞಾನವಾಯಿತಲ್ಲಾ ಆದರೂ ಅವರಿಗೆ 66 ದಿನಗಳವರೆಗೆ ದಿವ್ಯ ಧ್ವನಿ ಹೊರಡಲಿಲ್ಲ.'

'ಹೌದು ಅಲ್ಲಿ ಗಣಧರರಿರಲಿಲ್ಲ. ಆದುದರಿಂದ ದಿವ್ಯ ಧ್ವನಿ ಹೊರಡಲಿಲ್ಲ.'

'ಸ್ವಲ್ಪ ಸ್ವಾಮಿ - ಅದನ್ನೇ ನಾನು ಹೇಳಲು ಬಂದಿರುವುದು. ಅಲ್ಲೇ ದೇವೇಂದ್ರನು ಮಾಡಿದ ತಪ್ಪು. ಅಲ್ಲಿದ್ದ ದೇವೇಂದ್ರನು ಅವಧಿ ಜ್ಞಾನಿಯಾಗಿದ್ದರೂ 66 ದಿನಗಳವರೆಗೆ ಸುಮ್ಮನಿದ್ದು ಅನಂತರ ಹೊರಟು ಗೌತಮರನ್ನು ಕರೆತಂದನಲ್ಲಾ. ಭಗವಾನರಿಗೆ ಕೇವಲ ಜ್ಞಾನವಾದ ದಿನವೇ ಅವರನ್ನು ಕರೆತರಬಹುದಿತ್ತಲ್ಲಾ. ಗುರುಗಳೇ ಹೀಗೇಕೆ ವಿಳಂಬ ಮಾಡಿದ. ಇದೇ ಆತ ಮಾಡಿದ ಮಹಾಪರಾಧ. 66 ದಿನಗಳವರೆಗೆ ಅಗಣಿತ ಪ್ರಾಣಿ ವರ್ಗಕ್ಕೆ ಧರ್ಮೋಪದೇಶವು ಒದಗದಂತೆ ಮಾಡಿದುದು ಅಪರಾಧವಲ್ಲವೇ? ಅವನಿಗೆ ಇದ್ದ ಅವಧಿ ಜ್ಞಾನದಿಂದ ಏನು ಪ್ರಯೋಜನ?' ಎಂದನು ರಾಜ.

ಅದಕ್ಕೆ ಆಚಾರ್ಯರು ಸಮಾಧಾನ ಹೇಳುತ್ತಾ 'ರಾಜನ್ ಉದ್ವೇಗಗೊಳ್ಳಬೇಡ ನಿನ್ನ ಪ್ರಶ್ನೆಯು ಅರ್ಥಪೂರ್ಣವೂ ವಿಚಾರಣೀಯವೂ ಅಹುದು ನಿಜ. ಆದರೆ ನೀನು ಇನ್ನೂ ಸ್ವಲ್ಪ ವಿಚಾರಿಸುತ್ತಾ ಹೊರಟು ತತ್ವ ಸಿದ್ಧಾಂತದ ಕಡೆ ಗಮನ ಹರಿಸಬೇಕಾಗಿತ್ತು. ಈ ವಿಷಯವನ್ನು ಬಹಳ ಸಾರಿ ಹೇಳಿಯಾಗಿದೆ. ಆದರೆ ನೀನು ಒಂದು ಕೈಲಿ ಕತ್ತಿ ಮತ್ತೊಂದು ಕೈಲಿ ಧರ್ಮ ಮತ್ತು ಲೇಖಣಿಗಳನ್ನು ಹಿಡಿದಿರುವುದರಿಂದ ಸಿದ್ಧಾಂತದ ವಿಷಯವನ್ನು ಮರೆಯುವುದು ಸಹಜವೇ ಸರಿ. ಆದರೂ ಬಿಡುವು ಮಾಡಿಕೊಂಡು ಸ್ವಾಧ್ಯಾಯ ಮಾಡುತ್ತಾ ಅನುಮಾನ ನಿವಾರಣೆಗೆಂದು ಬಂದಿದ್ದಿಯಲ್ಲಾ ನಿನ್ನ ಬಾಳು ಖಂಡಿತಾ ಕಮಲದ ಪತ್ರದಂತೆ ವ್ಯವಹಾರದಲ್ಲಿ ಅಂಟಿಯೂ ಅಂಟದಂತೆ ಇದೆ. ನೀನು ಧನ್ಯ. ಕೇಳು ನಾವೀಗ ಇದೇ ವಿಷಯದ ಬಗ್ಗೆ ಚರ್ಚೆ ನಡೆಸುತ್ತಿದ್ದೆವು. ಈ ನನ್ನ ಗ್ರಂಥ ರಚನೆಗೆ ನಿನ್ನ ಈ ಪ್ರಶ್ನೆಯ ಮಹತ್ವಪೂರ್ಣವಾದ ಒಂದು ಸೂತ್ರವನ್ನು ಸೇರಿಸುವಂತೆ ಮಾಡಿತು.

ನಿನಗೇ ಗೊತ್ತಿದೆ. ಯಾವುದಕ್ಕೂ ಲಬ್ಧಿ ಒದಗಬೇಕು. ಕಾಲಕೂಡಿಬರಬೇಕು. ಅಂದರೆ ಯಾವ ಕಾರ್ಯವಾಗುವುದಕ್ಕೂ ಕಾರಣಬೇಕು ಕಾರಣ ಒದಗುವುದಕ್ಕೂ ಯೋಗ್ಯತೆಬೇಕು. ಯೋಗ್ಯತೆ ಎಂಬುದೇ ಲಬ್ಧಿ ಅದು ದೇಶ, ಕಾಲ ಸ್ಥಿತಿ, ವರ್ತಮಾನಗಳು ಸೇರಿದಾಗಲೇ ಕಾರಣದ ರಚನೆಯಾಗುತ್ತದೆ. ತತ್‌ಸಂಬಂಧವಾದ ಕಾರ್ಯನಡೆದುಹೋಗುತ್ತದೆ. ಭಗವಾನ್ ವೃಷಭರಿಗೆ ನೀಲಾಂಜನೆಯ ನೃತ್ಯ ಕಾರಣವಾಯಿತಾದರೂ ಅಷ್ಟು ಕಾಲದವರೆಗೆ ಭೋಗಿಸಿದ್ದ ಅವರಿಗೆ ಆಗಿನ ಸಮಯದಲ್ಲೇ ವೈರಾಗ್ಯ ಉಂಟಾಗುವಂತಾಯಿತಲ್ಲವೇ ಜ್ಞಾಪಿಸಿಕೋ. ಅದೇ ವಿಷಯದ ಪ್ರಸ್ತಾಪವು ಈ ನನ್ನ ಗ್ರಂಥದ ರಚನೆಯಲ್ಲಿ ಸೇರಿಸಬೇಕಾಗಿದೆ ಅದೇ 'ಯೋಗ್ಯತೈವ ಕಾರಣಮ್' (ಜಯಧವಲದ ಆಧಾರ) ಎಂಬ ಸೂತ್ರವನ್ನು ನಿನ್ನಿಂದ ಇಲ್ಲಿ ಸೇರಿಸಬೇಕಾಯಿತು. ಈ ಯೋಗ್ಯತೆಗೆ ನೀನು ಕಾರಣ. ತತ್ವಾಭ್ಯಾಸಿಯಾದವರಿಗೆ ನಿನ್ನ ಪ್ರಶ್ನೆಯಂತಹ ಸಂಶಯ ಬರಲು ಕಾರಣವೇ ಇಲ್ಲ. ಅದರ ವಿವರಣೆ ಹೀಗಿದೆ. ಪ್ರತಿಯೊಂದು ದ್ರವ್ಯಕ್ಕೂ ತನ್ನದೇ ಆದ ಒಂದು ಸ್ವತಂತ್ರಗುಣವುಂಟು. ಉತ್ಪಾದ, ವ್ಯಯ, ಧ್ರೌವ್ಯಗುಣದಿಂದ ಕೂಡಿರುವುದೇ ಸತ್ ಆಗಿದೆ. ಆ ಸತ್ ಎಂಬುದೇ ದ್ರವ್ಯದ ಲಕ್ಷಣ ಅದಕ್ಕೆ ಪರ್ಯಾಯವತ್ ದ್ರವ್ಯವೆನ್ನುತ್ತಾರಲ್ಲವೇ... ತತ್ವಾರ್ಥ ಸೂತ್ರವನ್ನು ಜ್ಞಾಪಿಸಿಕೋ ಎಂದು ಆಚಾರ್ಯರು ಹೇಳುತ್ತಾ ಮುಂದುವರಿದು ಎಲ್ಲಾ ದ್ರವ್ಯಗಳಲ್ಲೂ ಪರಿಣತಿ (ಪರಿಣಮನ) ಎಂದರೆ ಹಳೇಪರ್ಯಾಯ ಕಳೆದು ಹೋಗಿ ಹೊಸ ಪರ್ಯಾಯ ಆಗುತ್ತಿರುವ ಕಾರ್ಯ ಸರ್ವದಾ ನಡೆಯುತ್ತಿರುತ್ತಲೇ ಇರುತ್ತೆ. ಆದರ ಪರಿಣತಿಯಲ್ಲಿ ಪರದ್ರವ್ಯದ ಅಪೇಕ್ಷೆಬೇಕೇ ಇಲ್ಲ. ಎಲ್ಲಾ ದ್ರವ್ಯಗಳೂ ಸ್ವತಂತ್ರರೂಪದಲ್ಲೇ ದ್ರವ್ಯ, ಕ್ಷೇತ್ರಕಾಲ, ಭವ, ಭಾವಕ್ಕನುಸರಿಸಿ ಪರಿಣತಿ ಹೊಂದುತ್ತಲೇ ಇರುತ್ತವೆ. ಇದಕ್ಕೆ ಯಾರ ಸಹಾಯ ನಿರೀಕ್ಷಣೆ, ನಿರ್ವಹಣೆ ರಕ್ಷಣೆ, ಚಾಲಕ ಬೇಕಿಲ್ಲ. ಯೋಗ್ಯತೆಯ ಕಾಲ ಮಾತ್ರ ಒದಗಬೇಕು. ಈ ಕಾರಣದಿಂದಲೇ ಸರ್ವ ದ್ರವ್ಯಗಳ (ಜೀವ, ಅಜೀವ) ಗುಣ ಪರ್ಯಾಗಳು ಯಥಾಸಮಯ ಆಗುತ್ತಲೇ ಇರುತ್ತವೆ. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಈ ಕಾರಣದಿಂದಲೇ ಭಗವಾನ್ ಮಹಾವೀರರಿಗೆ ಕೇವಲ ಜ್ಞಾನವಾದ ಸಮಯದಲ್ಲಿ ಗೌತಮರಿಗೆ ದೀಕ್ಷೆ ತೆಗೆದುಕೊಳ್ಳುವ ಯೋಗ್ಯತೆ ಒದಗಿರಲಿಲ್ಲ. ಹಾಗೂ ಆ ಸಮಯದಲ್ಲಿ ಶ್ರೋತೃಗಳು ಭಗವಂತನ ವಾಣಿಯನ್ನು ಕೇಳುವ ಯೋಗ್ಯತೆಯನ್ನು ಹೊಂದಿರಲಿಲ್ಲ. ಮುಖ್ಯ ಶ್ರೋತೃವಾದ ಶ್ರೇಣಿಕನು ಅಲ್ಲಿಗೆ ಬರಬೇಕಾದ ಯೋಗ್ಯತೆಯನ್ನು ಕಾಯಬೇಕಾಗಿತ್ತಲ್ಲವೆ? ಅಲ್ಲದೇ ಅಂತಿಮ ತೀರ್ಥೇಶನ ಕಾಲವದು. ಆ ರೀತಿಯಾದುದು ಮುಂದಿನ ಪಂಚಮ ಕಾಲದ ಸ್ಥಿತಿಯಲ್ಲಿ ಹೇಗೆ ಧರ್ಮ



ಪ್ರಭಾವನೆಯು ಮಂದಗತಿಯಲ್ಲಿ ಸಾಗುತ್ತಿರುತ್ತದೆ. ಎಂಬುದಕ್ಕೆ ಸೂಚಕವೂ ಆಗಿತ್ತು, ಇಷ್ಟೆ ಅಲ್ಲ. ದೇವೇಂದ್ರನು ಸಮವಸರಣದ ವೈಭವ ಅದರ ಕೌಶಲದ ವೀಕ್ಷಣೆ ಕೇವಲ ಜ್ಞಾನ ಕಲ್ಯಾಣದ ವೈಭವದಲ್ಲೇ ಮಗ್ನನಾಗಿದ್ದುದು ಅವನಿಗೆ ಸಮಯಸಾಗಿದುದೇ ಗೊತ್ತಾಗಲಿಲ್ಲ. ಅಲ್ಲದೆ ದೇವತೆಗಳಿಗೆ ನಮ್ಮ ಹಾಗೆ ಹೊತ್ತು ಕಳೆದುದು ಗೊತ್ತಾಗದು. ವೈಭವದ ಕಾಲಯಾಪನೆಯಲ್ಲಿ 66 ದಿನಗಳು ಅವನಿಗೆ ಕ್ಷಣದಂತೆ ಕಳೆದಿದೆ. ಅಲ್ಲದೆ ಭಗವಂತನ ವಾಣಿಯು ಹೊರಡಲಿಲ್ಲವೇಕೆಂಬ ಅವಧಿಯನ್ನು ಹಚ್ಚುವ ಯೋಗ್ಯತೆ ಉಂಟಾದುದು ಅವನಿಗೆ 66 ದಿನಗಳ ನಂತರ. ಆಗ ಹೊರಟ ಗಣಧರರನ್ನು ಪತ್ತೆ ಹಚ್ಚಿ ಕರೆತರಲು ದೇವೇಂದ್ರ. ಯಾರೇ ಆಗಲಿ ಯಾವಾಗ ಏನು ಆಗಬೇಕೋ ಆಗಲೇ ಆ ಕಾರ್ಯವಾಗುವುದು. ಆ ಸಮಯದಲ್ಲಿ ಭಗವಾನರಾದರೋ ಆತ್ಮಾನಂದದಲ್ಲಿ ಲೀನರಾಗಿದ್ದರು. ಕೇಳುವವರಿದ್ದರೆ ತಾನೆ ಹೇಳುವುದು? ಮದ್ದಳೆಯನ್ನು ಬಡಿದರೆ ತಾನೆ ಶಬ್ದ ಹೊರಡುವುದು? ಅದು ತಾನಾಗಿಯೇ ಶಬ್ದ ಮಾಡುವ ಪ್ರಮೇಯವಾದರೂ ಏನು? ಆನಂದಾತ್ಮ ಪರಿಪೂರ್ಣರಾದ ಮಹಾವೀರರು ಕಾಲವನ್ನು ಕಳೆಯುತ್ತಿದ್ದರು. ಲಬ್ಧಿ ಒದಗಿತು. ಗಣಧರರೂ ಬಂದರು. ಶ್ರೋತೃಗಳೂ ಸಿದ್ಧರಾದರು. ಓಂ ಕಾರವೂ ಹೊರಟಿತು. ಆ ಸಮಯ ಅಪೂರ್ವವಾದುದು. ಅದೇ ಅಭಿಜಿನ್ ಮುಹೂರ್ತದ ಪವಿತ್ರವಾದ ವೇಳೆ. ಆ ಸಮಯವೇ ವೀರವಾಣಿ ಜಯಂತಿಯ ನೆನಪು. ಆ ಲಬ್ಧಿ ಒದಗಲು ಕಾಲ ಒದಗಬೇಕಾಗಿತ್ತು. ಯಾವುದಕ್ಕೂ 'ಯೋಗ್ಯತೈವ ಕಾರಣಮ್? ತಿಳಿಯಿತೇ?' ಎಂದರು. ಇಷ್ಟೆಲ್ಲಾ ಆಗಲು 66 ದಿನಗಳು ಆಗಬೇಕಾಯಿತು.

ಇದನ್ನು ಕೇಳುತ್ತಿದ್ದ ನರೇಶನು ಆನಂದ ಬಾಷ್ಪವನ್ನು ಸುರಿಸುತ್ತಾ 'ಭಗವಾನ್ ಧನ್ಯನಾದೆ. ಒಂದು ಸಂಶಯ ನಿವಾರಣೆಯಾಗಿ ಮತ್ತೊಂದು ಉದ್ಭವವಾಯಿತು' ಎಂದನು. 'ಯೋಗ್ಯತೈವ ಕಾರಣ, ಅದೂ ಏನು ಹೇಳು?' ಎಂದರು ಆಚಾರ್ಯರು.

'ದೇವೇಂದ್ರನಿಗೆ ಕಾಲ ಕಳೆಯುವುದೇ ಗೊತ್ತಾಗುವುದಿಲ್ಲವೆಂದಿರೆಲ್ಲಾ ಮತ್ತೆ ಅದೇಕೆ ಸರ್ವಾರ್ಥಸಿದ್ಧಿಯ ಅಹಮಿಂದ್ರನು ತನ್ನ ಕಾಲವನ್ನು ಕಳೆಯಲು ಯೋಚಿಸುತ್ತಾನಂತೆಲ್ಲಾ ಏಕೆ?' ಎಂದನು ಅಮೋಘವರ್ಷನು.

ಅದಕ್ಕೆ ಆಚಾರ್ಯರು ತಲೆತೂಗಿ 'ಹೌದು ಅದೂ ಅಷ್ಟೇ ಕಾಲ ಕಾಯಬೇಕು. ಸರ್ವಾರ್ಥ ಸಿದ್ಧಿಯ ಅಹಮಿಂದ್ರನಿಗೆ 33 ಸಾಗರೋಪಮವರ್ಷ ಆಯುಷ್ಯವಿರುತ್ತದೆ. ಅದನ್ನು ಪುಣ್ಯದಿಂದ ಗಳಿಸಿದ ಪದವಿಯ ಪ್ರಾಪ್ತಿ. ಆದರೂ ಉತ್ಕೃಷ್ಟ ಶುಭ ಆಯುವೂ ಒಂದು ರೀತಿಯ ಸೆರೆವಾಸವಿದ್ದಂತೆ ಎಂದು ಆತ

ಭಾವಿಸುತ್ತಾನೆ. ಏಕೆಂದರೆ ನಾವಿನ್ನೂ 33 ಸಾಗರೋಪಮ ಈ ಸಂಸಾರದಲ್ಲಿರಬೇಕಲ್ಲಾ ಎಂದು.

'ಆದರೂ ಸ್ವಾಮಿ ಆತನಿಗೆ ಸುಖದಲ್ಲಿ ಸಮಯ ಕಳೆಯುವುದು ಗೊತ್ತಾಗುವುದೇ ಇಲ್ಲವಲ್ಲಾ. ಅಲ್ಲದೆ ಆತನಿಗೆ ಮರುಭವದಲ್ಲೇ ಮುಕ್ತಿ ತಾನೆ.' ಎಂದನು ರಾಜ 'ಹೌದು-ಹೌದು ಆತ ಮರುಭವದಲ್ಲೇ ಮುಕ್ತಿಗೆ ಹೋಗುವುದು ಸತ್ಯವಾದರೂ ಆತನ ಚಿಂತೆ ಮತ್ತೊಂದು' ಎಂದರು ಆಚಾರ್ಯರು.

'ಅದೇನು ಸ್ವಾಮಿ' -ಎಂದ ರಾಜ.

''ನನಗಿಂತ ತೀರಾ ಕೆಳಗಿನ ಪ್ರಥಮ ಸ್ವರ್ಗದ ಸೌಧರ್ಮೇಂದ್ರನು ನನಗಿಂತ ಅತಿ ಶೀಘ್ರವಾಗಿ ತನ್ನ ಆಯುವನ್ನು ಕಳೆದು ಮುಂದಿನ ಮನುಷ್ಯ ಪರ್ಯಾಯದಲ್ಲಿ ಮುಕ್ತಿಗೆ ಹೋಗುವನಲ್ಲಾ. ಅದೂ ಅಲ್ಲದೆ ಆತನಿಗಿಂತಾ ಮುಂಚೆಯೇ ಆತನ ಪತ್ನಿ ಇಂದ್ರಾಣಿಯು ಬೇಗ ಆಯುವನ್ನು ಕಳೆದು ಮರುಭವದಲ್ಲೇ ಈ ಸಂಸಾರದಿಂದ ಪಾರ ಹೊಂದಿ ಮುಕ್ತಿ ಹೊಂದುವಳಲ್ಲಾ... ನನ್ನ ಆಯುಷ್ಯದಲ್ಲಿ ಅನೇಕ ಇಂದ್ರ ಇಂದ್ರಾಣಿಯರು ಈ ಸಂಸಾರ ಬಂಧನದಿಂದ ಬಿಡುಗಡೆ ಹೊಂದುವರಲ್ಲಾ, ಅಯ್ಯೋ ಈ ಸುಖದ ಸಂಕೋಲೆ ಎಂದು ಬಿಡುಗಡೆಯಾಗಿ ನಾನು ಆತ್ಮಾನಂದದ ಅಮಿತ ಆತ್ಮಾನಂದವನ್ನು ಅನುಭವಿಸಿಯೇನೋ'' ಎಂದು ಆತ ತನ್ನ ಸ್ವರ್ಗಸುಖವನ್ನು ತುಚ್ಛೀಕರಿಸಿ 'ಇದು ನನಗೆ ಚಿನ್ನದ ಬೇಡಿಯ ಖೈದಿಯ ಮನೆ. ಕಾಲ ಕಳೆಯುವುದೇ ಕಷ್ಟ ಇದರಿಂದ ಬಿಡುಗಡೆ ಹೊಂದಿದರೆ ಸಾಕು' ಎಂದ ಆತ ಆಗಾಗ್ಗೆ ಯೋಚಿಸುವುದು ಸಹಜವೇ ಸರಿ. ಆದುದರಿಂದ ರಾಜನ್ ಆದಷ್ಟು ಬೇಗ ಈ ಸಂಸಾರದಿಂದ ಬಿಡುಗಡೆ ಹೊಂದಿ ಮುಕ್ತಿಗೆ ಕಾರಣವಾದ ಯೋಗ್ಯತೆಯನ್ನು ಹೊಂದುವುದು ಎಲ್ಲರಿಗೂ ಮುಖ್ಯ. ಮಾಯಾ ಮಿಥ್ಯ ನಿದಾನ ಶಲ್ಯರಹಿತರಾಗಿ ಶುದ್ಧ ತಪಾಚರಣೆಯಿಂದ ಯೋಗ್ಯತೆಯನ್ನು ಯಾರು ಬೇಕಾದರೂ ಪಡೆಯಬಹುದು. ಎಂದರು ಆಚಾರ್ಯರು.

ಅದು ಹೇಗೆ ಸ್ವಾಮಿ ಇದು ಪಂಚಮ ಕಾಲ. ಮುನಿಗಳಾಗಿ ಶಲ್ಯಾರಹಿತರಾಗಿ ತಪಾಚರಣೆ ಮಾಡಿದರೂ ಮುಕ್ತಿ ಸಾಧ್ಯವಿಲ್ಲ. ಸ್ವರ್ಗ ಪ್ರಾಪ್ತಿಯೇ ತಾನೆ ಎಂದನು ರಾಜ.

ಅದೇಕೆ ರಾಜಾ... ಶಲ್ಯರಹಿತರಾಗಿ ತಪಾಚರಣೆಯನ್ನು ಮಾಡಿ ಶುಭ ಪರಿಣಾಮದಿಂದ ಮಡಿದು ಸ್ವರ್ಗದಲ್ಲಿ ಜನ್ಮತಾಳಿದರೆ ಅಲ್ಲಿಂದ ಮುಂದಿನ ಜನ್ಮದಲ್ಲೇ ಮುಕ್ತಿಗೆ ಹೋಗುವ ಯೋಗ್ಯತೆಯನ್ನು ಪಡೆಯಲು ಸಾಧ್ಯವಿಲ್ಲವೇ?



ವಿಚಾರಿಸು ಎಂದರು.

ಹೌದುಸ್ವಾಮಿ! ತಮ್ಮ ಮಾತು ಸತ್ಯ ''ಯೋಗ್ಯತೈವ ಕಾರಣಂ'', ಯಾವುದಕ್ಕೂ ಕಾಲ ಬರಬೇಕು. ಯೋಗ್ಯತೆ ಇರಬೇಕು. ಎಂದು ರಾಜನು ತನ್ನ ಸಂಶಯವನ್ನು ನಿವಾರಣೆಮಾಡಿಕೊಂಡು ಮುನಿವಂದನೆಮಾಡಿ ತನ್ನ ಅರಮನೆಯತ್ತ ಸಾಗಿದನು.

ಹೀಗೆ ಅಮೋಘವರ್ಷನು ಆಗಾಗ್ಗೆ ಧಾರ್ಮಿಕ ವಿಷಯಗಳನ್ನು ಶ್ರೀ ವೀರಸೇನರೂ ನಂತರ ಜಿನಸೇನಾಚಾರ್ಯರಲ್ಲಿ ಚರ್ಚಿಸುತ್ತಾ ಶುದ್ಧ ಸಮ್ಯಗ್ದೃಷ್ಟಿಯಾಗಿ ಬಾಳಿ ಬೆಳಗಿದನು. ಕೊನೆಗೊಮ್ಮೆ ತನ್ನ ಮಗನಾದ ಎರಡನೇ ಕೃಷ್ಣನೆಂಬುವನಿಗೆ ರಾಜ್ಯವನ್ನು ವಹಿಸಿ ದೀಕ್ಷಾವಿಧಿಯಂತೆ ದಿಗಂಬರ ಯತಿಯಾಗಿ ತಪಸ್ಸುಮಾಡಿ ಪ್ರಶ್ನೋತ್ತರ ಮಾಣಿಕ್ಯಮಾಲಾ ಎಂಬ ಗ್ರಂಥವನ್ನು ರಚಿಸಿದನು.

ಬಹುಶಹ ಆತ ವೀರಸೇನಾಚಾರ್ಯರ ಹಿತೋಪದೇಶದಂತೆ ಶಲ್ಯರಹಿತನಾಗಿ ಜಿನಗುಣ ಸಂಪತ್ತಿಯನ್ನುಗಳಿಸಿ ಉತ್ತಮ ಸ್ವರ್ಗದಲ್ಲೇ ಹುಟ್ಟಿರಬೇಕು.

ಅಂತೂ ಅಮೋಘವರ್ಷನ ಆಡಳಿತ ಕಾಲವು ಜೈನಧರ್ಮ ಪ್ರಭಾವನೆಯ ಒಂದು ಪರ್ವ ಕಾಲವೇ ಆಗಿತ್ತು. ಆತನ ಕಾಲವನ್ನೂ, ಆತ ಮಾಡಿದ ಧರ್ಮ ಪ್ರಭಾವನೆಯನ್ನೂ ಕನ್ನಡ ನಾಡೇ ಏಕೆ ಇಡೀ ಭಾರತವೇ ಸ್ಮರಿಸಬೇಕು.

## 23. ಸಮವಸರಣ

ಎಲ್ಲಾ ತೀರ್ಥಂಕರರುಗಳಿಗೆ ನಾಲ್ಕು ಘಾತಿಕರ್ಮಗಳ ಕ್ಷಯದಿಂದ ಕೇವಲ ಜ್ಞಾನವಾದಕೂಡಲೇ ಅವರುಗಳು ಭೂಮಿಯಿಂದ 5000 ಬಿಲ್ಲು ಎತ್ತರದಲ್ಲಿ ವಿರಾಜ ಮಾನರಾಗುತ್ತಾರೆ. ತೀರ್ಥಂಕರರು ಕೇವಲಜ್ಞಾನ ಹೊಂದುವ ಅಂತಿಮ ಸಮಯದಲ್ಲಿ ಪದ್ಮಾಸನದಲ್ಲಿ ಅಥವಾ ಕಾಯೋತ್ಸರ್ಗದಲ್ಲಿದ್ದರೆ ಕೇವಲ ಜ್ಞಾನದ ನಂತರ ಕ್ರಮವಾಗಿ ಪದ್ಮಾಸನ ಅಥವಾ ಕಾಯೋತ್ಸರ್ಗದಲ್ಲಿರುತ್ತಾರೆ. 1, 12 ಮತ್ತು 22ನೇ ತೀರ್ಥಂಕರರುಗಳು ಪದ್ಮಾಸನದಿಂದಲೂ, ಉಳಿದ 21 ತೀರ್ಥಂಕರರು ಕಾಯೋತ್ಸರ್ಗದಿಂದಲೂ ಕೇವಲಜ್ಞಾನ ಹೊಂದಿದರು. ತೀರ್ಥಂಕರರುಗಳಿಗೆ

ಕೇವಲಜ್ಞಾನವಾದ ಸಮಯದಲ್ಲಿ ಭವನಲೋಕದಲ್ಲಿ ಶಂಖನಾದವೂ, ವ್ಯಂತರಲೋಕದಲ್ಲಿ ಭೇರಿನಾದವೂ, ಜ್ಯೋತಿರ್ಲೋಕದಲ್ಲಿ ಸಿಂಹನಾದವೂ, ಸ್ವರ್ಗಲೋಕದಲ್ಲಿ ಘಂಟಾನಾದವೂ ಆಗುತ್ತದೆ. ಆಗ ದೇವೇಂದ್ರರ ಆಸನಗಳು ಕಂಪಿಸುತ್ತವೆ. ಅವಧಿಜ್ಞಾನಸಂಪನ್ನನಾದ ಸೌಧರ್ಮೇಂದ್ರನು ಘಂಟಾನಾದ, ಆಸನಕಂಪ ಈ ಚಿಹ್ನೆಗಳಿಂದ ತೀರ್ಥಂಕರರ ಕೇವಲ ಜ್ಞಾನೋತ್ಪತ್ತಿಯನ್ನು ತಿಳಿದು, ಶಚಿದೇವಿಗೆ ವಿಷಯ ತಿಳಿಸುತ್ತಾನೆ. ಇಂದ್ರನ ಆಜ್ಞೆಯಂತೆ ಕುಬೇರನು ಸಮವಸರಣ-ಆಸ್ಥಾನ-ಸಭಾಮಂಟಪ (ಜಿನಸಭೆ-ಧರ್ಮಸಭೆ) ರಚನೆಯನ್ನು ಮಾಡುತ್ತಾನೆ. 'ಬಲಾಹಕ' ಎಂಬ ದೇವನು 'ಕಾಮಗ' ಎಂಬ ವಿಮಾನವನ್ನು ಮಾಡುತ್ತಾನೆ. 'ನಾಗದತ್ತ' ಎಂಬ ವಾಸನದೇವನು ಐರಾವತ ಗಜದ ಆಕಾರವನ್ನು ಧರಿಸಿ, ವಿಕ್ರಿಯೆಯಿಂದ ಮಾಡಲ್ಪಟ್ಟ ಆ ವಿಮಾನವನ್ನು ನಡೆಸುತ್ತಾನೆ. ಆ ವಿಮಾನದಲ್ಲಿ ಸೌಧರ್ಮೇಂದ್ರನೂ, ಈಶಾನೇಂದ್ರನೂ ಶಚಿದೇವಿ ಸಹಿತರಾಗಿ ಹೊರಡುತ್ತಾರೆ. ದೇವಸೈನ್ಯವೂ ತಮ್ಮ ತಮ್ಮ ವಿಮಾನಗಳಲ್ಲಿ ದೇವೇಂದ್ರರನ್ನು ಹಿಂಬಾಲಿಸುತ್ತದೆ. ಗಂಧರ್ವದೇವತೆಗಳ ವಾದ್ಯವನ್ನನುಸರಿಸಿ ಅಪ್ಸರ ಸ್ತ್ರೀಯರು ನರ್ತನವನ್ನು ಮಾಡುತ್ತಿರಲು ಮತ್ತು ಕಿನ್ನರದೇವತೆಗಳು ಗಾನಮಾಡುತ್ತಿರಲು ದೇವಸೈನ್ಯವು ಮುಂದೆ ಚಲಿಸುತ್ತಾ ಸಮವಸರಣಕ್ಕೆ ಬರುತ್ತದೆ. ಭವನ, ವ್ಯಂತರ ಮತ್ತು ಜ್ಯೋತಿಷ್ಕ ದೇವತೆಗಳು ತಮ್ಮ ತಮ್ಮ ಪರಿವಾರದೊಡನೆ ಸಮವಸರಣಕ್ಕೆ ಬರುತ್ತಾರೆ.

'ಸಮವಸರಣೈಕಾದಶ ಭೂಮಯಃ'. ಸಮವಸರಣದಲ್ಲಿ ಕ್ರಮವಾಗಿ 1) ಪ್ರಾಸದ ಚೈತ್ಯಭೂಮಿ 2)ಜಲಖಾತಿಕಾ ಭೂಮಿ 3)ಲತಾ ಭೂಮಿ 4)ಉಪವನಭೂಮಿ 5) ಧ್ವಜಮಾಲಾಭೂಮಿ 6) ಕಲ್ಪವೃಕ್ಷಾ ಭೂಮಿ 7)ಗೃಹ ಭೂಮಿ 8)ದ್ವಾದಶಗಣ ಪರಿವೃತಭೂಮಿ 9)ಪ್ರಥಮಪೀಠಭೂಮಿ 10)ದ್ವಿತೀಯಪೀಠಭೂಮಿ 11)ತೃತೀಯ ಪೀಠಭೂಮಿ ಹೀಗೆ 11 ಭೂಮಿಗಳಿರುತ್ತವೆ. 9,10,11ನೇ ಭೂಮಿಗಳಿಗೆ ತ್ರಿಮೇಖಲಾ ಪೀಠಗಳೆಂದು ಹೆಸರು. 8ನೇ ದ್ವಾದಶಗಣ ಪರಿವೃತಭೂಮಿ, ತ್ರಿಮೇಖಲಾ ಪೀಠಗಳನ್ನು ಒಂದೇ ಎಂದು ಪರಿಗಣಿಸಿದರೆ ಎಂಟೇ ಭೂಮಿಗಳಾಗುತ್ತವೆ.

ಈ ಸಮವಸರಣಕ್ಕೆ ನಾಲ್ಕು ದಿಕ್ಕಿನಲ್ಲಿಯೂ ಒಂದೊಂದು ದಿಕ್ಕಿನಲ್ಲಿ 20,000 ಸೋಪಾನ(ಮೆಟ್ಟಿಲು) ಗಳಿರುತ್ತವೆ. ಈ ಸೋಪಾನಗಳೆಲ್ಲಾ ರತ್ನಮಯವಾದವುಗಳು. ಕೆಳಗಿನ ಮೊದಲಿನ ಮತ್ತು ಮೇಲಿನ ಮೊದಲಿನ ಮೆಟ್ಟಿಲುಗಳಲ್ಲಿ ದೇವತೆಗಳು 'ಪಾದಲೇಪನ' ಎಂಬ ದಿವ್ಯಔಷಧಿಯನ್ನು



ಲೇಪಿಸಿರುತ್ತಾರೆ. ಇದರ ಶಕ್ತಿಯಿಂದ ಸಮವಸರಣಕ್ಕೆ ಹೋಗುವ ಭವ್ಯರು ಈ ಮೊದಲನೆ ಮೆಟ್ಟಿಲನ್ನು ತುಳಿದರೆ ಸಾಕು 20,000 ಮೆಟ್ಟಿಲನ್ನು ದಾಟಿ ಸಮವಸರಣ ಸೇರುವರು. ಸಮವಸರಣದಿಂದ ವಾಪಸ್ ಬರುವ ಭವ್ಯರು ಮೇಲಿನ ಮೊದಲನೆ ಮೆಟ್ಟಿಲನ್ನು ತುಳಿದರೆ ಸಾಕು 20,000 ಮೆಟ್ಟಿಲುಗಳ ಕೆಳಗಿರುವ ಭೂಮಿಯನ್ನು ಸೇರುವರು.

ಹೊರಭಾಗದಿಂದ ಮೊದಲು ವಲಯಾಕಾರದ ಧೂಳಿಸಾಲ (ರತ್ನಧೂಳಿಮಯ) ಮೊದಲನೆಯ ಕೋಟೆ ಇದೆ. ಈ ಕೋಟೆಯ 4 ಕಡೆಯಲ್ಲೂ 4 ಗೋಪುರಗಳಿವೆ. ಈ ಕೋಟೆಯ ಒಳಗೆ ಸಮವಸರಣದ ಮೊದಲೇ ಪ್ರಾಸಾದ ಚೈತ್ಯಭೂಮಿ ಇದೆ. ಈ ಭೂಮಿಗೆ ಪ್ರವೇಶಿಸುವ ಮಾರ್ಗಗಳ ಮಧ್ಯದಲ್ಲಿ ಬಂಗಾರದಿಂದ ನಿರ್ಮಿತವಾದ 4 ಮಾನಸ್ತಂಭಗಳಿವೆ. ಪ್ರತಿಯೊಂದು ಮಾನಸ್ತಂಭವು 3 ಅಂತಸ್ತಿನ ಪೀಠದ ಮೇಲೆ ಪ್ರತಿಷ್ಠೆಯಾಗಿರುತ್ತದೆ. ಮಾನಸ್ತಂಭದ ಬುಡದಲ್ಲಿ ಜಿನಪ್ರತಿಮೆಗಳಿರುತ್ತವೆ. ಈ ಜಿನಪ್ರತಿಮೆಗಳನ್ನು ದೇವೇಂದ್ರರು ಕ್ಷೀರಸಮುದ್ರದ ಜಲದಿಂದ ಪೂಜಿಸುತ್ತಾರೆ. ಈ ಮಾನಸ್ತಂಭಗಳು ದೇವೇಂದ್ರನಿಂದ ನಿರ್ಮಿತವಾದ್ದರಿಂದ 'ಇಂದ್ರ ಧ್ವಜ' ಎಂಬ ರೂಢಿಯನ್ನು ಹೊಂದಿದೆ. ಮಾನ(ಅಹಂಕಾರ-ಗರ್ವ)ವನ್ನು ಸ್ತಂಭನಮಾಡುವುದರಿಂದ ಮಾನಸ್ತಂಭ ಎಂಬ ಹೆಸರನ್ನು ಹೊಂದಿದೆ. ಈ ಮಾನಸ್ತಂಭಗಳ ಸುತ್ತಲೂ ನಾಲ್ಕು ಕೊಳಗಳಿವೆ. ಆ ಕೊಳಗಳ ಹೊರಗಿನ ಎರಡು ಮೂಲೆಗಳಲ್ಲಿ 2 ಕುಂಡಗಳಿವೆ. ಒಂದೊಂದು ಮಾನಸ್ತಂಭಕ್ಕೂ ಒಟ್ಟು 4X2=8 ಕುಂಡಗಳಿವೆ. ಈ ಕುಂಡಗಳು ಭಗವಂತನ ದರ್ಶನಕ್ಕೆ ಮೊದಲು ಜನರು ಕೈಕಾಲು ತೊಳೆದುಕೊಳ್ಳುವುದಕ್ಕೋಸ್ಕರ ನಿರ್ಮಿತವಾಗಿವೆ. ಈಗಲೂ ನಾವು ದೇವಸ್ಥಾನಕ್ಕೆ ಜಿನೇಶ್ವರನ ದರ್ಶನಕ್ಕೆ ಹೋದಾಗ ಕೈಕಾಲು ತೊಳೆದುಕೊಂಡು ಹೋಗುವ ಪದ್ಧತಿ ಇದೆ.

ಅಲ್ಲಿಂದ ಒಳಗೆ 2ನೇ 'ಜಲಖಾತಿಕಾಭೂಮಿ' ಇದೆ. ಅಲ್ಲಿ ಸುಗಂಧ ಜಲವೂ ತಾವರೆ, ಕುಮುದು ಪುಷ್ಪಗಳೂ, ಭ್ರಮರ ಮೊದಲಾದ ಪಕ್ಷಿಗಳೂ, ಜಲಚರಪ್ರಾಣಿಗಳೂ, ರತ್ನತಟಾಕಗಳೂ ಇವೆ.

ಅಲ್ಲಿಂದ ಒಳಗೆ 3ನೇ 'ಲತಾಭೂಮಿ' ಇದೆ. ಅಲ್ಲಿ ಮಲ್ಲಿಗೆ, ಕುಂದ, ಮಾಲತಿ ಮೊದಲಾದ ಪುಷ್ಪಲತೆಗಳೂ, ಲತಾಗೃಹಗಳೂ, ಅನೇಕ ಮೃಗಪಕ್ಷಿಗಳೂ ಇವೆ.

ಆನಂತರ 4ನೇ 'ಉಪವನಭೂಮಿ ಅಥವಾ ವನವೇದಿನಿ' ಇದೆ. ಅಲ್ಲಿ ಅಶೋಕ, ಚಂಪಕ, ಏಳೆಲೆಬಾಳೆ, ಮಾವುಗಳಿಂದ ಕೂಡಿರುವ ಚೈತ್ಯವೃಕ್ಷಗಳು (ಯಾವ

ವೃಕ್ಷದ ಕೆಳಗೆ ಜಿನಬಿಂಬವು ಪ್ರತಿಷ್ಠೆಯಾಗಿದೆಯೋ ಅದು ಚೈತ್ಯವೃಕ್ಷ), ಚಂದನ ಮೊದಲಾದ ಪರಿವಾರ ವೃಕ್ಷಗಳು, ಬಾವಿಗಳು, ಕಮಲ ಸರೋವರಗಳು ಇವೆ.

ಆದರ ಒಳಭಾಗದಲ್ಲಿ 5ನೇ 'ಧ್ವಜಮಾಲಭೂಮಿ' ಇದೆ. ಅಲ್ಲಿ ಸಿಂಹ, ಗರುಡ, ಚಕ್ರವಾಕ ಮೊದಲಾದ 10 ವಿಧ ಧ್ವಜಗಳಿವೆ. ಒಂದೊಂದೂ 108ರಂತೆ 10x108=1,080 ಧ್ವಜಗಳಿವೆ. ಈ ಒಂದೊಂದು ಧ್ವಜಕ್ಕೆ ಪರಿವಾರ ಧ್ವಜಗಳು 108ರಂತೆ 1,080x108=1,16,640 ಧ್ವಜಗಳಿವೆ. ಹೀಗೆ 4 ದಿಕ್ಕಿನಲ್ಲೂ ಇವೆ.

ಅಲ್ಲಿಂದ ಒಳಗಡೆ 6 ನೇ 'ಕಲ್ಪಾವೃಕ್ಷಾ ಭೂಮಿ' ಇದೆ. ಅಲ್ಲಿ ಜ್ಯೋತಿರಂಗ, ತೂರ್ಯಾಂಗ, ಪಾತ್ರಾಂಗ ಮೊದಲಾದ 10 ವಿಧ ಕಲ್ಪವೃಕ್ಷಗಳೂ, ಲತಾಮಂಟಪಗಳೂ, ಕೃತಕಪರ್ವತಗಳೂ, ಮರುಳುದಿನ್ನೆಗಳೂ, ಸಿದ್ಧಾರ್ಥ ವೃಕ್ಷಗಳೂ ಇವೆ. ಪಾರಿಜಾತಾದಿ ವೃಕ್ಷಗಳ ಕೆಳಗಿರುವ ರತ್ನಪೀಠಗಳ ಮೇಲಿರುವ ಜಿನ ಸಿದ್ಧ ಪ್ರತಿಮೆಗಳನ್ನು ಮನುಷ್ಯರೂ ದೇವತೆಗಳೂ ಪೂಜಿಸುತ್ತಾರೆ.

ಅನಂತರ 7ನೇ 'ಗೃಹಭೂಮಿ' (ನಾಟ್ಯವಾಸಭೂಮಿ)ಇದೆ. ಅಲ್ಲಿ ಸಂಗೀತ, ನಾಟ್ಯಶಾಲೆಗಳೂ, 7 ಅಂತಸ್ತಿನ ಮನೆಗಳೂ, ಆ ಮನೆಯ ಒಂದೊಂದು ಅಂತಸ್ತಿನಲ್ಲಿ 32 ಕೋಣೆಗಳೂ, ಆ ಒಂದೊಂದು ಕೋಣೆಯಲ್ಲಿ 32 ದೇವನರ್ತಕಿಯರೂ ಜಿನೇಶ್ವರನ ಗುಣಗಳನ್ನು ಹಾಡುತ್ತಾ ನವಿಲಿನೋಪಾದಿಯಲ್ಲಿ ನರ್ತನಮಾಡುತ್ತಾರೆ.

ಧೂಳಿಸಾಲೆಯಿಂದ 8ನೇ ಭೂಮಿಯವರೆಗೆ ಒಂದೊಂದು ದಿಕ್ಕಿನಲ್ಲಿ 8 ಗೋಪುರಗಳಿವೆ. ಇವೆಲ್ಲವೂ ನೇರವಾಗಿದೆ. ಈ ಎಲ್ಲಾ ಗೋಪುರಗಳ ಹೊರಗಣ, ಒಳಗಣ ಜಗಲಿಗಳ ಮೇಲೆ ಕಲಶ, ಕನ್ನಡಿ ಮೊದಲಾದ 8 ದ್ರವ್ಯಗಳು ಇವೆ. ಆ ಕನ್ನಡಿಯಲ್ಲಿ ನೋಡಿದರೆ ಹಿಂದಿನ ಮುಂದಿನ 7 ಭವನಗಳ ವೃತ್ತಾಂತ ತಿಳಿಯುತ್ತದೆ. ಈ ಗೋಪುರಗಳಲ್ಲಿ ದೇವತೆಗಳು ದ್ವಾರಪಾಲಕರಾಗಿದ್ದಾರೆ.

8ನೇ 'ದ್ವಾದಶಗಣಭೂಮಿ' 12 ಗುಣಗಳಿಂದ ಕೂಡಿದ ಆಸ್ಥಾನವಾಗಿದೆ. ತೀರ್ಥಂಕರರ ಬಲಭಾಗದಿಂದ ಪ್ರದಕ್ಷಿಣೆಯಾಗಿ 12 ಗಣಭೂಮಿಗಳು ನಿರ್ಮಿತವಾಗಿದೆ. ಇವನ್ನು 4ದಿಕ್ಕಿಗೂ ಹಂಚಿದರೆ ಒಂದೊಂದು ದಿಕ್ಕಿನಲ್ಲಿ 12:- 4X3 ಗಣ ಭೂಮಿಗಳಿವೆ 1ನೇ ಭೂಮಿಯಲ್ಲಿ ಗಣಧರರೂ, 7 ವಿಧ ಮುನಿಗಳೂ, 2ನೇ ಭೂಮಿಯಲ್ಲಿ ಸ್ವರ್ಗದದೇವಿಯರೂ, 3ನೇ ಭೂಮಿಯಲ್ಲಿ ಸ್ತ್ರೀಯರೂ, ಅರ್ಜಿಕೆಯರೂ, 4ನೇ ಭೂಮಿಯಲ್ಲಿ ಜ್ಯೋತಿಷ್ಕದೇವಿಯರೂ, 5ನೇ ಭೂಮಿಯಲ್ಲಿ ವ್ಯಂತರ ದೇವಿಯರೂ, 6ನೇ ಭೂಮಿಯಲ್ಲಿ



ಭವನವಾಸಿದೇವಿಯರೂ, 7ನೇ ಭೂಮಿಯಲ್ಲಿ ಭವನದೇವತೆಗಳೂ, 8ನೇ ಭೂಮಿಯಲ್ಲಿ ವ್ಯಂತರದೇವತೆಗಳೂ, 9ನೇ ಭೂಮಿಯಲ್ಲಿ ಜೋತಿಷ್ಕದೇವತೆಗಳೂ, 10ನೇ ಭೂಮಿಯಲ್ಲಿ ಸ್ವರ್ಗದ ದೇವತೆಗಳೂ, 11ನೇ ಭೂಮಿಯಲ್ಲಿ ಪುರುಷರೂ, 12ನೇ ಭೂಮಿಯಲ್ಲಿ ತಿರ್ಯಂಚ ಪ್ರಾಣಿಗಳೂ ಕುಳಿತು ಧರ್ಮಶ್ರವಣ ಮಾಡುತ್ತಾರೆ. (ಇವೇ ೧೨ ಕೋಷ್ಠಗಳು.)

9ನೇ ಪ್ರಥಮ ಪೀಠವು ವೈಢೂರ್ಯಮಯವಾಗಿದೆ. ಅಲ್ಲಿ ಯಕ್ಷೇಂದ್ರರು 4ದಿಕ್ಕುಗಳಲ್ಲಿ ಧರ್ಮಚಕ್ರಗಳನ್ನು ತಲೆಯಮೇಲೆ ಧರಿಸಿಕೊಂಡಿರುತ್ತಾರೆ. ಅಲ್ಲಿ ದೇವಾಸುರ, ಖೇಚರರು, ಚಕ್ರವರ್ತಿಗಳು ಜಿನೇಶ್ವರನ ಪೂಜೆಯನ್ನು ಮಾಡುತ್ತಾರೆ.

10 ನೇ ದ್ವಿತೀಯ ಪೀಠವು ಕಾಂಚನಮಯವಾಗಿದೆ. ಅಲ್ಲಿ 8 ಮಂಗಲದ್ರವ್ಯಗಳೂ 9ನಿಧಿಗಳೂ ಇವೆ.

11ನೇ ತೃತೀಯ ಪೀಠವು ರತ್ನಮಯವಾಗಿದೆ. ಅಲ್ಲಿ ಸಿಂಹಪೀಠವೂ ಆದರಲ್ಲಿ ಗಂದಕುಟಿಯೂ ಇದೆ. ಆ ಸಿಂಹಪೀಠದ ಮೇಲೆ 1008 ದಳದ ಸುವರ್ಣ ಕಮಲವಿರುತ್ತದೆ. ಆ ಕಮಲವನ್ನು ಮುಟ್ಟದೆ 4 ಬೆರಳು ಅಂತರದ ಆಕಾಶದಲ್ಲಿ ತೀರ್ಥಂಕರರು ವಿರಾಜಮಾನರಾಗಿರುತ್ತಾರೆ. ಮೇಲ್ಗಡೆ ರತ್ನದಂಡದ ಮುಕ್ಕೊಡೆ ಇದ್ದು 64 ಮಂದಿ ಯಕ್ಷ ಯಕ್ಷಿಯರು ಸ್ವಾಮಿಗೆ ಧವಳ ಚಾಮರಗಳನ್ನು ಬೀಸುತ್ತಾರೆ. ಜಿನೇಶ್ವರ ಶರೀರ ಸುಗಂಧ 10 ದಿಕ್ಕುಗಳಲ್ಲೂ ತುಂಬಿಹೋಗಿರುತ್ತದೆ. ಆದ್ದರಿಂದ ಇದಕ್ಕೆ ಗಂಧಕುಟಿ ಎನ್ನುತ್ತಾರೆ.

ಈ ಸಮವಸರಣಕ್ಕೆ ಅಭವ್ಯರು ಹೋಗುವುದಿಲ್ಲ. ಮಿಥ್ಯಾದೃಷ್ಟಿಗಳು ಸಮವಸರಣ ಪ್ರವೇಶಿಸಿದ ಕೂಡಲೇ ಸಮ್ಯಗ್ದೃಷ್ಟಿಗಳಾಗುತ್ತಾರೆ. ಹುಟ್ಟುವಾಗಲೇ ಕುರುಡರೂ, ಕುಂಟರೂ, ಕಿವುಡರೂ ಸಮವಸರಣಕ್ಕೆ ಬಂದಾಗ ಅವರ ಶರೀರದದೋಷ ಮಾಯವಾಗುತ್ತದೆ. ವೈರ ಪ್ರಾಣಿಗಳು ದ್ವೇಷಬಿಟ್ಟು ಮಿತ್ರರಾಗುತ್ತಾರೆ. ಸಮವಸರಣದಲ್ಲಿ ಜನ್ಮ, ಮರಣ, ಕೋಪ, ಕಾಮೋದ್ರೇಕ, ರೋಗ, ವ್ಯಸನ, ನಿದ್ರೆ, ಹಸಿವೆ, ಬಾಯಾರಿಕೆ ಮೊದಲಾದವುಗಳು ಉಂಟಾಗುವುದಿಲ್ಲ. ಇದೇ ಜಿನೇಂದ್ರರ ಧರ್ಮಸಭಾ ಭವನ.

ಈಗಲೂ ಜಂಬೂದ್ವೀಪದಲ್ಲಿ 4 ಸಮವಸರಣಗಳಿವೆ. ಎರಡು ಪೂರ್ವವಿದೇಹ ಕ್ಷೇತ್ರದಲ್ಲಿ, ಇನ್ನೆರಡು ಪಶ್ಚಿಮ ವಿದೇಹಕ್ಷೇತ್ರದಲ್ಲಿ ಇವೆ. ಪೂರ್ವ ವಿದೇಹಕ್ಷೇತ್ರದಲ್ಲಿ ಸೀಮಂದರ ಮತ್ತು ಯುಗ್ಮಂದರ ತೀರ್ಥಂಕರರ ಸಮವಸರಣಗಳೂ, ಪಶ್ಚಿಮ ವಿದೇಹಕ್ಷೇತ್ರದಲ್ಲಿ ಬಾಹು ಮತ್ತು ಸುಬಾಹು

ತೀರ್ಥಂಕರರ ಸಮವಸರಣಗಳೂ ಇವೆ. ಈ 'ಸಮವಸರಣ'ದ ಧ್ಯಾನ ಧರ್ಮಧ್ಯಾನದ 3ನೇ 'ರೂಪಸ್ಥ ಧ್ಯಾನ' ಆಗಿದೆ. ಈ ಧರ್ಮಧ್ಯಾನದಿಂದ ಸ್ವರ್ಗಸುಖವೂ ಪರಂಪರೆಯಿಂದ ಮೋಕ್ಷಸುಖವೂ ಸಿಗುತ್ತದೆ. ಹಾಗೂ ಇಡಿ 2 $^{1}/_{2}$ ದ್ವೀಪದ ಐದು ವಿದೇಹ ಕ್ಷೇತ್ರದಲ್ಲಿ 5 X 4 = 20 ಮಂದಿ ತೀರ್ಥಂಕರರು ಇದ್ದಾರೆ.

**ಶೃಂಗಾರವಾಗಿಹುದು ಶ್ರೀಸಮವಸರಣ**

ಶೃಂಗಾರವಾಗಿಹುದು ಶ್ರೀ ಸಮವಸರಣ।
ಅಂಗಜಾರಿ ಜಿನೇಶರಿರ್ಪ ಸುಂದರಭವನ ||ಪ||

ತೀರ್ಥಂಕರ ನಾಮಿಗಳು ಜಾತ ರೂಪವ ತಾಳ್ದು।
ನೀತಿಯಿಂ ತಪಗೈದು ಘಾತಿಕರ್ಮವನಳಿದು॥
ಸಾತಿಶಯಮತಿ ಪೊಂದಿ ಅಂಬರವನೇರಿದೊಡೆ।
ಪ್ರೀತಿಯಿಂ ಸುರರಾಗ ರಚಿಸಿರುವ ಕೈಲಾಸ ||೧||

ಹನ್ನೆರಡು ಯೋಜನದ ವೃತ್ತ ವಿಸ್ತಾರದೊಳು।
ಹನ್ನೆರಡು ಕೋಷ್ಠಗಳು ಉನ್ನತದ ಸ್ತಂಭಗಳು॥
ಇನ್ನೆಂಟು ಅತಿಶಯದ ಪ್ರಾತಿಹಾರ್ಯಗಳು।
ಚನ್ನಾಗಿ ಕಂಗೊಳಿಪ ರತ್ನಚಿತ್ರಗಳಿಂದ ||೨||

ಜಿನಚೈತ್ಯ ಜಲಖಾತಿ ಲತೆ ವನದ ಧ್ವಜಭೂಮಿ।
ಘನ ಕಲ್ಪ ಭವನಗಣ ದ್ವಾದಶಾಂಗಣ ಭೂಮಿ॥
ಕನಕಪೀಠವು ಮೂರು ಮೆರೆದಿರುವ ಆ ಭೂಮಿ।
ಜಿನಬಿಂಬ ಮೇಲಿರುವ ಮುಕ್ಕೊಡೆಯ ಕಾಂತಿಯೊಳು ||೩||

ರತ್ನಮಯ ಜಿನಭವನ ರತ್ನಮಯ ಜಿನಬಿಂಬ।
ರತ್ನಮಯ ದ್ವಾರಗಳು ರತ್ನಮಯ ಸೋಪಾನ॥
ರತ್ನಮಯ ವೇದಿಕೆಯ ರತ್ನಮಯ ಧ್ವಜಸ್ತಂಭ।
ರತ್ನಮಯಗಿರಿಯುಳ್ಳ ಪ್ರಕೃತಿ ಸುಂದರ ಸೊಬಗು ||೪||

ವಿವಿಧ ಚಿತ್ರಗಳುಳ್ಳ ಚಿಹ್ನೆಗಳು ಬಹಳುಳ್ಳ।
ವಿವಿಧ ರೂಪಿತ ಕಲೆಗಳಲ್ಲಲ್ಲಿ ಮೆರೆದಿರುವ॥



ವಿವಿಧ ತರುಲತೆಯಿಂದ ಫಲಪುಷ್ಪ ಜಗಿದಿರುವ।
ವಿವಿಧ ಪ್ರಕೃತಿಯ ಸೊಬಗು ತುಂಬಿರುವ ಜಿನಭವನ ||೫||

ಹೇಮಪೀಠದ ಮೇಲೆ ಕಮಲಕ್ಕೆ ಸೋಂಕದಲೆ।
ಶ್ರೀಮದರ್ಹಸ್ವಾಮಿ ರಾಜಿಸುತ ಬೋಧೆಯನು॥
ನೇಮ ನಿಯಮಗಳನ್ನು ತತ್ವದಾಗಮವನ್ನು।
ಶ್ರೀಮದೋಂಕಾರದೊಳು ಬೋಧಿಸುವ ಧರ್ಮಸಭೆ ||೬||

ಶತ ದೊರಗಳತಿಭಕ್ತಿಯೊಳು ಬಂದುಸೇರಿಹರು।
ಮತಿಯುಳ್ಳ ಚತುಃಸಂಘ ಬಂದಲ್ಲಿ ನೆರೆದಿಹುದು॥
ಅತಿವೈರಿ ಪ್ರಾಣಿಗಳು ಅತಿಸ್ನೇಹದಿಂದಿಹವು।
ಮತಿಮಹಿಮ ಗಣಧರರು ಕಂಗೊಳಿಪ ಧರ್ಮಸಭೆ ||೭||

ವೀತರಾಗಿಯ ಮಹಿಮೆ ತಾನಾಗಿ ಕಂಗೊಳಿಸಿ।
ನೀತಿ ಧರ್ಮದಿ ಜನರ ಭಾವಭೀತಿ ಹರಿಸಿ।
ಸಾತಿಶಯ ಸುಖಲಭಿಪ ಸರ್ವಸಿದ್ಧಿಯ ಗಳಿಸಿ।
ಖ್ಯಾತಿಯೊಳು ಮೆರೆದಿಹುದು ಮಂಗಲದ ಮಂದಿರವು ||೮||

# 24. ಭಗವಾನ್ ಕುಂದಕುಂದಾಚಾರ್ಯರು

ದಿಗಂಬರ ಜೈನ ಸಂಪ್ರದಾಯದಲ್ಲಿ ಶ್ರೀ ಮಹಾವೀರ ಸ್ವಾಮಿಯ ಮತ್ತು ಗೌತಮ ಗಣಧರರ ನಂತರ ಅನೇಕ ಪೂಜ್ಯ ಮಹರ್ಷಿಗಳಲ್ಲಿ ಮುಖ್ಯವಾಗಿ ಶ್ರೀ ಕುಂದಕುಂದಾಚಾರ್ಯರು ಆದರ್ಶ ಯತಿಗಳಲ್ಲೊಬ್ಬರು.

ಭಗವಾನ್ ಕುಂದಕುಂದಾಚಾರ್ಯರ ಸಂಬಂಧವು ದಕ್ಷಿಣ ಭಾರತದಲ್ಲಾಗಿತ್ತು. ದಕ್ಷಿಣ ಭಾರತದಲ್ಲಿ ಮೊದಲನೆ ಶತಾಬ್ಧಿಯಲ್ಲಿ ಪಿದಿಥಾ ನಾಡು ಎಂಬ ದೇಶವಿತ್ತು. ಆ ದೇಶದಲ್ಲಿ ಕೊಣಕೊಂದಿ ಎಂಬುದು ಹಳ್ಳಿ. ಆ ಹಳ್ಳಿಯಲ್ಲಿ ಕರಕುಂಡನೆಂಬ ಹೆಸರುಳ್ಳ ಶ್ರೀಮಂತನಾದ ವೈಶ್ಯಶ್ರೇಷ್ಠ ಇದ್ದನು. ಆ ಶ್ರೇಷ್ಠಿಗೆ ಶ್ರೀಮತಿ ಎಂಬ ಧರ್ಮಪತ್ನಿ ಇದ್ದಳು. ಇವರ ಮನೆಯಲ್ಲಿ ಮತಿವರಣನೆಂಬ

ಹೆಸರುಳ್ಳ ದನಗಳನ್ನು ಮೇಯಿಸುವ ಗೊಲ್ಲರ ಆಳು ಇದ್ದನು.

ಒಂದಾನೊಂದು ದಿವಸ ಮತಿವರಣ ದನಗಳನ್ನು ಮೇಯಿಸುವುದಕ್ಕೆ ಕಾಡಿಗೆ ಹೋದನು. ನಾಲ್ಕು ಕಡೆಗಳಿಂದಲೂ ಕಾಡಿಗೆ ಬೆಂಕಿ ಹತ್ತಿ ಸುಟ್ಟುಹೋಗಿತ್ತು. ಆದರೆ ಮಧ್ಯದಲ್ಲಿ ಕೆಲವು ಗಿಡಮರಗಳು ಸುಡದೆ ಹಸುರುಹಸುರಾಗಿರುವುದನ್ನು ನೋಡಿ ಅವನಿಗೆ ಬಹಳ ಆಶ್ಚರ್ಯವಾಯಿತು. ಕೂಡಲೆ ಅಲ್ಲಿಗೆ ಹೋಗಿ ನೋಡಲು ಒಬ್ಬ ಮುನೀಶ್ವರರ ಗುಹೆಯನ್ನು ಕಂಡನು. ಮತ್ತು ಅಲ್ಲಿಯೇ ಒಂದು ಪೆಟ್ಟಿಗೆಯಲ್ಲಿ ಒಂದು ಜಿನಾಗಮ ಗ್ರಂಥವಿದ್ದುದನ್ನು ಕಂಡು ಆ ಗ್ರಂಥವನ್ನು ತನ್ನ ಮನೆಗೆ ತೆಗೆದುಕೊಂಡು ಬಂದನು. ಜಿನಾಗಮದ ಮಹಿಮೆಯಿಂದ ಆ ಕಾಡಿನ ಕೆಲವು ಗಿಡಮರಗಳು ಭಸ್ಮವಾಗಿರಲಿಲ್ಲ.

ಕರಕುಂಡನೆಂಬ ವೈಶ್ಯನಿಗೆ ಸಂತಾನವಿರಲಿಲ್ಲ. ಆದಕಾರಣ ಅವನ ಹೆಂಡತಿ ಶ್ರೀಮತಿಯು ಬಹಳ ಚಿಂತಾಮಗ್ನಳಾಗಿರುತ್ತಿದ್ದಳು. ಆದರೆ ಶ್ರೇಷ್ಠಿಯು ಮಾತ್ರ ಧಾರ್ಮಿಕನಾದುದರಿಂದ ತನ್ನ ಪತ್ನಿಗೆ ಧರ್ಮಸಂಬಂಧವಾದ ಮಾತುಗಳನ್ನು ಹೇಳಿ ಸಮಾಧಾನಪಡಿಸುತ್ತಿದ್ದನು. ಹೀಗಿರಲೊಂದು ದಿವಸ ಅವರ ಮನೆಗೆ ಪ್ರತಿಭಾಶಾಲಿಗಳಾದ ಮುನಿವರ್ಯರ ಆಗಮನವಾಯಿತು. ಆ ವೈಶ್ಯ ದಂಪತಿಗಳು ಮುನಿಗಳಿಗೆ ನವಧಾಭಕ್ತಿಯಿಂದ ಆಹಾರದಾನವಿತ್ತರು. ಆಹಾರದಾನದ ಪ್ರಭಾವದಿಂದ ಇವರ ಅದೃಷ್ಟವು ಜಾಗ್ರತಾವಸ್ಥೆಯನ್ನು ಹೊಂದಿತು. ಅವರ ಮನೆಯಲ್ಲಿರುವ ಮತಿವರಣನೆಂಬ ಗೊಲ್ಲನು ಮುನೀಶ್ವರರ ಗುಹೆಯಿಂದ ತಂದಿದ್ದ ಆಗಮಗ್ರಂಥವನ್ನು ಮುನಿವರ್ಯರಿಗೆ ಶಾಸ್ತ್ರದಾನವಿತ್ತನು. ಶಾಸ್ತ್ರದಾನದ ಫಲದಿಂದ ಆ ಗೊಲ್ಲನಿಗೆ ಜ್ಞಾನಾವರಣೀಯ ಕರ್ಮವು ಕ್ಷೀಣವಾಯಿತು. ಆ ಗೊಲ್ಲನೇ ಮರಣಹೊಂದಿ ಅದೇ ವೈಶ್ಯದಂಪತಿಗಳಿಗೆ ಮಗನಾಗಿ ಹುಟ್ಟಿದನು. ತೀಕ್ಷ್ಣ ಬುದ್ಧಿಯುಳ್ಳ ಆ ಬಾಲಕನೇ ಮುಂದೆ ಕುಂದಕುಂದನೆಂಬ ಹೆಸರುಳ್ಳ ಆಚಾರ್ಯನಾದನು.

ಆ ವೈಶ್ಯದಂಪತಿಗಳಿಗೆ ಅಸಾಧಾರಣ ಬಾಲಕನ ಜನನದಿಂದ ಅಪಾರವಾದ ಆನಂದವಾಯಿತು. ಆ ಬಾಲಕನು ಪ್ರತಿಭಾ ಸಂಪನ್ನನಾಗಿ ಅನೇಕ ಕಲೆಗಳಲ್ಲಿ ಬಹು ಶೀಘ್ರವಾಗಿ ಪಾರಂಗತನಾದನು. ಧಾರ್ಮಿಕ ದಂಪತಿಗಳ ಗರ್ಭದಲ್ಲಿ ಜನಿಸಿದ ಆತ ತತ್ವಗಳಲ್ಲಿ ವಿಚಾರವಂತನಾದನು. ತಾಯಿ ಮಗುವಾಗಿದ್ದಾಗ ಜೋಗುಳದಲ್ಲಿ ತತ್ತ್ವ ವಿಚಾರಗಳನ್ನು ಹೇಳುತ್ತಿದ್ದಳು.

ಒಂದಾನೊಂದು ದಿವಸ ಈ ಕರಕುಂಡ ವೈಶ್ಯನ ಗ್ರಾಮಕ್ಕೆ ಶ್ರೀ ಜಿನಚಂದ್ರಾ



ಚಾರ್ಯರು ವಿಹಾರಮಾಡುತ್ತಾ ಬಂದರು. ಶ್ರೀ ಆಚಾರ್ಯರ ದರ್ಶನಕ್ಕೆ ಆ ವೈಶ್ಯದಂಪತಿಗಳು ಮಗನ ಜೊತೆಯಲ್ಲಿ ಹೋದರು. ಮುನಿಪುಂಗವರಿಗೆ ನಮೋಸ್ತು ಮಾಡಿ ಮುನಿಗಳಿಂದ ಧರ್ಮೋಪದೇಶವನ್ನು ಕೇಳಿದರು. ಮಗನಾದ ಕುಂದ ಕುಂದನು ಸಹ ಧರ್ಮೋಪದೇಶದಿಂದ ವೈರಾಗ್ಯವನ್ನು ಹೊಂದಿ ಮನೆಗೆ ಹಿಂತಿರುಗದೆ ತಂದೆತಾಯಿಗಳ ಆಜ್ಞೆಯನ್ನು ಪಡೆದು ತನ್ನ 11ನೇ ವಯಸ್ಸಿನಲ್ಲಿ ಪೂಜ್ಯವರ್ಯ ಶ್ರೀ ಜಿನಚಂದ್ರಾಚಾರ್ಯರಿಂದ ಜಿನದೀಕ್ಷೆಯನ್ನು ಸ್ವೀಕರಿಸಿದರು. ಘೋರ ತಪವನ್ನಾಚರಿಸಿದರು. ಮಲಯ ದೇಶಾಂತರ್ಗತವಾದ ಹೇಮಗ್ರಾಮ (ಪೊನ್ನೂರ) ಸಮೀಪದಲ್ಲಿರುವ ನೀಲಗಿರಿ ಪರ್ವತವು ಕುಂದಕುಂದಾಚಾರ್ಯರ ತಪಸ್ಸಿನಿಂದ ಪವಿತ್ರವಾಗಿದೆ. ಆ ಪರ್ವತದ ಮೇಲೆ ಶ್ರೀ ಕುಂದಕುಂದಾಚಾರ್ಯರ ಪಾದುಕೆಗಳು ವಿದ್ಯಮಾನವಾಗಿವೆ.

ಆ ಸಮಯದಲ್ಲಿ ದಕ್ಷಿಣ ಭಾರತದ ಕಾಂಚೀಪುರವು ಜೈನ ಧರ್ಮಕ್ಕೆ ಕೇಂದ್ರಸ್ಥಾನವಾಗಿತ್ತು. ಬಹುಕಾಲದವರೆಗೆ ಶ್ರೀ ಕುಂದಕುಂದಾಚಾರ್ಯರು ಅದೇ ಭಾಗದಲ್ಲಿ ಇದ್ದರೆಂದೂ ಜಿನಚಂದ್ರರ ಶಿಷ್ಯರೆಂದೂ ಪಟ್ಟಾವಳಿಗಳಿಂದ ತಿಳಿದುಬರುವುದು. ಅವರಿಗೆ ಕ್ರಿ.ಶ. ಪೂರ್ವ ಒಂದನೇ ಶತಮಾನದಲ್ಲಿ ಆಚಾರ್ಯ ಪದವಿ ದೊರೆತಿತ್ತು. ಅವರಿಗೆ ಸಾಧುಗಳಾಗಿಯೂ, 52ವರ್ಷ ಆಚಾರ್ಯರಾಗಿಯೂ, ಹೀಗೆ ಇವರು 96 ವರ್ಷ ಜೀವಿಸಿ ಜೈನ ಧರ್ಮದಲ್ಲಿ ಪ್ರತಿಭಾಸಂಪನ್ನರಾಗಿ ಮೆರೆದರು. ಅವರಿಗೆ ಧರ್ಮದ ವಿಷಯದಲ್ಲಿ ಅನುಮಾನಬಂತು.

ಶ್ರೀ ಕುಂದಕುಂದಾಚಾರ್ಯರು ಒಂದು ದಿನ ವಿದೇಹ ಕ್ಷೇತ್ರದಲ್ಲಿಯ ವಿದ್ಯಮಾನ ಸೀಮಂದರ ಸ್ವಾಮಿಯನ್ನು ಸ್ಮರಣೆಮಾಡಿದಾಗ ಸೀಮಂಧರ ತೀರ್ಥಂಕರರು ಪರೋಕ್ಷದಲ್ಲಿ ಧರ್ಮಲಾಭವೆಂದು ಹೇಳಿದ್ದರು. ಈ ಧರ್ಮಲಾಭ ಹೇಳಿದ್ದನ್ನು ಸಮವಸರಣದಲ್ಲಿರುವ ಇಬ್ಬರು ಚಾರಣ ದೇವರು ಕೇಳಿ ಶ್ರೀ ಕುಂದಕುಂದಾಚಾರ್ಯರ ದರ್ಶನಕ್ಕೆ ಬಂದು ದರ್ಶನ ಮಾಡಿ ಅವರನ್ನು ವಿದೇಹಕ್ಷೇತ್ರಕ್ಕೆ ಕರೆದುಕೊಂಡು ಹೋದರೆಂದು ಪ್ರತೀತಿ ಇದೆ. ಅಲ್ಲಿ ಶ್ರೀ ಕುಂದಕುಂದಾಚಾರ್ಯರು ಸೀಮಂದರ ತೀರ್ಥಂಕರರ ದರ್ಶನ ಮಾಡಿ ಶ್ರೀ ತೀರ್ಥಂಕರರ ಸಾಮೀಪ್ಯದಲ್ಲಿಯೇ ಸಿದ್ಧಾಂತವನ್ನು ಅಧ್ಯಯನಮಾಡಿದರು. ಕುಂದಕುಂದಾಚಾರ್ಯರು. (1) ಮತಾಂತರ ನಿರ್ಣಯ, (2)ಸರ್ವಶಾಸ್ತ್ರ, (3) ಕರ್ಮಪ್ರಕಾಶ, (4)ನ್ಯಾಯಪ್ರಕಾಶವೆಂಬ ನಾಲ್ಕು ಅಮೂಲ್ಯವಾದ ಗ್ರಂಥಗಳನ್ನು ವಿದೇಹಕ್ಷೇತ್ರದಿಂದ ಬರುವಾಗ ತಮ್ಮ ಜೊತೆಯಲ್ಲಿ ಇಲ್ಲಿಗೆ ತಂದಿದ್ದರೆಂದು ಪ್ರತೀತಿ ಇದೆ. ಅವರಿಗೆ ಚಾರಣ ವೃದ್ಧಿ ಇತ್ತೂ ಎಂದು ಹೇಳುತ್ತಾರೆ.

ಪೂರ್ವ ವಿದೇಹಕ್ಷೇತ್ರಕ್ಕೆ ಹೋಗುವಾದ ಅವರ ನವಿಲುಗರಿ ಪಿಂಛವು ಅಕಸ್ಮಾತ್ ಕೈ ತಪ್ಪಿ ಕೆಳಗಿ ಬಿದ್ದಕಾರಣ, ತತ್ಕಾಲಕ್ಕೆ ಹದ್ದಿನ ಗರಿ ಅವರಿಗೆ ದೊರೆತು ಆ ಪಿಂಛವನ್ನೇ ಹಿಡಿದುಕೊಂಡು ಹೋದಕಾರಣ, ಇವರನ್ನು ಗೃದ್ಧಪಿಂಛಾರ್ಯರೆಂದೂ ಕರೆಯುತ್ತಾರೆ. ಅಲ್ಲದೆ ಸೀಮಂದರ ಸ್ವಾಮಿಯ ಸಮವಸರಣದಲ್ಲಿ ಪೂರ್ವ ವಿದೇಹ ಕ್ಷೇತ್ರದ ಸಾಮ್ರಾಟ್ ಚಕ್ರವರ್ತಿಯು, ಎಲ್ಲಾ ಮುನಿಗಳಿಗಿಂತಲೂ ಇವರು ಸಣ್ಣವರಾಗಿದ್ದುದರಿಂದ ಇವರನ್ನು ಏಲಾ(ಸಣ್ಣ) ಚಾರ್ಯರೆಂದು ಸಂಬೋಧಿಸಿದನಂತೆ.

ಪೂರ್ವವಿದೇಹ ಕ್ಷೇತ್ರದಿಂದ ಹೊರಟವರು. ಶ್ರೀ ಕುಂದಕುಂದಾಚಾರ್ಯರು ಅನೇಕ ಕಡೆಗಳಲ್ಲಿ ಧರ್ಮಪ್ರಚಾರ ಮಾಡುತ್ತ ಸಿದ್ಧಾಂತಗ್ರಂಥಗಳನ್ನು ಅಧ್ಯಯನ ಮಾಡುತ್ತಿರುವಾಗ ತಮ್ಮ ಶರೀರದ ಮೇಲೆ ಏನೂ ಲಕ್ಷ್ಯವಿಟ್ಟುಕೊಂಡಿರಲಿಲ್ಲ; ಅವರ ಈ ದೀರ್ಘ ಪರಿಶ್ರಮದಿಂದಾಗಿ ಅವರ ಕುತ್ತಿಗೆಯು ಸೊಟ್ಟಗಾಯಿತಂತೆ. ಆಗ ಅವರಿಗೆ ಜನರು 'ವಕ್ರಗ್ರೀವ' ರೆಂದು ಕರೆದರು. ಆದರೆ ಅವರ ಯೋಗಾಭ್ಯಾಸದ ಬಲದಿಂದ ಅವರ ಕುತ್ತಿಗೆಯು ಪುನಃ ನೆಟ್ಟಗಾಯಿತು.

ಅವರ ಕಾಲದಲ್ಲಿ ದಕ್ಷಿಣ ಭಾರತವು ವಿದ್ಯೆಯ ಕೇಂದ್ರವಾಗಿತ್ತು. ಮೈಲಾಪುರವೆಂಬುದು ವಿದ್ವಾಂಸರ ಕೇಂದ್ರವಾಗಿತ್ತು. ಅಲ್ಲಿ ವಿದ್ಯಾವಂತರುಗಳ ಸಭೆ ಸೇರಿತ್ತು. ಆ ಕಾಲದಲ್ಲಿ ಜೈನ ಧರ್ಮವು ಬಹಳ ಪ್ರಬಲವಿದ್ದ ಕಾರಣ ಶ್ರೀ ಕುಂದಕುಂದಾಚಾರ್ಯರು ತಮಿಳಿನಲ್ಲಿ 'ಕುರಲ್' ಎಂಬ ಮಹಾಕಾವ್ಯವನ್ನು ರಚಿಸಿ ತಿರುವಾಲ್ಲವರನೆಂಬ ಹೆಸರುಳ್ಳ ತಮ್ಮ ಶಿಷ್ಯನ ಕೈಲಿ ಆ ಮಹಾ ಕಾವ್ಯವನ್ನು ಕೊಟ್ಟು ವಿದ್ವಾಂಸರ ಸಭೆಗೆ ಕಳುಹಿಸಿದರು. ವಿದ್ವತ್ಸಭೆಯಲ್ಲಿ ಈ ಗ್ರಂಥವು ಒಂದು ಅಮೂಲ್ಯ ಗ್ರಂಥರತ್ನವಾಗಿ ಪರಿಚಯಿಸಲ್ಪಟ್ಟಿತು. ಇದು ಯಥಾರ್ಥವಾಗಿ ನೀತಿಗ್ರಂಥವಾಗಿದ್ದು ತಮಿಳು ನಾಡಿನವರಿಗೆ ಒಂದು ವೇದವಾಕ್ಯದಂತಿದೆ. ಆ ಗ್ರಂಥದಲ್ಲಿ ಅಡಕವಾದ ವಿಷಯವು ಎಲ್ಲಾ ಧರ್ಮಾವಲಂಬಿಯಾಗಿದ್ದು ಸ್ವೀಕರಿಸಲು ಯೋಗ್ಯವಾಗಿದೆ. ಸಾಂಪ್ರದಾಯಿಕ ರೀತಿಯಿಂದ ಶ್ರೀ ಕುಂದಕುಂದಾ ಚಾರ್ಯರ ರಚನೆಯು ಸರ್ವರಿಗೂ ಪೂಜ್ಯವಾಗಿದೆ.

ಇವರು ಪ್ರಾಕೃತ ಭಾಷೆಯಲ್ಲಿಯೂ ಅದ್ವಿತೀಯ ವಿದ್ವಾಂಸರಾಗಿದ್ದರು. ಪ್ರಾಕೃತ ಭಾಷೆಯಲ್ಲಿ ಸಮಯಸಾರ, ಪಂಚಾಸ್ತಿಕಾಯ, ಪ್ರವಚನಸಾರ ಮತ್ತು ಅಷ್ಟಪಾಹುಡ ಮೊದಲಾದ 84 ಗ್ರಂಥಗಳನ್ನು ರಚಿಸಿದ್ದಾರೆ. ಆದರೆ ಎಲ್ಲಾ ದೊರೆತಿಲ್ಲ.



ಆಚಾರ್ಯರು ಅನೇಕ ದೇಶಗಳಲ್ಲಿ ವಿಹಾರ ಮಾಡುತ್ತ ಅನೇಕ ಮುಮುಕ್ಷುಗಳಿಗೆ ದೀಕ್ಷೆಯನ್ನು ಕೊಟ್ಟರು. ದಕ್ಷಿಣ ಭಾರತದಲ್ಲಿರುವ ಪೊನ್ನೂರು ಮಲೈಗೆ ಬಂದು ಅವಸಾನ ಕಾಲ ಸಮೀಪಿಸಿತೆಂದು ತಿಳಿದು ಯೋಗಾಭ್ಯಾಸದಲ್ಲಿ ಮಗ್ನರಾದರು. ಕ್ರಿ.ಶ. 43ರಲ್ಲಿ ನಶ್ವರ ಶರೀರವನ್ನು ತ್ಯಾಗಮಾಡಿ ಶ್ರೀ ಕುಂದಕುಂದಾಚಾರ್ಯರು ಸ್ವರ್ಗವನ್ನು ಹೊಂದಿದರು.

## 25. ಷಟ್‌ಖಂಡಾಗಮ–ಸಿದ್ಧಾಂತ ಶಾಸ್ತ್ರ

ಜೈನದರ್ಶನದಲ್ಲಿ ಕರ್ಮಸಿದ್ಧಾಂತಕ್ಕೆ ತುಂಬಾ ಮಹತ್ತ್ವವಿದೆ. ಜೀವಾತ್ಮನ ಪ್ರದೇಶಕ್ಕೆ ಸೂಕ್ಷ್ಮಾತಿಸೂಕ್ಷ್ಮ ಕರ್ಮ ಪರಮಾಣುಗಳು ಹೇಗೆ ಬರುತ್ತವೆ? (ಆಸ್ರವ) ಹೇಗೆ ಸೇರಿಕೊಳ್ಳುತ್ತವೆ? (ಬಂಧ) ಕರ್ಮ ಬರದಂತೆ ಹೇಗೆ ತಡೆಯಲ್ಪಡುತ್ತವೆ? (ಸಂವರ) ಸೇರಿಕೊಂಡ ಕರ್ಮ ಪರಮಾಣುಗಳು ಹೇಗೆ ಪಕ್ವಗೊಂಡು ಅನುಭವಕ್ಕೆ ಬರುತ್ತವೆ? (ಉದಯ) ಅನುಭವಿಸಿದ ಮೇಲೆ ಜೀರ್ಣಗೊಂಡು ಹೇಗೆ ಆತ್ಮಪ್ರದೇಶದಿಂದ ಬೇರ್ಪಡುತ್ತವೆ? (ನಿರ್ಜರೆ) ಆತ್ಮಪ್ರದೇಶದಿಂದ ಕರ್ಮಾವರಣ ಬೇರ್ಪಟ್ಟು ಈ ಜೀವಾತ್ಮನು ಹೇಗೆ ಪರಮಾತ್ಮನಾಗುತ್ತಾನೆಂಬುದೇ ಜೈನರ ಕರ್ಮಸಿದ್ಧಾಂತವೆನಿಸುತ್ತದೆ. ಈ ಸಂಸಾರಚಕ್ರದ ಪರಿಭ್ರಮಣೆಗೆ ಅನಾದಿಕಾಲದಿಂದ ಬದ್ಧವಾಗಿರುವ ಕರ್ಮಗಳೇ ಕಾರಣವಾಗಿರುವುದರಿಂದ ಕರ್ಮಬಂಧದ ವಿಸ್ತಾರವಾದ ವರ್ಣನೆಯೇ ಷಟ್‌ಖಂಡಾಗಮದ ಮೂಲ ಗುರಿಯಾಗಿದೆ. ಕರ್ಮಗಳ ಸ್ವಭಾವ, ಅವುಗಳ ಬಂಧನ ಮತ್ತು ಭೇದ, ಅವುಗಳಿಂದಾಗುವ ಅನುಭವ ಇವುಗಳು ಪ್ರಧಾನವಾಗಿ, ವಿಸ್ತಾರವಾಗಿ ಷಟ್-ಖಂಡಾಗಮದಲ್ಲಿ ನಿರೂಪಿಸಲ್ಪಟ್ಟಿವೆ. ನಾನಾ ಜೀವಿಗಳು ನಾನಾ ಮಟ್ಟಗಳಲ್ಲಿ ನಾನಾ ಭಾವಗಳಿಂದ ಹೇಗೆ ಹೇಗೆ ಎಷ್ಟೆಷ್ಟು ಕರ್ಮಗಳನ್ನು ಸಂಚಯಿಸಿ, ಅನುಭವಿಸಿ ಅವುಗಳಿಂದ ಬಿಡುಗಡೆ ಹೊಂದುತ್ತವೆ ಎಂಬುದು ಲೆಕ್ಕಾಚಾರವಾಗಿ ಎಣಿಕೆಯಿಂದ ತೋರಿಸಲ್ಪಟ್ಟಿದೆ.

ಜೈನ ಶಾಸ್ತ್ರವು ಲಿಪಿಬದ್ಧವಾಗಿ ಷಟ್‌ಖಂಡಾಗಮ ರೂಪದಲ್ಲಿ ಅವತರಿಸಿ ಹೇಗೆ ಶ್ರುತಾವತಾರವಾಯಿತೆಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸುವುದು

ಅಪ್ರಕೃತವಾಗಲಾರದು. ಭಗವಾನ್ ಮಹಾವೀರರ ನಿರ್ವಾಣದ ಅನಂತರ ಸುಮಾರು 683 ವರ್ಷಗಳ ಅವಧಿಯಲ್ಲಿ ಕಾಲನ ಕರಾಳ ಕೈಗಳಿಗೆ ಸಿಕ್ಕಿ ಮಾನವರ ಧಾರಣಾ ಶಕ್ತಿ (ನೆನಪು) ಕುಗ್ಗುತ್ತ, ತಗ್ಗುತ್ತ ದ್ವಾದಶಾಂಗ ಶ್ರುತ (ಕೇಳಲ್ಪಟ್ಟ) ಜ್ಞಾನವು ಕ್ರಮೇಣ ನಾಶವಾಗುತ್ತ ಚತುರ್ದಶ ಪೂರ್ವ ಶಾಸ್ತ್ರದ ಏಕದೇಶ ಜ್ಞಾನಕ್ಕೆ ಸೀಮಿತಗೊಂಡಿತು. ಜೈನ ದಾರ್ಶನಿಕ ದಿಗಂತದಲ್ಲಿ ಕಾರ್ಮೋಡಗಳು ಕವಿಯತೊಡಗಿದುವು. ಅಂತಿಮ ಶ್ರುತಕೇವಲಿಗಳಿಂದ ಭದ್ರಬಾಹುಗಳ ಪರಂಪರೆಯಲ್ಲಿ ಸಾಗಿ ಬಂದ ಆಚಾರ್ಯರುಗಳಲ್ಲಿ, ಅದೇ ಕಾಲಕ್ಕೆ ಗುಜರಾತ ಪ್ರಾಂತದ ಗಿರ್‌ನಾರ್ ಪರ್ವತದ ಚಂದ್ರಗುಹೆಯಲ್ಲಿ ಧರಸೇನಾಚಾರ್ಯರೆಂಬ ಮುನಿವರ್ಯರು ತಪೋನಿರತರಾಗಿದ್ದರು. ಅವರಿಗೆ ಗುರುಪರಂಪರೆಯಿಂದ ಪ್ರಾಪ್ತವಾಗಿದ್ದ ಎರಡನೆಯ ಪೂರ್ವ ಶಾಸ್ತ್ರವಾದ ಅಗ್ರಾಯಣಿಯ ಐದನೆಯ ಚಯನಲಬ್ಧಿ ವಸ್ತು(ವಿಷಯ)ವಿನ ನಾಲ್ಕನೆಯ ಮಹಾಪ್ರಾಭೃತವೆನಿಸಿದ್ದ ಮಹಾ ಕರ್ಮಪ್ರಕೃತಿಯ ಸಂಪೂರ್ಣ ಜ್ಞಾನವಿತ್ತು. ತನ್ನ ಆಯುಷ್ಯದ ಪರಿಮಿತಿಯು ಸಮೀಪಿಸುತ್ತಿರುವುದನ್ನು ನಿಮಿತ್ತಜ್ಞಾನದ ಮೂಲಕ ಅರಿತ ಧರಸೇನರು ತಮ್ಮಲ್ಲಿ ಉಳಿದಿರುವ ಶ್ರುತಜ್ಞಾನವು ತಮ್ಮ ಜೀವಿತದೊಂದಿಗೆ ಕೊನೆಗೊಳ್ಳಬಾರದೆಂಬ ದೂರದೃಷ್ಟಿಯಿಂದ ತಮ್ಮ ಜ್ಞಾನವನ್ನು ಸುಯೋಗ್ಯ ಶಿಷ್ಯರಿಗೆ ದಾನ ಮಾಡಿ ಶಾಸ್ತ್ರ ರಕ್ಷಣೆ ಮಾಡಲೇಬೇಕೆಂಬ ದೃಢ ನಿರ್ಧಾರಕ್ಕೆ ಬಂದರು. ತಕ್ಷಣ ತಮ್ಮ ನಿರ್ಧಾರವನ್ನು ಒಂದು ನಿರೂಪ ಪತ್ರ (ಪತ್ರ)ದಲ್ಲಿ ಬರೆದು ಅದನ್ನು ಓರ್ವ ಬ್ರಹ್ಮಚಾರಿಗಳ ಮೂಲಕ ಈ ಸಮಯದಲ್ಲಿ ದಕ್ಷಿಣಾಪಥದಲ್ಲಿ ಸೇರಲಿದ್ದ ಸಾಧುಗಳ ಮಹಾಸಮ್ಮೇಳನಕ್ಕೆ ಕಳುಹಿಸಿ, ಕುಶಲಮತಿಗಳಾದ ಈರ್ವರು ಶಿಷ್ಯರನ್ನು ತಮ್ಮ ಬಳಿಗೆ ಕಳುಹಿಸಿ ಕೊಡಬೇಕೆಂದು ಸೂಚಿಸಿದರು. ಮಹಾ ಸಮ್ಮೇಳನದಲ್ಲಿ ಸಾಧುಗಳು ಕಲೆತು ಸಮಾಲೋಚನೆ ನಡೆಸಿ ಬುದ್ಧಿವಂತರಾದ ಚಿಕ್ಕ ವಯಸ್ಸಿನ ಇಬ್ಬರು ಬಾಲಯತಿಗಳನ್ನು ಗಿರ್‌ನಾರ್‌ಗೆ ಕಳುಹಿಸಿ ಕೊಟ್ಟರು.

ಧರಸೇನಾಚಾರ್ಯರು ದಕ್ಷಿಣಾಪಥದಿಂದ ತಮ್ಮ ಬಳಿಗೆ ಬಂದ ಶಿಷ್ಯೋತ್ತಮರ ಮುಖ ತೇಜಸ್ಸಿನಿಂದಲೇ ಅವರ ಬುದ್ಧಿತೀಕ್ಷ್ಣತೆಯನ್ನು ಊಹಿಸಿ ತಿಳಿದರು. ಆದರೂ ಪರೀಕ್ಷಿಸಿ ಪರಿಗ್ರಹಿಸುವುದು ಮೇಲೆಂದು ಭಾವಿಸಿ ನ್ಯೂನಾಧಿಕ (ಕಡಿಮೆ ಮತ್ತು ಹೆಚ್ಚು) ಅಕ್ಷರಗಳಿದ್ದ ಒಂದು ಜಾಪ್ಯಮಂತ್ರವನ್ನು ಈರ್ವರಿಗೂ ಒಪ್ಪಿಸಿ, ಅದನ್ನು ನೇಮಿ ತೀರ್ಥಂಕರರು ನಿರ್ವಾಣ ಹೊಂದಿದ ಸಿದ್ಧಶಿಲೆಯ ಬಳಿ ಕುಳಿತು ಸಾಧಿಸಿಕೊಂಡು ಬರುವಂತೆ ಆಜ್ಞಾಪಿಸಿದರು. ಗುರ್ವಾಜ್ಞೆಯ ಮೇರೆಗೆ ಕಠಿಣ ವ್ರತಧಾರಿಗಳಾಗಿ ಶಿಷ್ಯರೀರ್ವರೂ ಪ್ರತ್ಯೇಕವಾಗಿ ಸ್ಥಿರಚಿತ್ತದಿಂದ ಮಂತ್ರಸಿದ್ಧಿಗೆ



ತೊಡಗಿದರು. ಸಿದ್ಧಿಯ ಅಂತ್ಯದಲ್ಲಿ ಕಡಿಮೆ ಅಕ್ಷರದ ಮಂತ್ರವನ್ನು ಹೊಂದಿದ್ದ ಶಿಷ್ಯನ ಮುಂದೆ ಒಕ್ಕಣ್ಣ ದೇವತೆಯೂ, ಅಧಿಕಾಕ್ಷರದ ಮಂತ್ರ ಪಡೆದಿದ್ದ ಶಿಷ್ಯನ ಮುಂದೆ ಮುಕ್ಕಣ್ಣ ದೇವತೆಯೂ ಕಾಣಿಸಿಕೊಂಡರು. ಸಕಲಾಂಗ ಸಂಪನ್ನತೆಯಿಂದ ಸ್ಫುರದ್ರೂಪಿಗಳಾಗಿರಬೇಕಾದ ದೇವತೆಗಳು ವಿಕಲಾಂಗರಾಗಿಯೂ, ಅಧಿಕಾಂಗರಾಗಿಯೂ ಕಾಣಿಸಿಕೊಳ್ಳಬೇಕಾದರೆ ಏನೋ ಪ್ರಬಲ ಕಾರಣವಿರಬೇಕೆಂದೂಹಿಸಿ ಶಿಷ್ಯರಿಬ್ಬರೂ ತಮ್ಮ ಮಂತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದಾಗ ಮಂತ್ರಗಳಲ್ಲಿ ಅಕ್ಷರ ದೋಷವಿದ್ದುದು ಗೋಚರಿಸಿತು. ದೋಷವನ್ನು ಶುದ್ಧೀಕರಿಸಿ ತಿದ್ದಿ ಸಾಧಿಸಿದಾಗ ದೇವತೆಗಳು ಸರ್ವಾಂಗ ಸುಂದರಿಯಾಗಿ ಪ್ರತ್ಯಕ್ಷರಾದರು. ಇದರಿಂದ ತೃಪ್ತಿ ಹೊಂದಿದ ಶಿಷ್ಯೋತ್ತಮರು ಗುರುಗಳಿಗೆ ಈ ವಿಚಾರವನ್ನು ತಿಳಿಸಿದಾಗ, ಪರೀಕ್ಷಿಸಲೆಂದೇ ದೋಷಯುಕ್ತ ಮಂತ್ರವನ್ನು ನೀಡಿದ್ದ ಗುರು ಧರಸೇನರು ಶಿಷ್ಯರ ಬುದ್ಧಿಮತ್ತೆಗೆ ತಲೆದೂಗಿ ಆನಂದ ವ್ಯಕ್ತಪಡಿಸಿದರು.

ಒಂದು ಒಳ್ಳೆಯ ದಿನ ಗೊತ್ತು ಮಾಡಿ ಶುಭಮುಹೂರ್ತದಲ್ಲಿ ತಾವು ಧಾರಣೆ ಮಾಡಿಕೊಂಡಿದ್ದ ಕರ್ಮಸಿದ್ಧಾಂತ ರಹಸ್ಯವನ್ನು 'ಮಹಾ ಕರ್ಮಪ್ರಕೃತಿ ಪ್ರಾಭೃತ್' ಶಾಸ್ತ್ರದ ಮೂಲಕ ಶಿಷ್ಯರೀರ್ವರಿಗೂ ಚೆನ್ನಾಗಿ ಮನದಟ್ಟಾಗುವಂತೆ ಬೋಧಿಸತೊಡಗಿದರು. ಕರ್ಮಸಿದ್ಧಾಂತದ ಮರ್ಮವನ್ನು ವಿದ್ಯುಕ್ತವಾಗಿ ಗುರುಮುಖದಿಂದ ಪೂರ್ಣ ಅಭ್ಯಾಸ ಮಾಡಿ ಶಿಷ್ಯಶ್ರೇಷ್ಠರು ತಮ್ಮ ಆಧ್ಯಾತ್ಮಿಕ ಶಿಕ್ಷಣವನ್ನು ಆಷಾಢ ಶುಕ್ಲ ಏಕಾದಶಿಯ ದಿವಸದಂದು ಮುಕ್ತಾಯಗೊಳಿಸಿದರು. ಆಗ ಭೂತ ಜಾತಿಯ ವ್ಯಂತರ ದೇವತೆಗಳು ಪ್ರತ್ಯಕ್ಷರಾಗಿ ವಿವಿಧ ರೀತಿಯಿಂದ ಶಿಷ್ಯರೀರ್ವರನ್ನೂ ಗೌರವಿಸಿ ಒಬ್ಬರಿಗೆ 'ಭೂತಬಲಿ' ಎಂದು ನಾಮಕರಣ ಮಾಡಿದರು. ಅವರಲ್ಲಿ ಹಿರಿಯ ಶಿಷ್ಯರ ವಕ್ರ ವಕ್ರವಾಗಿದ್ದ ದಂತಪಂಕ್ತಿ (ಹಲ್ಲಿನ ಸಾಲು)ಯನ್ನು ಮಲ್ಲಿಗೆ ಮಾಲೆಯಂತೆ ಸುಂದರವಾಗಿ ಮಾರ್ಪಡಿಸಿ 'ಪುಷ್ಪದಂತ'ರೆಂದು ಹೆಸರಿಟ್ಟರು. ಅಂದಿನಿಂದ ಅವೇ ಹೆಸರುಗಳು ಆ ಶಿಷ್ಯರಿಗೆ ರೂಢಿಗೊಂಡವು.

ಧರಸೇನಾಚಾರ್ಯರು ತಮ್ಮ ಅವಸಾನವು ಸಮೀಪಿಸಿದುದನ್ನು ಅರಿತು, ಅಂತ್ಯ ಕಾಲದಲ್ಲಿ ತಮ್ಮ ಬಳಿ ಶಿಷ್ಯರಿದ್ದರೆ ಉಭಯತಃ ದುಃಖಕ್ಕೆ ಕಾರಣವಾಗಬಹುದೆಂದೂಹಿಸಿ ಧರ್ಮಪ್ರಚಾರದ ನೆಪ ಹೂಡಿ, ತಕ್ಷಣ ದಕ್ಷಿಣ ದೇಶದ ಕಡೆ ಪ್ರಯಾಣಿಸುವಂತೆ ಕಟ್ಟಪ್ಪಣೆ ಮಾಡಿದರು. ಗುರುವಿನ ಮರಣ ಸಮಯದಲ್ಲಿ ಗುರುಸೇವೆಯಿಂದ ವಂಚಿತರಾದೆವೆಂದು ತುಂಬಾ ನೊಂದುಕೊಂಡರೂ

ಗುರುವಿನಾಜ್ಞೆಯನ್ನು ಮೀರಲಾರದೆ ಕಣ್ಣೀರನ್ನು ನುಂಗಿ, ಮನಸ್ಸಿಲ್ಲದ ಮನಸ್ಸಿನಿಂದ ಅಂದೇ ದಕ್ಷಿಣಾಪಥದ ಕಡೆಗೆ ಹೊರಟರು.

ಮಾರ್ಗದಲ್ಲಿ ಮಳೆಗಾಲವನ್ನು ಸೌರಾಷ್ಟ್ರದ ಅಂಕಲೇಶ್ವರ ಎಂಬಲ್ಲಿ ಕಳೆದರು. ಅನಂತರ ಹಿರಿಯ ಪುಷ್ಪದಂತರು ತನ್ನ ಅಳಿಯನಾದ ಜಿನಪಾಲಿತನಿಗೆ ಜಿನದೀಕ್ಷೆ ಇತ್ತು ಅವನೊಂದಿಗೆ ಬನವಾಸಿಗೆ ಬಂದು ನೆಲೆಯಾದರು. ಕಿರಿಯ ಭೂತಬಲಿಗಳು ದ್ರಾವಿಡ ದೇಶದ ಮಧುರಾ ನಗರಕ್ಕೆ ಹೋಗಿ ನೆಲೆಸಿದರು. ಇತ್ತ ಪುಷ್ಪದಂತಾಚಾರ್ಯರು ಜಿನಪಾಲಿತರಿಗೆ ತಾವು ಧರಸೇನರಿಂದ ಕಲಿತಿದ್ದ 'ಮಹಾ ಕರ್ಮಪ್ರಕೃತಿ ಪ್ರಾಭೃತ' ಶಾಸ್ತ್ರವನ್ನು ಸಂಗ್ರಹಿಸಿ ವಿಂಶತಿ (ಇಪ್ಪತ್ತು) ಪ್ರರೂಪಣೆಗಳಾಗಿ ವಿಂಗಡಿಸಿ ಅದರ 'ಸತ್‌ಪ್ರರೂಪಣಾಧಿಕಾರ'ವನ್ನು 177 ಸೂತ್ರಗಳಲ್ಲಿ ವಿವರಿಸಿ ಅಭ್ಯಾಸ ಮಾಡಿಸಿದರು. ತಾವು ರಚಿಸಿದ ಆ ಗ್ರಂಥವನ್ನು ಪರಿಶೀಲನೆಗಾಗಿ ಭೂತಲಿಬಗಳ ಕಡೆ ದ್ರಾವಿಡಕ್ಕೆ ಕಳುಹಿಸಿದರು. ಜಿನಪಾಲಿತರ ಹೇಳಿಕೆಯಿಂದ ಪುಷ್ಪದಂತರು ಅಲ್ಪಾಯುಷಿಗಳೆಂದರಿತು ಶಾಸ್ತ್ರರಚನೆಯಲ್ಲಿ ವ್ಯಚ್ಛಿತ್ತಿ ಬಾರದಿರಲೆಂದು ದ್ರವ್ಯ ಪ್ರಮಾಣಾನುಗಮವೇ ಮೊದಲಾದ ಜೀವ ಸ್ಥಾನದ ಉಳಿದ ಅನುಗಮಗಳನ್ನೂ, ಕ್ಷುದ್ರಬಂಧ, ಬಂಧಸಾಮಿತ್ವವಿಚಯ, ವರ್ಗಣಾಖಂಡ, ವೇದನಾಖಂಡ ಮತ್ತು ಮಹಾಬಂಧುಗಳೆಂಬ ಉಳಿದ ಐದು ಖಂಡಗಳನ್ನು ರಚಿಸಿ, 'ಷಟ್ಖಂಡಾಗಮ' ಗ್ರಂಥವನ್ನು ಪೂರ್ಣಗೊಳಿಸಿದರು. ಈ ಮಹಾ ಗ್ರಂಥವು ಜ್ಯೇಷ್ಠ ಶುಕ್ಲ ಪಂಚಮಿಯ ಶುಭ ದಿನದಂದು ಬರೆದು ಪೂರ್ಣಗೊಂಡಿತೆಂಬ ವಿಚಾರವು ಇಂದ್ರ ನಂದಿಗಳ ಶ್ರುತಾ ವತಾರದಲ್ಲಿ ಬರುವ ಈ ಕೆಳಗಿನ ಶ್ಲೋಕಗಳಿಂದ ಸ್ಪಷ್ಟವಾಗುತ್ತದೆ.

ಜ್ಯೇಷ್ಠಸಿತ ಪಕ್ಷ ಪಂಚಮ್ಯಾಂ, ಚಾತುರ್ವಣ್ಯ ಸಂಘ ಸಮವೇತಃ ।
ತತ್ಪುಸ್ತಕೋಪಕರಣೈ ರ್ವ್ಯಧಾತ್ಕ್ರಿಯಾಪೂರ್ವಕಂ ಪೂಜಾಂ ॥143॥
ಶ್ರುತಪಂಚಮೀತಿ ತೇನಪ್ರಖ್ಯಾತಿಂ ತಿಥಿರಿಯಂ ಪರಾಮಾಪ ।
ಅದ್ಯಾಪಿ ಯೇನ ತಸ್ಯಾಂ ಶ್ರುತಪೂಜಾಂ ಕುರ್ವತೇ ಜೈನಾಃ ॥144॥

-ಇಂದ್ರನಂದಿ-ಶ್ರುತಾವತಾರ.

ಈ ವಿಶಾಲ ಗ್ರಂಥ ರಚನೆ ಪೂರ್ಣಗೊಂಡ ಜ್ಯೇಷ್ಠ ಶುಕ್ಲ ಪಂಚಮಿಯಂದು ಋಷಿ, ಆರ್ಯಿಕಾ, ಶ್ರಾವಕ, ಶ್ರಾವಿಕೆಯರೆಂಬ ಚತುರ್ವಿಧ-ಸಂಘದ ಸಮಕ್ಷ ಭೂತ ಬಲ್ಯಾಚಾರ್ಯರು ಈ ಗ್ರಂಥ ರತ್ನವನ್ನು ಭಕ್ತಿಯಿಂದ ಪೂಜಿಸಿದರು. ಜ್ಯೇಷ್ಠ ಶುಕ್ಲ



ಪಂಚಮಿಯು ಜೈನರ ಮಹಾಪರ್ವ ತಿಥಿಯಾಗಿ ಪರಿಣಮಿಸಿ ಇಂದಿಗೂ ಜೈನರು ಆ ದಿನವನ್ನು ಸಡಗರದಿಂದ ಆಚರಿಸಿಕೊಂಡು ಬರುತ್ತಿದ್ದಾರೆ. ಆಧ್ಯಾತ್ಮಿಕ ರಸಿಕರು ಜೀವನ ಪೂರ್ತಿ ಸವೆಸಿದರೂ ಬತ್ತದ ಅಕ್ಷಯಾಮೃತದ ರಸಬುಗ್ಗೆಯಾಗಿದೆ ಈ 'ಷಟ್ಖಂಡಾಗಮ ಗ್ರಂಥ' ಎಂದರೆ ಉತ್ಪ್ರೇಕ್ಷೆಯಾಗದು.

### ''ಷಟ್ ಖಂಡಾಗಮ'' ಗ್ರಂಥದ ಮಂಗಲ ಶ್ಲೋಕ

ಣಮೋ ಅರಿಹಂತಾಣಂ, ಣಮೋ ಸಿದ್ಧಾಣಂ ಣಮೋ ಆಇರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಳೋಏ ಸವ್ವಸಾಹೂಣಂ॥ ಎಂಬ ಇದೇ ಗ್ರಂಥದ ಮೊಲ ಮಂಗಲವಾಗಿದೆ.

ಭಾರತದ ದೇಶದ ಸಂಸ್ಕೃತಿಯ ಪರಂಪರೆಯಲ್ಲಿ ಮಂಗಲಾಚರಣೆಗೆ ತುಂಬಾ ಮಹತ್ತ್ವವಿದೆ "ಮಂಗಲ'' ಎಂಬ ಪದವು ಎರಡು ರೀತಿಯಲ್ಲಿ ನಿಷ್ಪತ್ತಿ ಹೊಂದುತ್ತದೆ. ಮೊದಲನೆಯ ಪ್ರಕಾರ ''ಮಲಂಗಾಲಯತಿ ಇಥಿ ಮಂಗಲಂ'' ಎಂದಾಗುತ್ತದೆ. ಅಂದರೆ ಕರ್ಮರೂಪಿಯಾದ ಮಲ-ಕೊಳೆಯನ್ನು 'ಗಾಲನ' ಅಂದರೆ ತೊಳೆಯುವುದು ಶೋಧಿಸುವುದು ಎಂದರ್ಥ. ಎರಡನೆಯ ರೀತಿಯಂತೆ 'ಮಂಗಂ ಲಾತೀತಿ ಮಂಗಲಂ' 'ಮಂಗಂ' ಸುಖವನ್ನು 'ಲಾತಿ' ತರುತ್ತದೆ ಎಂದರ್ಥ. ಭಾರತದ ಪೂರ್ವಾಚಾರ್ಯರು ಗ್ರಂಥಾರಂಭದಲ್ಲಿ ಮಂಗಲಾಚರಣೆ ಮಾಡಿಕೊಂಡು ಬಂದಿರುವ ಪರಂಪರೆಯಂತೆ ''ಷಟ್ಖಂಡಾಗಮ'' ಗ್ರಂಥಾರಂಭದಲ್ಲಿ ಆಚಾರ್ಯರು ಮಂಗಲಗಳಿಗೆಲ್ಲ ಮೂಲಮಂಗಲ ಸ್ವರೂಪಿಯಾದ ಜೈನರ 'ಪಂಚ ಮಹಾ ನಮಸ್ಕಾರ ಮಂತ್ರ'ವನ್ನೇ ಮಂಗಲಾಚರಣೆಗೆ ಆಯ್ದು ಕೊಂಡಿರುತ್ತಾರೆ.

ಇಲ್ಲಿ 'ಅರಿಹಂತಾಣಂ' ಮತ್ತು 'ಅರಹಂತಾಣಂ' ಈ ಎರಡೂ ರೂಪಗಳು ರೂಢಿಯಲ್ಲಿವೆ. ಇವುಗಳಲ್ಲಿ ಯಾವುದು ಸರಿ? ಯಾವುದು ಸರಿಯಲ್ಲ? ಎಂದು ಹೇಳುವುದು ಸ್ವಲ್ಪ ಕಷ್ಟ. ಏಕೆಂದರೆ 'ಧವಲಾ ಟೀಕೆ' ರಚಿಸಿದ ವೀರಸೇನಾಚಾರ್ಯರ ಅಭಿಪ್ರಾಯದಂತೆ 'ಅರೀನ್' ಹಂತೀತಿ ' ಅರಿಹಂತಾ' ಅಂದರೆ ಕರ್ಮರೂಪೀ ಅರಿ(ಶತ್ರು)ಗಳನ್ನು ನಾಶ ಮಾಡಿದವನು ಎಂದಾಗುತ್ತದೆ. ಎರಡನೆಯ ರೂಪ 'ಅರ್ಹತೀತಿ ಅರ್ಹನ್' ಅಂದರೆ ಸಿದ್ಧ(ಕರ್ಮಮುಕ್ತ)ನಾಗಲು ಅರ್ಹತೆ-ಯೋಗ್ಯತೆ ಹೊಂದಿದವನು ಎಂದು ನಿಷ್ಪನ್ನವಾಗುತ್ತದೆ. 'ಅರಿ' ಶತ್ರು ಎಂಬ ಪದವು ಸಂಸ್ಕೃತದಲ್ಲಿರುವುದರಿಂದಲೂ ಪಂಚ ಮಹಾ ಮಂತ್ರವು ಪ್ರಾಕೃತ ಭಾಷೆಯಲ್ಲಿರುವುದರಿಂದಲೂ ಪ್ರಾಕೃತ ಭಾಷಾ ವ್ಯಾಕರಣ ಸೂತ್ರದಂತೆ 'ಅರ್ಹತ್ಸುಚ'

ಅಂದರೆ 'ಅರ್ಹತ್' ಪದದ ಕೊನೆಯ ತ್ ಅಕ್ಷರದ ಹಿಂದಿನ ' ಅ' ಕಾರಕ್ಕೆ 'ಇ' ಮತ್ತು 'ಉ' ಕಾರಾದೇಶಗಳು ವಿಕಲ್ಪವಾಗಿ ಬರುತ್ತವೆ ಎಂದಿದೆ. ಹಾಗಾದಾಗ 'ಅರಹಂತಾಣಂ' 'ಅರಿಹಂತಾಣಂ' 'ಅರುಹಂತಾಣಂ' ಎಂಬೀ ಮೂರು ರೂಪಗಳಾಗುತ್ತವೆ. ಆದರೂ ಹೆಚ್ಚು ರೂಢಿಯಾಗಿರುವ 'ಅರಿಹಂತಾಣಂ' ಎಂಬುದೇ ಹೆಚ್ಚು ಸಮಂಜಸವಾದ ರೂಪವಾಗಿರಬೇಕೆಂದು ಊಹಿಸಬೇಕಾಗುತ್ತದೆ.

### 'ಷಟ್ ಖಂಡಾಗಮ' ಎಂದರೇನು?

ಷಟ್(ಆರು)ಖಂಡ (ಭಾಗ)ಗಳಿಂದ ಕೂಡಿರುವ ಶಾಸ್ತ್ರವು ಷಟ್ ಖಂಡಾಗಮವೆನಿಸುತ್ತದೆ. 1) ಜೀವಸ್ಥಾನದ ಸತ್‌ಪ್ರರೂಪಣಾ ಖಂಡ 2) ಕ್ಷುದ್ರಬಂಧ ಖಂಡ 3) ಬಂಧಸ್ವಾಮಿತ್ವವಿಚಯ ಖಂಡ 4)ವೇದನಾ ಖಂಡ 5)ವರ್ಗಣಾ ಖಂಡ 6)ಮಹಾಬಂಧ ಎಂಬ ಆರು ಖಂಡಗಳಿಂದ ಹದಿನಾಲ್ಕು 'ಗುಣಸ್ಥಾನ, ಮಾರ್ಗಣಸ್ಥಾನ'ಗಳ ಮೂಲಕ ಜೀವತತ್ತ್ವ ಮತ್ತು ಕರ್ಮಪ್ರಕೃತಿಗಳನ್ನು ವಿಸ್ತಾರವಾಗಿ ವರ್ಣಿಸುವ ಮಹಾನ್ ದಾರ್ಶನಿಕ ಗ್ರಂಥವೇ 'ಷಟ್‌ಖಂಡಾಗಮ'.

### ಷಟ್ ಖಂಡಾಗಮದಲ್ಲಿ ಬರುವ ವಸ್ತು (ವಿಷಯ)ಗಳು

ಖಂಡ 1- **ಜೀವಸ್ಥಾನ ಸತ್ ಪ್ರರೂಪಣಾ**– ಈ ಖಂಡದಲ್ಲಿ ಪುಷ್ಪದಂತ ಮತ್ತು ಭೂತಬಲಿ ಆಚಾರ್ಯರು ಎಂಟು ಅನುಯೋಗ ದ್ವಾರ, ಒಂಬತ್ತು ಚೂಲಿಕೆ, ಹದಿನಾಲ್ಕು ಗುಣಸ್ಥಾನ ಹಾಗೂ ಹದಿನಾಲ್ಕು ಮಾರ್ಗಣಾ ಸ್ಥಾನಗಳ ಮೂಲಕ ಜೀವಸ್ಥಾನದ ತತ್ತ್ವಗಳನ್ನು ಬಹು ಸೂಕ್ಷ್ಮ ದೃಷ್ಟಿಯಿಂದ ವಿಸ್ತೃತವಾಗಿ ವರ್ಣಿಸಿರುತ್ತಾರೆ.

ಖಂಡ 2- **ಖುದ್ದಾಬಂಧ**– ಮಹಾಬಂಧದ ದೃಷ್ಟಿಯಿಂದ ಈ ಖಂಡವು 'ಖುದ್ದ'(ಕ್ಷುದ್ರ) ಚಿಕ್ಕದಾದುದರಿಂದ ಇದಕ್ಕೆ ಖುದ್ದಾಬಂಧ ಎಂಬ ಹೆಸರು ಬಂದಿದೆ. ಇದರಲ್ಲಿ ಸ್ವಾಮಿತ್ವ, ಕಾಲ, ಅಂತರ, ಭಂಗವಿಚಯ, ದ್ರವ್ಯ ಪ್ರಮಾಯಾನುಗಮ, ಕ್ಷೇತ್ರಾನುಗಮ ಮತ್ತು ಅಲ್ಪಬಹುತ್ವಾನುಗಮಗಳೆಂಬ ಹನ್ನೊಂದು ಅಧಿಕಾರಗಳಿವೆ. ಮಹಾದಂಡಕವೆಂಬ ಅಲ್ಪಬಹುತ್ವದ ಚೂಲಿಕೆಯೊಂದಿಗೆ ಕರ್ಮಬಂಧಕನಾದ, ಜೀವನ ಕರ್ಮಬಂಧದ ಭೇದಗಳು ವಿವರಿಸಲ್ಪಟ್ಟವೆ. ಈ ವಿಷಯವೇ 'ಮಹಾಬಂಧ' ಎಂಬ ಖಂಡದಲ್ಲಿ ಬಹಳ ವಿಸ್ತಾರವಾಗಿ ವರ್ಣಿತವಾಗಿವೆ.

ಖಂಡ 3- **ಬಂಧಸ್ವಾಮಿತ್ವವಿಚಯ**– ಇದರಲ್ಲಿ ಕರ್ಮವನ್ನು ಬಂಧಿಸಿಕೊಳ್ಳುವ ಬಂಧಕನಾದ ಜೀವನ ಸ್ವಾಮಿತ್ವವನ್ನು ಹದಿನಾಲ್ಕು ಗುಣಸ್ಥಾನ



ಹಾಗೂ ಮಾರ್ಗಣ ಸ್ಥಾನಗಳ ಮೂಲಕ ಯಾವ ಜೀವನಿಗೆ ಎಷ್ಟು ಕರ್ಮಪ್ರಕೃತಿಗಳು ಎಷ್ಟನೆಯ ಗುಣ ಸ್ಥಾನದವರೆಗೆ ಬಂಧವಾಗುತ್ತವೆ? ಯಾವ ಜೀವನಿಗೆ ಬಂಧವಾಗುವುದಿಲ್ಲ? ಎಷ್ಟೆಷ್ಟು ಕರ್ಮಪ್ರಕೃತಿಗಳು ಯಾವ ಯಾವ ಗುಣಸ್ಥಾನಗಳಲ್ಲಿ ವ್ಯುಚ್ಛಿತ್ತಿ (ಬೇರ್ಪಡು) ಹೊಂದುತ್ತವೆ? ಸೋದರ ಬಂಧಪ್ರಕೃತಿಗಳೆಷ್ಟು? ಪರೋದಯ ಬಂಧಪ್ರಕೃತಿಗಳೆಷ್ಟು? ಎಂಬಿತ್ಯಾದಿ ಕರ್ಮ ಬಂಧಕ್ಕೆ ಸಂಬಂಧಿಸಿದ ಗಹನ ವಿಷಯಗಳ ವರ್ಣನೆ ಬರುತ್ತದೆ.

ಖಂಡ 4- **ವೇದನಾಖಂಡ** – ಇದರಲ್ಲಿ 'ಣಮೋ ಜಿಣಾಣಂ' ಎಂದು ಆರಂಭಿಸಿ 'ಣಮೋ ವಡ್ಢಮಾಣಬುದ್ಧರಿಸಿಸ್ಸ' ಎಂಬಲ್ಲಿಯ ವರೆಗಿನ 44 ಸೂತ್ರಗಳಿಂದ 'ಶ್ರೀ ಗಣಧರವಲಯ' ಮಂತ್ರರೂಪದ ಮಂಗಲಾಚರಣೆಯೊಂದಿಗೆ ಕೃತಿ ಮತ್ತು ವೇದನಾ ಎಂಬ ಎರಡು ಅನುಯೋಗ ದ್ವಾರಗಳ ವರ್ಣನೆ ಬರುತ್ತದೆ. ಇಲ್ಲಿ ಕೃತಿಗಿಂತ ವೇದನಾನುಯೋಗದ್ವಾರದ ವರ್ಣನೆಯೇ ಹೆಚ್ಚಾಗಿರುವುದರಿಂದ ಇದಕ್ಕೆ ವೇದನಾ ಖಂಡ ಎಂಬ ಹೆಸರು ಬರಲು ಕಾರಣವಾಗಿದೆ. ಕೃತಿ ಭಾಗದಲ್ಲಿ ಔದಾರಿಕಾದಿ ಐದು ಶರೀರಗಳ ಸಂಘಾತ ಮತ್ತು ಪರಿಘಾತ, ಜನ್ಮದ ಮೊದಲು ಮತ್ತು ಅನಂತರದ ಸಮಯದಲ್ಲಿ ಜೀವನ ಕೃತಿ, ನೋಕೃತಿ ಮತ್ತು ಅವ್ಯಕ್ತ ರೂಪಗಳ ವರ್ಣನೆ ಬರುತ್ತದೆ. ನಾಮ, ನಿಕ್ಷೇಪನಯ, ನಾಮ, ದ್ರವ್ಯ, ಕ್ಷೇತ್ರ, ಕಾಲ, ಭಾವ, ಪ್ರತ್ಯಯ, ಸ್ವಾಮಿತ್ವ, ವೇದನಾಗತಿ, ಅನಂತರ, ಸನ್ನಿಕರ್ಷ, ಪರಿಮಾಣ, ಭಾಗಭಾಗಾನುಗಮ ಮತ್ತು ಅಲ್ಪಬಹುತ್ವಾನುಗಮ ಹೀಗೆ ಹದಿನಾರು ಅನುಯೋಗ ದ್ವಾರಗಳ ವರ್ಣನೆ ಮಾಡಲಾಗಿದೆ.

ಖಂಡ 5- **ವರ್ಗಣಾ ಖಂಡ**– ಈ ಖಂಡದಲ್ಲಿ ಬಂಧನೀಯ ಅಂದರೆ ಬಂಧಿಸಲ್ಪಡುವ ಕರ್ಮದಲ್ಲಿ ಅಂತರ್ಗತವಾಗುವ ವರ್ಗಣಾಧಿಕಾರವಲ್ಲದೆ ಸ್ಪರ್ಶ, ಕರ್ಮ, ಪ್ರಕೃತಿ ಮತ್ತು ಬಂಧನದ ಮೊದಲ ಭೇದವಾದ ಬಂಧಾನುಯೋಗ ದ್ವಾರದ ವರ್ಣನೆಯೂ ಅಡಕವಾಗಿದೆ. ಸ್ಪರ್ಶದಲ್ಲಿ ನಿಕ್ಷೇಪಾದಿ ಹದಿನಾರು ಅಧಿಕಾರಗಳಲ್ಲಿ ಕರ್ಮ ಸ್ಪರ್ಶದ ಹದಿಮೂರು ಭೇದಗಳನ್ನೂ ಅದರ ಪ್ರಯೋಜನವನ್ನೂ ವಿವರಿಸಲಾಗಿದೆ. ಕರ್ಮದಲ್ಲಿ ಮೇಲಿನ ಹದಿನಾರು ಅಧಿಕಾರಗಳಿಂದ ನಾಮ, ಸ್ಥಾಪನಾ, ದ್ರವ್ಯ ಪ್ರಯೋಗ, ಸಮವಧಾನ, ಅಧಃ, ಈರ್ಯಾಪಥ, ತಪಃ, ಕ್ರಿಯಾ ಮತ್ತು ಭಾವ ಹೀಗೆ ಹತ್ತು ಪ್ರಕಾರದ ಕರ್ಮಪ್ರಭೇದಗಳನ್ನು ವಿವರಿಸಿದ್ದಾರೆ. ಪ್ರಕೃತಿಯಲ್ಲಿ ಶೀಲ ಮತ್ತು ಸ್ವಭಾವಗಳು ಪ್ರಕೃತಿಯ ಪರ್ಯಾಯಗಳೆಂದು ತಿಳಿಸಿ, ನಾಮ, ಸ್ಥಾಪನಾ, ದ್ರವ್ಯ ಮತ್ತು ಭಾವಗಳಲ್ಲಿ ಕರ್ಮಪ್ರಕೃತಿಯನ್ನು ಮೇಲೆ ಸೂಚಿಸಿದ ಹದಿನಾರು ಅಧಿಕಾರಗಳಲ್ಲಿ ವಿಸ್ತೃತ ನಿರೂಪಣೆ ಮಾಡಿರುತ್ತಾರೆ. ಈ

ಖಂಡದ ಮುಖ್ಯ ಅಧಿಕಾರವು 'ಬಂಧನೀಯ'ವಾಗಿದೆ. ಇದರಲ್ಲಿ ಇಪ್ಪತ್ತ ಮೂರು ಪ್ರಕಾರವಾದ ಕರ್ಮವರ್ಗಣೆಗಳನ್ನು ವರ್ಣಿಸಿ, ಇವುಗಳೇ ಕರ್ಮಬಂಧಕ್ಕೆ ಯೋಗ್ಯವಾದ ಬಂಧನೀಯ ವರ್ಗಣೆಗಳೆಂದು ಬಲು ವಿಸ್ತಾರವಾಗಿ ವಿವರಿಸಿದ್ದಾರೆ.

ಖಂಡ 6- **ಮಹಾಬಂಧ–** ಇದು ಷಟ್ ಖಂಡಾಗಮದ ಕೊನೆಯದಾದ ಆರನೆಯ ಖಂಡವಾಗಿದೆ. ಇದರಲ್ಲಿ ಭೂತಬಲ್ಯಾಚಾರ್ಯರು ಪ್ರಕೃತಿ, ಸ್ಥಿತಿ, ಅನುಭಾಗ ಮತ್ತು ಪ್ರದೇಶ ಬಂಧಗಳೆಂಬ ನಾಲ್ಕು ಪ್ರಕಾರದ ಬಂಧತತ್ತ್ವಗಳ ವಿಸ್ಕೃತ ವರ್ಣನೆ ಮಾಡಿರುತ್ತಾರೆ. ಕರ್ಮದ ಸ್ವಭಾವ, ಕರ್ಮಗಳು ಆತ್ಮನೊಡನೆ ಸೇರಿಕೊಂಡಿರುವ ಕಾಲ, ಅವು ಪರಿಪಕ್ವಗೊಂಡಾಗ ಉಂಟಾಗುವ ಫಲಾನುಭವ, ಯೋಗ (ಮನ ವಚನ-ಕಾಯ)ದ ಮೂಲದ ಕರ್ಮರೂಪವಾಗಿ ಪರಿಣಮಿಸುವ ಪುದ್ಗಲಸ್ಕಂಧ ಮತ್ತು ಪರಮಾಣುಗಳು ಆತ್ಮಪ್ರದೇಶದಲ್ಲಿ ಎಷ್ಟೆಷ್ಟು ಇರುತ್ತವೆ? ಎಂಬುದರ ಪರಿಮಾಣ ಇವುಗಳನ್ನು ಆಧುನಿಕ ಬೀಜಗಣಿತದ ಆಧಾರದ ಮೇಲೆ ವೈಜ್ಞಾನಿಕವಾಗಿ ವಿಶಾಲವಾದ ವರ್ಣನೆ ಮಾಡಿದ್ದಾರೆ. ಇವಿಷ್ಟು ಷಟ್‌ಖಂಡಾಗಮದಲ್ಲಿ ಬರುವ ಜಟಿಲ ವಿಷಯಗಳಾಗಿವೆ. ಈ ಪರಮಾಗಮವು ಮೂಡುಬಿದಿರೆಯಲ್ಲಿ ಸುರಕ್ಷಿತವಾಗಿತ್ತು.

**ಷಟ್‌ಖಂಡಾಗಮಕ್ಕೆ ಟೀಕೆ ಬರೆದ ಟೀಕಾಕಾರರು :**

1 ಶ್ರೀ ಭಗವತ್ ಕುಂದಕುಂದಾಚಾರ್ಯರು ರಚಿಸಿದ ಪರಿಕರ್ಮ ಟೀಕೆ 2 ಶ್ರೀ ಶ್ಯಾಮಕುಂಡಾಚಾರ್ಯರ (ಪ್ರಾಕೃತ, ಸಂಸ್ಕೃತ, ಕನ್ನಡ ಟೀಕೆ) 3 ಶ್ರೀ ತುಂಬುಲೂರಾಚಾರ್ಯರ ಚೂಡಾಮಣಿ ಮತ್ತು ಪಂಚಿಕಾ 4 ಶ್ರೀ ಸಮಂತಭದ್ರ ಸ್ವಾಮಿಗಳು ಬರೆದ ಟೀಕೆ 5 ಶ್ರೀ ಬಪ್ಪದೇವ ಗುರುಗಳ ವ್ಯಾಖ್ಯಾಪ್ರಜ್ಞಪ್ತಿ ಟೀಕೆ 6 ಶ್ರೀ ವೀರಸೇನಾಚಾರ್ಯರ ಧವಲಾ, ಜಯಧವಲಾ ಟೀಕೆ 7 ಶ್ರೀ ಜಿನಸೇನಾಚಾರ್ಯರು ಬರೆದ ಜಯಧವಲಾ ಟೀಕೆ 8 ಶ್ರೀ ಭೂತಬಲ್ಯಾಚಾರ್ಯರು ಬರೆದ ಮಹಾಧವಲಾ ಟೀಕೆ.

ಹೀಗೆ ಅಮೋಘವಾದ ಈ ಷಟ್‌ಖಂಡಾಗಮ ಗ್ರಂಥಕ್ಕೆ ಅನೇಕಾನೇಕ ಮಹಾನ್ ಆಚಾರ್ಯ ಪ್ರಮುಖರು ವಿವಿಧ ರೀತಿಯಲ್ಲಿ ಟೀಕೆಗಳನ್ನು ರಚಿಸಿ ಆ ಗ್ರಂಥಗಳ ಪ್ರಭಾವದಿಂದ ಜೈನ ದರ್ಶನಾಕಾಶದಲ್ಲಿ ಚಿರಕಾಲ ಥಳಥಳಿಸುವ ಉಜ್ವಲ ನಕ್ಷತ್ರಗಳಂತೆ ಅಮರರಾಗಿದ್ದಾರೆ. ಇದು ಶುದ್ಧ ದಾರ್ಶನಿಕ ಲೇಖನವಾಗಿದೆ. ಪಾರಿಭಾಷಿಕ ಶಬ್ದಗಳಿಂದ ತುಂಬಿದೆ. ಅತಿ ಕ್ಲಿಷ್ಟವಾಗಿ ಕಾಣಬಹುದು. ದಾರ್ಶನಿಕ



ವಿಷಯವು ದ್ರಾಕ್ಷಾ ಪಾಕವಲ್ಲ. ನಾರಿಕೇಳ (ತೆಂಗಿನಕಾಯಿ) ಪಾಕವಾಗಿದೆ. ಕಷ್ಟಪಟ್ಟು ಸುಲಿದು ಒಳ ಹೊಕ್ಕರೆ ಮಾತ್ರ ಮಧುರ ರಸದ ಪ್ರಾಪ್ತಿಯಾಗುತ್ತದೆ. ಈ ಷಟ್ ಖಂಡಾಗಮವು ಪ್ರಾಕೃತ ಭಾಷೆಯಲ್ಲಿದೆ. ಅವು ಹಿಂದಿಗೆ ಅನುವಾದವಾಗಿವೆ. ಈಗ ಬೆಳುಗೊಳದ ಭಟ್ಟಾರಕರು ಕನ್ನಡಕ್ಕೆ ಅನುವಾದ ಮಾಡಿಸಿ ಪ್ರಕಟಿಸುತ್ತಿದ್ದಾರೆ.

## 26. ವಿಚಾರ ಶಕ್ತಿಯ ವಿರಾಟ್ ಸ್ವರೂಪ

ಮಾನವನಿಗೆ ಸ್ವಭಾವ ಜನ್ಯವಾದ ಕೆಲವು ಗುಣಗಳುಂಟು. ಅವುಗಳಲ್ಲಿ ಪ್ರಮುಖವಾದ ಗುಣವೆಂದರೆ ವಿಚಾರಶಕ್ತಿ. ಮಾನವ ಜೀವನದಲ್ಲಿ ವಿಚಾರ ಶಕ್ತಿಯ ಕೆಲಸ ಮಹತ್ತರವಾದುದು. ಈ ಗುಣವು ಮಾನವ ಜಾತಿಗೆ ಒಂದು ವರಪ್ರಸಾದವಿದ್ದಂತೆ. ಏಕೆಂದರೆ ವಿಚಾರಶಕ್ತಿಯಿಂದಲೇ ಮಾನವನು ಜ್ಞಾನಿ ಎನಿಸಿ ತನ್ನ ಸ್ವಭಾವವನ್ನು ಪ್ರಕಟಪಡಿಸಿಕೊಳ್ಳುತ್ತಾನೆ. ಎಂಭತ್ತು ನಾಲ್ಕು ಜೀವರಾಶಿಗಳಲ್ಲಿ ದಶಪ್ರಾಣಯುಕ್ತ ಸಂಜ್ಞಿಪಂಚೇಂದ್ರಿಯ ಜೀವ ಜಾತಿಯಲ್ಲಿ ಮಾನವ ಜನ್ಮವು ಮಹತ್ವ ಪೂರ್ಣವಾದುದು. ಏಕೆಂದರೆ ಈ ಮಾನವನಲ್ಲೇ ವಿಚಾರ ಶಕ್ತಿಯ ಹೊಂಬೆಳಕಿನ ತೇಜಸ್ಸು ಕಂಡು ಬರುತ್ತದೆ.

ಆತ್ಮನು ಜ್ಞಾನ ದರ್ಶನಮಯ. ಜ್ಞಾನ ವಿಕಸಿತವಾದಷ್ಟು ಆತ್ಮ ಚೈತನ್ಯ ಪ್ರಕಟವಾಗುತ್ತದೆ. ಇದರಿಂದಲೇ ಅತೀಂದ್ರಿಯವೂ, ಅಲೌಕಿಕವೂ ಆದ ಆನಂದ ಉಂಟಾಗುತ್ತದೆ. ಇದೇ ಆತ್ಮಾನಂದ. ಈ ಆನಂದವು ಆತ್ಮನ ಶತಃ ಸಿದ್ಧಸ್ವಭಾವ. ಈ ಸ್ವಭಾವವನ್ನು ಪ್ರಾಪ್ತಮಾಡಿಕೊಳ್ಳಲು ಕಾರಣವಾದುದು ವಿಚಾರ ಶಕ್ತಿ. ಈ ವಿಚಾರ ಶಕ್ತಿಯು ಅನ್ಯ ಪ್ರಾಣಿಗಳಲ್ಲಿ ಪೂರ್ಣ ರೂಪದಲ್ಲಿ ವಿಕಾಸವಾಗಿರುವುದಿಲ್ಲ. ಇದಕ್ಕಾಗಿಯೇ ವಿಚಾರ ಶಕ್ತಿಯ ಬೆಳವಣಿಗೆ ಇಲ್ಲದವನನ್ನು ಪಶು ಸಮಾನವೆಂದು ಭಾವಿಸುವ ವಾಡಿಕೆಯುಂಟು.

ಯಾವಾಗಲೂ ಹೇಯ - ಉಪಾದೇಯ, ಗ್ರಾಹ್ಯ-ಅಗ್ರಾಹ್ಯಗಳ ವಿಚಾರ ಮಾಡಿ ವಸ್ತುವಿನ ಗುಣ ದೋಷಗಳನ್ನು ವಿಮರ್ಶೆಮಾಡಿ ಹೇಯವನ್ನು ಬಿಟ್ಟು ಉಪಾದೇಯವನ್ನು ಗ್ರಹಿಸುವ ಸತ್ಯವಾದ ಒಂದು ನಿರ್ಣಯಕ್ಕೆ ಬರುವ ಮನಸ್ಸುಳ್ಳವನಿಗೇ ಮಾನವನೆಂದು ಆಚಾರ್ಯರು ಹೇಳಿದ್ದಾರೆ. ಹಾಗೂ ಈ

ಸ್ವಭಾವಕ್ಕೆ ವಿಚಾರಶಕ್ತಿ ಎಂದೂ, ಈ ವಿಚಾರ ಶಕ್ತಿಯ ಉಪಯೋಗೀ ಸ್ವಭಾವಕ್ಕೆ ಮಾನವೀಯತೆ ಎಂದರು. ಆಧ್ಯಾತ್ಮ ಹಾಗೂ ಭೌತಿಕ ಜಗತ್ತಿನಲ್ಲಿ ತನ್ನ ತನ್ನ ಅಭೀಷ್ಟದ ಸಿದ್ಧಿಗಾಗಿ ವಿಚಾರ ಶಕ್ತಿಯು ಅಮೋಘಸಾಧನವಾಗಿದೆ 'ಯಾದೃಶೀ ಭಾವನಾಯತ್ರ ಸಿದ್ಧಿರ್ ಭವತಿ ತಾದೃಶೀ' ಎಂಬಂತೆ ಭಾವನೆಗೆ ತಕ್ಕಂತೆ ಕಾರ್ಯಸಿದ್ಧಿ. ಲೌಕೀಕವೂ ವಿಚಾರಶಕ್ತಿಯ ಆಧಾರದ ಮೇಲಿದ್ದರೂ ಪಾರಮಾರ್ಥಿಕವನ್ನು ಸಾಧಿಸಲು ಸಾಧ್ಯವಾಗುವುದು. ವಿಚಾರ ಶಕ್ತಿಯು ಮಾನವ ಜೀವನದ ಕೇಂದ್ರದಲ್ಲಿ ಸ್ಥಾಪಿತವಾಗಿದ್ದು ಇಡೀ ಜೀವನವನ್ನೇ ಶಾಸನ ಬದ್ಧವಾಗಿ ನಡೆಸುತ್ತದೆ. ಇದರಿಂದ ಮಾನವನ ಪ್ರತಿಯೊಂದು ಕಾರ್ಯವೂ ತನ್ನ ವ್ಯಾಪ್ತಿಯನ್ನು ಉಲ್ಲಂಘಿಸದೆ, ಅಂದರೆ ಎಲ್ಲೆಯನ್ನು ದಾಟದೆ, ನಿಯಮ ಬದ್ಧವಾಗಿಸಾಗುತ್ತದೆ. ವಿಚಾರಶಕ್ತಿಯುಳ್ಳವನ ಜೀವನವು ನಿಯೋಜಿತ ಅನುಶಾಸನಕ್ಕೆ ಒಳಪಟ್ಟು ಕ್ರಮಬದ್ಧವಾಗಿರುತ್ತದೆ. ವಿಚಾರ ಶಕ್ತಿ ಎಂದರೆ ಮಾನವನ ಅಂತಃಪಟಲದಲ್ಲಿ ಉದ್ಭವಿಸುವ ಮನೋಭಾವನೆಯ ತರಂಗಗಳು. ಇವು ಸಾಗರದಲ್ಲಿ ಏಳುವ ಅಲೆಗಳಂತೆ ನಿರಂತರವೂಉದ್ಭವಿಸಿ ಲಯವಾಗುತ್ತವೆ. ಆದರೂ ಇವುಗಳಿಂದಾಗುವ ಪರಿಣಾಮವು ಮಹತ್ಪೂರ್ಣವಾದುದು.

ಈ ವಿಚಾರ ಶಕ್ತಿಯ ಸದುಪಯೋಗ ಅಥವಾ ದುರುಪಯೋಗವು ಮಾನವನ ಕಾರ್ಯಾಚರಣೆಯ ಮೇಲೆ ಅವಲಂಬಿತವಾಗಿದೆ. ಇವೆರಡೂ ಪ್ರತ್ಯೇಕ ಪ್ರತ್ಯೇಕವಾದ ವಿಚಾರ ಶಕ್ತಿಯ ಎರಡು ಪ್ರವಾಹದಾರೆಗಳು. ಇವೆರಡೂ ಮಾನವನನ್ನು ಉತ್ಥಾನ ಹಾಗೂ ಪತನಗಳ ಕಡೆಗೆ ಕೊಂಡೊಯ್ಯುತ್ತವೆ. ವಿಚಾರ ಶಕ್ತಿಯ ಸದುಪಯೋಗವಾದರೆ ಮಾನವನು ವಿವೇಕಿಯೂ, ಜಿತೇಂದ್ರಿಯನೂ, ಆತ್ಮಸಂಯಮಿಯೂ ಆಗಿ ದೂರದರ್ಶಿತಾ, ಕರ್ತವ್ಯ ಪಾರಾಯಣತಾ ಮುಂತಾದ ಗುಣಗಳ ಸಂಯೋಗವಾಗಿ ಉತ್ಥಾನದ ಅಥವಾ ಉನ್ನತಿಯ ಕಡೆಗೆ ಸಾಗುತ್ತಾನೆ. ಹಾಗೇ ಇದಕ್ಕೆ ವಿರುದ್ಧವಾಗಿ ವಿಚಾರ ಶಕ್ತಿಯ ದುರುಪಯೋಗದಿಂದ ಮಾನವತ್ವದ ಮಿಗಿಲಾದ ಸದ್ಗುಣಗಳ ಹಾನಿಯಾಗಿ ಹುಚ್ಚನಂತೆ ಅವಿವೇಕಿ ಎನಿಸಿ ಗೌರವಹೀನವಾಗಿ ಕಡಿವಾಣ ಇಲ್ಲದ ರಥದ ಕುದುರೆಯಂತೇ ಅವನ ಜೀವನವು ಅಸ್ತವ್ಯಸ್ತವಾಗುತ್ತದೆ. ಇದರಿಂದ ವಿವೇಚನೆ ಇಲ್ಲದವನ ಬಾಳು ಹಾಳು ಎನ್ನುತ್ತಾರೆ.

ವಿಚಾರ ಶಕ್ತಿಯ ಸದುಪಯೋಗದಿಂದ ವಿವೇಕದ ವಿಕಾಸವಾಗುತ್ತದೆ. ಹಿತಾಹಿತ ಜ್ಞಾನವೇ ವಿವೇಕ. ಒಳ್ಳೆಯದಾವುದು? ಕೆಟ್ಟದ್ದಾವುದು? ಹೇಯ ಯಾವುದು? ಉಪಾದೇಯ ಯಾವುದು? ಆಡ ತಕ್ಕದಾದ್ದವುದು? ಬಿಡತಕ್ಕದ್ದಾವುದು? ಮಾಡತಕ್ಕದ್ದಾವುದು? ಹಿಡಿಯತಕ್ಕದ್ದಾವುದು?



ನೋಡವುದಾವುದು? ಕೇಳುವುದಾವುದು? ಎಂಬೀ ಮುಂತಾದುವುಗಳ ಜ್ಞಾನವು ವಿಚಾರ ಶಕ್ತಿಯ ಸದುಪಯೋಗವಿಲ್ಲದೆ ಉಂಟಾಗುವುದಿಲ್ಲ. ಯಾರು ವಿಚಾರ ಶೂನ್ಯರಾಗಿಯಾವ ಕೆಲಸವನ್ನು ಮಾಡುತ್ತಾರೋ ಅವು ಕೈಗೂಡಲಾರವು. ಒಬ್ಬ "ಎತ್ತು ಕರುಹಾಕಿತು" ಎಂದ. ಮತ್ತೊಬ್ಬ "ಅದನ್ನು ಕೊಟ್ಟಿಗೆಗೆ ಕಟ್ಟು ಹಾಲು ಕರೆಯೋಣ" ಎಂದ. ಇಲ್ಲಿ ಇಬ್ಬರೂ ಅವಿಚಾರವಂತರೇ ಇದರಿಂದ ಉದ್ದೇಶಿತ ಕಾರ್ಯ ನೆರವೇರುವುದಿಲ್ಲ. ಹೇಳುವವನು ಹೆಡ್ಡನಾದರೂ ಕೇಳುವವನು ಕಿವುಡನಾಗಬಾರದು. ಅಂದರೆ ಅವಿಚಾರಿಯಾಗಬಾರದು ಎಂದರ್ಥ.

ವಿಚಾರ ಉದ್ಭವವಾದರೂ ಅದನ್ನು ಉಪಯೋಗಿಸುವ ಶಕ್ತಿ ಇದ್ದರೇನೇ ಪ್ರಯೋಜನ. ಇಲ್ಲಿ ಒಂದಕ್ಕೊಂದು ಪೂರಕ. ಯಾವುದೊ ಒಂದಿದ್ದರೆ ಸಾಲದು. ಹೇಗೆಂದರೆ ಒಬ್ಬ ಕುರುಡ, ಮತ್ತೊಬ್ಬ ಕುಂಟ ಕಾಡಿನಲ್ಲಿ ಒಬ್ಬರಿಗೊಬ್ಬರು ನೆರವಿನಿಂದ ಸಾಗುತ್ತಿದ್ದಾರೆ.

ಕಾರಣಾಂತರದಿಂದ ಅವರಲ್ಲಿ ಜಗಳ ಹುಟ್ಟಿ ಬೇರೆ ಬೇರೆಯಾದರು. ಮುಂದೆ ಆ ಕಾಡಿಗೆ ಕಾಳ್ಗಿಚ್ಚಿನಿಂದ ಬೆಂಕಿ ವ್ಯಾಪಿಸಿತು. ಆಗ ಇಬ್ಬರೂ ಒಂದೊಂದು ಕಡೆ ಸಿಕ್ಕಿಬಿದ್ದರು. ಕುರುಡ ನಡೆಯ ಬಲ್ಲವನಾದರೂ ಸುರಕ್ಷಿತ ಸ್ಥಾನ ಅವನಿಗೆ ಗೋಚರವಾಗದೇ ಬೆಂಕಿ ಹೆಚ್ಚಿದ್ದ ಕಡೆಗೇ ಓಡಿದ. ಕುಂಟ ನೋಡ ಬಲ್ಲನಾದರೂ ಓಡುವ ಶಕ್ತಿ ಇಲ್ಲದೆ ಜ್ವಾಲೆಗೆ ಸಿಕ್ಕಿ ಬಿದ್ದ. ಯಾರೊಬ್ಬರೂ ಪಾರಾಗಲಾಗಲಿಲ್ಲ. ಇಲ್ಲಿ ಇದರ ಸಾರಾಂಶವಿಷ್ಟೆ. ವಿಚಾರವಿಲ್ಲದ್ದೇ ಅಂಧತ್ವ, ಉಪಯೋಗ ಶಕ್ತಿ ಇಲ್ಲದ್ದೇ ಕುಂಟುತನ. ಹೀಗೇ ವಿಚಾರ ಮತ್ತು ಶಕ್ತಿಗಳು ಒಂದಕ್ಕೊಂದು ಪೂರಕ. ಇವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಯಾವ ಭಾಗ ಸವೆದಿದ್ದರೂ ಅದು ಚಲಾವಣೆಯಾಗುವುದಿಲ್ಲ. ಆದುದರಿಂದ ವಿಚಾರವು ಶಕ್ತಿಯೊಂದಿಗೆ ಸೇರಿ ವಿರಾಟ್ ರೂಪ ತಾಳಿ ಮಹತ್ಪೂರ್ಣವಾಗುತ್ತದೆ.

ಯಾವುದಾದರೂ ಕಾರ್ಯ ಪ್ರಾರಂಭದಲ್ಲಿ ಪೂರ್ವಾಪರ ಸಾಧ್ಯಾಸಾಧ್ಯತೆಯ ವಿಚಾರ ವಿಮರ್ಶೆ ಮಾಡಿದರೆ ಹಿಡಿದ ಕೆಲಸ ಕೈಗೂಡುವುದು. ಇದು ಗ್ರಂಥ ಪ್ರಾರಂಭದಲ್ಲಿ ಪ್ರಸ್ತಾವನೆ ಮತ್ತು ಮಂಗಳ ಶ್ಲೋಕವಿದ್ದಂತೆ. ಉಪಾಧ್ಯಾಯ ಪಾಠ ಮಾಡಲು ಹಾಕಿಕೊಳ್ಳುವ ಪೀಠಿಕೆ ಇದ್ದಂತೆ. ಪ್ರಸ್ತಾವನೆ, ಮಂಗಳ ಶ್ಲೋಕ, ಅಥವಾ ಪೀಠಿಕೆ ಯಶಸ್ವಿಯಾದರೆ ಮುಂದಿನ ಎಲ್ಲಾ ಕಾರ್ಯವೂ ಕೈಗೂಡುತ್ತದೆ. ಅದಲ್ಲದೆ ಆರಂಭ ಶೂರತ್ವದಿಂದ ಯೋಜನೆ, ಯೋಚನೆ, ವಿಷಯ ವಿಮರ್ಶೆ ವಿನಿಮಯವಿರದೆ ಆತುರದಲ್ಲಿ ಮಾಡಿದ ಕಾರ್ಯ ಆಭಾಸದಲ್ಲಿ

ಪರ್ಯವಸಾನವಾಗುವುದು.

ಅದಕ್ಕೆ ಹಿರಿಯರು ಹೇಳುತ್ತಾರೆ. "ಎಚ್ಚರವಿರಬೇಕು ಮನುಜಾ ಎಚ್ಚರ ವಿರಬೇಕು" ಹಾಗೂ "ನೋಡಿ ನುಡಿ, ನೋಡಿ ನಡೆ" ಅಂದರೆ ಇದರಿಂದ ವಿಚಾರ ಶೀಲವಾಗಿ ಬಾಳಬೇಕೆಂಬ ಬೋಧೆಯಾಗುತ್ತದೆ.

ಮಾನವನು ವಿವೇಕದಿಂದಲೇ ಶ್ರೇಷ್ಠತೆಯನ್ನು ಪಡೆಯುತ್ತಾನೆ. ವಿಚಾರ ಶಕ್ತಿಯ ದುರುಪಯೋಗವೇ ಅವಿವೇಕ. ಅದರಿಂದ ಮಾನವನು ಪಥಭ್ರಷ್ಟನಾಗಿ ಅಸಂಯಮಿಯಾಗಿ ಮನೋ ದೌರ್ಬಲ್ಯದಿಂದ ನರಳುತ್ತಾನೆ.

ರಾವಣನ ಕಥೆಯಲ್ಲಿ ಇದು ಬಹು ಸ್ಪಷ್ಟವಾಗಿ ಕಾಣುತ್ತದೆ. ರಾವಣನು ತನ್ನ ವಿಚಾರ ಶಕ್ತಿಯ ಸದುಪಯೋಗ ಮತ್ತು ದುರುಪಯೋಗದಿಂದ ಪ್ರತ್ಯೇಕ ಪ್ರತ್ಯೇಕವಾದ ಪರಿಣತಿಯನ್ನು ಪ್ರಾಪ್ತ ಮಾಡಿಕೊಂಡನು. ಅವನ ದಿಗ್ವಿಜಯದ ಕಾಲದಲ್ಲಿ ಅವನ ಶತ್ರು ಪಕ್ಷದ ರಾಜನಾದ ನಳಕೂಬರನ ಪತ್ನಿ ಉಪರಂಭೆಯು ರಾವಣನಲ್ಲಿ ಅನುರಕ್ತಳಾಗಿ ಕಾಡಿದಳು. ಆದರೆ ರಾವಣನು ವಿಚಾರಶೀಲನಾಗಿ ಆಕೆಯ ಕಾರ್ಯ ಅನುಚಿತವೆಂದು ತಿಳಿದು ನೀತಿಯನ್ನು ಹೇಳಿ ಆಕೆ ತನ್ನ ಪತಿಯಲ್ಲಿ ಭಕ್ತಿಯಿಂದ ವಿಧೇಯತೆಯಿಂದ, ಪ್ರೇಮದಿಂದ, ಇರುವಂತೆ ಮಾಡಿದನು. ನಿಶ್ಚಯವಾಗಿಯೂ ಇಲ್ಲಿ ರಾವಣನ ವಿಚಾರ ಶಕ್ತಿಯ ಸದುಪಯೋಗದಿಂದ ವಿವೇಕವು ಜಾಗೃತವಾಗಿತ್ತು. ಅದೇ ರಾವಣನು ವಿವೇಕಶೂನ್ಯವಾಗಿ ಅವಿಚಾರಿಯಾಗಿ ಸೀತಾಪಹರಣ ಮಾಡಿ ತನ್ನ ಕುಲಕ್ಕೇ ಕಳಂಕವನ್ನು ತಂದು, ಅಪಯಶಸ್ಸಿಗೆ ಭಾಗಿಯಾಗಿ ಅದರಿಂದ ಹಟ, ಛಲ ಸಾಧನೆಗೆ ಹೋರಾಡಿ ಅಧೋಗತಿಯನ್ನು ಹೊಂದಿದನು.

ಮಾನವನ ಹೃದಯದಲ್ಲಿ ರಾಗ, ದ್ವೇಷ ಮತ್ತು ಮೋಹದ ಮುಸುಕು ಆವರಿಸಿರುತ್ತದೆ. ಅದು ಅನಾದಿ ಕಾಲದಿಂದ ಹೊತ್ತು ತಂದ ಕೊಳೆ. ಅದರಿಂದ ಆತ್ಮೀಕ ಗುಣಗಳಾದ ಜ್ಞಾನ ಚೇತನಗಳ ಪ್ರಕಾಶವು ಮರೆಯಾಗಿದೆ. ಇದನ್ನು ಅರಿಯುವ ಶಕ್ತಿ ಈ ಮಾನವನಿಗೆ ಉಂಟು. ಅದು ಮಾನವನು ಹೊತ್ತು ತಂದ ಒಂದು ಮಿಗಿಲಾದ ಗುಣ. ರಾಗ ದ್ವೇಷ ಮೋಹಗಳ ಮುಸುಕಿನಿಂದ ವಿಚಾರ ಶಕ್ತಿಯು ಕುಂಠಿತವಾಗುತ್ತದೆ. ಆಗ ಸ್ವಾರ್ಥ, ಲೋಭ ಹಾಗೂ ಅಜ್ಞಾನದ ವಶೀಭೂತನಾಗಿ ತನ್ನ ಹಿತಾಹಿತಗಳನ್ನು ಲೆಕ್ಕಿಸುವುದಿಲ್ಲ. ಆಗ ತನ್ನ ತಾತ್ಕಾಲಿಕ ತೃಪ್ತಿಯ ತುಚ್ಛ ಭಾವನೆಗಳ ಪೂರ್ತಿಯಾಗಿ ಹಾತುವರಿಯುತ್ತಾನೆ. ಅದರಿಂದ ಭವಿಷ್ಯದಲ್ಲಿ ಉಂಟಾಗುವ ಮಹತ್ತರವಾದ ಹಾನಿಯ ಕಡೆ ಲಕ್ಷ್ಯವಿರುವುದಿಲ್ಲ.



ಅದಕ್ಕಾಗಿ ರಾಗ ದ್ವೇಷ ಮತ್ತು ಮೋಹಗಳನ್ನು ಒತ್ತರಿಸಿ ಅಂದರೆ ಪೂರ್ವ ಕೃತ ಕರ್ಮದ ಉದಯದಿಂದ ಉಮ್ಮಳಿಸಿ ಬರುತ್ತಿರುವ ಕ್ರೋಧಾದಿ ಭಾವನೆಗಳನ್ನು ಆದಷ್ಟು ತಡೆದು ಅವುಗಳ ಪ್ರೇರಣೆಗೆ ದಾಸನಾಗದೆ ಸಮಾಧಾನದಿಂದ ಮುಂದುವರಿಯಬೇಕು. ಇದಕ್ಕೆ ಜೀವನದಲ್ಲಿ ಬೇಕಾದಷ್ಟು ಅವಕಾಶ ಉಂಟು. ದೇವ, ಶಾಸ್ತ್ರ, ಗುರು, ಹಿರಿಯರ ಆಶ್ರಯ ಪಡೆದು ಧರ್ಮೋಪದೇಶ, ಸ್ವಾಧ್ಯಾಯ, ಸೇವೆ, ದಾನ, ಪೂಜೆ ಇತ್ಯಾದಿಗಳಿಂದ ಆವರಿಸಿರುವ ಕೊಳೆಯನ್ನು ತೊಳೆದಾಗ ಹೃದಯ ಪ್ರಕಾಶವಾಗುತ್ತದೆ. ಆತ್ಮ ಚೈತನ್ಯ ಪ್ರಕಟವಾಗುತ್ತದೆ. ಅಲ್ಲಿಂದ ಸದಸದ್ ವಿಚಾರವು ಹೊಳೆಯುತ್ತದೆ. ಆಗ ತನ್ನ ಸ್ಥಿರ ಚಿತ್ತದಿಂದ ಸಧೃಢನಾಗಿ ಸಮೀಚೀನ ಧರ್ಮ ಮಾರ್ಗದ ಪರಂಪರೆಯಲ್ಲಿ ಮುನ್ನಡೆದು ಮುಂದಿನ ಪೀಳಿಗೆಗೆ ಆದರ್ಶಪ್ರಾಯ ನಾಗಬಹುದು. ಈ ಪ್ರಸಂಗದಲ್ಲಿ ಮರ್ಯಾದಾ ಪುರುಷೋತ್ತಮನಾದ ಶ್ರೀ ರಾಮನ ಉದಾಹರಣೆ ತೆಗೆದುಕೊಳ್ಳಬಹುದು. ಶ್ರೀ ರಾಮನು ತನ್ನ ಜೀವನದ ಪ್ರತಿಕ್ಷಣದಲ್ಲಿ ವಿವೇಕ, ದೂರದರ್ಶಿತ್ವ, ಹಾಗೂ ಕರ್ತವ್ಯ ಪಾರಾಯಣತೆಯ ಕಡೆ ಪೂರ್ಣ ಲಕ್ಷ್ಯ ಕೊಡುತ್ತಿದ್ದನು. ಅವನ ಆದರ್ಶವು ಇಂದಿಗೂ ಲೋಕದ ಜನ ಸಾಮಾನ್ಯರ ಹೃದಯದಲ್ಲಿ ಸತ್‌ಪ್ರೇರಣೆಯನ್ನುಂಟು ಮಾಡುತ್ತದೆ. ಆದುದರಿಂದಲೇ ಆತನು ಪುರುಷರಲ್ಲೇ ಉತ್ತಮ ಮರ್ಯಾದೆಯನ್ನು ಪಡೆದು ಪುರುಷೋತ್ತಮನೆನಿಸಿದನು. ಆತನ ವಿಚಾರಪೂರ್ಣ ಶಾಸನದ ಆಡಳಿತದ ವಿಶೇಷತೆಯನ್ನು ಅರಿತ ಜನ ಈಗಲೂ ರಾಮರಾಜ್ಯದ ಕನಸು ಕಾಣುತ್ತಿದ್ದಾರೆ.

ಹಾಗೆಯೇ ಜ್ಞಾನ ದರ್ಶನಾದಿಗಳ ಹೀನಾಧಿಕ್ಯತೆ, ಸುಖ ದುಃಖದ ಸಂವೇದನೆ, ಆತ್ಮ ಸ್ವಭಾವದ ವಿಸ್ಮೃತಿ, ಆಯುಷ್ಯದ ಏರಿಳಿತ, ವಿವಿಧ ಶರೀರ ಪ್ರಕೃತಿಗಳ ಪ್ರಾಪ್ತಿ, ಲಾಭಾಲಾಭಗಳ ಸ್ಥಿತಿ ಮುಂತಾದವುಗಳು ಉಂಟಾಗಲು ಅವುಗಳ ಸಂಬಂಧಿತವಾದ ಕರ್ಮಗಳನ್ನು ಬಂಧ ಮಾಡಿಕೊಳ್ಳುವಾಗ ಇದ್ದ ವಿಚಾರ ಶಕ್ತಿಯ ವಿರಾಟ್ ಸ್ವರೂಪದ ವಿವಿಧ ರೂಪಗಳೇ ಕಾರಣ. ಜೈನ ನ್ಯಾಯವಾದ, ವಸ್ತು ವಿಮರ್ಶಾ ನಿರ್ಣಯಾತ್ಮಕವಾದ ಸ್ಯಾದ್ವಾದ, ಸಪ್ತಭಂಗಿಯ ಪ್ರಯೋಗವೂ ಅದನ್ನು ಪ್ರಯೋಗಿಸುವವನ ವಿಚಾರ ಶಕ್ತಿಯ ಸದುಪಯೋಗದಿಂದಲೇ ಸಾಧ್ಯ.

ವಿಚಾರ ಶಕ್ತಿಯು ಕುಂಠಿತವಾದರೆ ಯಾವ ವಿಷಯದ ವಿಶ್ಲೇಷಣೆಯನ್ನೂ ಮಾಡಲು ಸಾಧ್ಯವಿಲ್ಲ. ವಿಶ್ಲೇಷಣೆಯ ಅಭಾವದಿಂದ ವಸ್ತುವಿನ ಗುಣ ದೋಷಗಳ ಪರಿಚಯವಾಗುವುದಿಲ್ಲ. ತತ್ಫಲವಾಗಿ ಗುಣ ಗ್ರಹಣ ದೋಷ ಪರಿಹಾರದಲ್ಲಿ ಏರು ಪೇರಾಗುತ್ತದೆ. ಇದಕ್ಕೆ ಆಧ್ಯಾತ್ಮಿಕ, ನೈತಿಕ ಸಹವಾಸಬೇಕು. ಅದನ್ನು ಹುಡುಕಲೂ ಪಡೆಯಲೂ ತನ್ನಲ್ಲಿಯೇ ದತ್ತಚಿತ್ತವಾಗಿರುವ ವಿಚಾರ ಶಕ್ತಿಯ ಸದುಪಯೋಗ

ಮಾಡಿಕೊಳ್ಳಬೇಕು. ಅದಕ್ಕಾಗಿ ದಿನಂ ಪ್ರತಿ ನಾನಾರು? ನನ್ನ ಸ್ವಭಾವವೇನು? ನನ್ನ ಕರ್ತವ್ಯವೇನು? ನನ್ನ ಜನ್ಮ ಮತ್ತು ಜೀವನದ ಗುರಿ ಏನು? ಎಂಬ ಪ್ರಶ್ನೆಗಳ ಉತ್ತರವನ್ನು ಪಡೆದು ಕೊಳ್ಳಲು ವಿಚಾರ ಶೀಲ ಸಂಪನ್ನನಾಗಬೇಕು. ಹೀಗೆ ಆತ್ಮನ ಹಾಗೂ ಜಗತ್ತಿನ ಉತ್ಥಾನ ಪತನಕ್ಕೆ ಕಾರಣವಾದ ವಿಚಾರ ಶಕ್ತಿಯು ವಿರಾಟ್ ಸ್ವರೂಪ ಉಳ್ಳದ್ದು ಎಂದು ನಿರ್ಣಯಿಸಬಹುದು.

ವಿಚಾರ ಶಕ್ತಿಯ ವಿಕಾಸವಾಗಲು ಹಲವು ಯೋಗ್ಯತೆಗಳು ಬೇಕು. ಆಸನ್ನ ಭವ್ಯನಾಗಿದ್ದರೆ ಅಥವಾ ಕೆಲವೇ ಭವ ಅಥವ ಕೆಲವೇ ವರ್ಷಗಳಲ್ಲಿ ಮುಕ್ತಿಗೆ ಹೋಗುವವನಾಗಿದ್ದರೆ, ಕರ್ಮ ಕ್ಷಯ ಅಥವಾ ಉಪಶಮನವಾಗುವ ಅವಧಿ ಬಂದಿದ್ದರೆ, ಭದ್ರಪರಿಣಾಮಿಯಾಗಿದ್ದರೆ ಬೇಗ ವಿಚಾರ ಶಕ್ತಿಯ ವಿಕಾಸವಾಗುತ್ತದೆ. ಆದರೆ ಇವೆಲ್ಲಾ ಈಗ ನಮ್ಮ ಕೈ ಯೊಳಗಿಲ್ಲ. ಇವು ಪೂರ್ವಕೃತ ಪುಣ್ಯವನ್ನು ಅವಲಂಬಿಸಿವೆ. ಆದರೆ ನಮಗೆ ಲಭ್ಯವಿರುವ ಯೋಗ್ಯತೆ ಎಂದರೆ ಸದ್ಗುರುವಿನ ಆಶ್ರಯ, ಧರ್ಮ ಗ್ರಂಥಗಳ ಸ್ವಾಧ್ಯಾಯ, ಧರ್ಮ ಧ್ಯಾನದ ಅಭ್ಯಾಸ, ದೇವ ದರ್ಶನ ಪೂಜೆ ಶಾಸ್ತ್ರ ಶ್ರವಣ, ಯಥಾಶಕ್ತಿ ವ್ರತ ಸಂಯಮಗಳ ಪಾಲನೆ ಮುಂತಾದವುಗಳನ್ನು ಆಶ್ರಯಿಸಿಕೊಳ್ಳಬೇಕು. ಇದರಿಂದ ಯಾರು ಬೇಕಾದರೂ ತಮ್ಮ ವಿಚಾರ ಶಕ್ತಿಯನ್ನು ವಿಕಾಸ ಪಡಿಸಿಕೊಂಡು ಧರ್ಮ ಜಾಗೃತರಾಗಿ ಚಿಂತಾಮಣಿಯಂತಹ ಸಮ್ಯಕ್ತ್ವ ಪ್ರಾಪ್ತಿ ಮಾಡಿಕೊಳ್ಳಬಹುದು. ತತ್ಫಲವಾಗಿ ನಿರಂತರ ಸುಖದ ಮಾರ್ಗ ದೊರೆಯುತ್ತದೆ ಮುಂದೆ ಸಮ್ಯಕ್ ಜ್ಞಾನ, ಸಮ್ಯಕ್ಚಾರಿತ್ರಗಳು ಆತ್ಮ ಸಂಪನ್ನರಾಗಿ ಕೃತಕೃತ್ಯತೆಯನ್ನೂ ಪಡೆಯಬಹುದು.

## 27. ದೀಪಾವಳಿಯು ಒಂದು ಆಧ್ಯಾತ್ಮಿಕ ಪರ್ವ

ಮಾನವ ಜನ್ಮವೇ ದುರ್ಲಭ. ಅದರಲ್ಲೂ ಸದ್ಧರ್ಮಿ, ಸುಜ್ಞಾನಿ, ಸದಾಚಾರಸಂಪನ್ನನಾಗಿ ಬಾಳುವ ಸತ್‌ಸಂಪ್ರದಾಯದಲ್ಲಿ ಜನಿಸಿ ಬಾಳುವುದು ಇನ್ನೂ ದುರ್ಲಭ. ಇಂತಹದರಲ್ಲಿ ಯಾವುದೋ ಮಹಾಪುಣ್ಯದಿಂದ ಸತ್‌ಸಂಪ್ರದಾಯದಲ್ಲಿ ಹುಟ್ಟಿರುವುದರಿಂದ ಉತ್ತಮನಾಗಿ ಬಾಳುವ ಸದವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಸತ್‌ಸಂಪ್ರದಾಯಸ್ಥರು ಸದ್‌ವ್ಯವಹಾರದಲ್ಲಿ



ತೊಡಗುತ್ತಾರೆ. ಅವರ ಕೊನೆಯ ಗುರಿ ನಿಶ್ಚಯದ ಕಡೆಗೇ ಇರುತ್ತದೆ. ಆದರೆ ಈ ಕಲುಷಿತ ಹೊರ ವಾತಾವರಣದಲ್ಲಿ ಎಂತಹವನನ್ನಾದರೂ ಎಚ್ಚರ ತಪ್ಪಿಸುವಂತಹ, ತನ್ನತನವನ್ನೇ ಮರೆಸುವಂತಹ ಅನೇಕ ಸಂದರ್ಭಗಳು ಒದಗುವುದುಂಟು, ಹಾಗೆಯೇ ವ್ಯವಹಾರದಲ್ಲಿ ಮಗ್ನನಾಗಿ ಮರೆತುಹೋದ ಕರ್ತವ್ಯಗಳನ್ನೂ ಜ್ಞಾಪಿಸಿ ಮತ್ತೆ ನಿಶ್ಚಯದ ಕಡೆ ತತ್ಪರರಾಗುವಂತೆ ಮಾಡುವ ಸುಸಂದರ್ಭ ಸನ್ನಿವೇಶಗಳೂ ಹಲವುಂಟು. ಇವೇ ಪರ್ವಕಟ್ಟಳೆಗಳು. ಕೆಲವೊಂದು ಪರ್ವಕಾಲದಲ್ಲಿ ಗೃಹಸ್ಥರು ತಮ್ಮ ಹಿಂದಿನ ಮಹಾತ್ಮರ ಆದರ್ಶವನ್ನು ನೆನೆದು ತನ್ನ ನೈಜ ಗುರಿಯ ಕಡೆ ಕಾಯಾ ವಾಚಾ ಮನಸಾ ತತ್ಪರನಾಗಿರಲು ಅವಕಾಶವಿದೆ. ಪ್ರತಿಯೊಂದು ಪರ್ವಗಳೂ ಆಧ್ಯಾತ್ಮಿಕ ನೆಲೆಯನ್ನು ಹೊಂದಿವೆ. ನಮ್ಮ ನಮ್ಮ ಅಂತಃಶುದ್ಧಿಯನ್ನು ಮಾಡಿಕೊಂಡು ಅಧ್ಯಾತ್ಮದ ಅನುಭವಾಮೃತವನ್ನು ಪಾನಮಾಡುವ ಸುಸಂದರ್ಭವನ್ನು ಈ ಪರ್ವಗಳು ಒದಗಿಸುತ್ತವೆ. ಅಂತಹ ಪರ್ವಗಳು ಅಂದರೆ ಹಬ್ಬಗಳು ಅನೇಕ ಇವೆ. ಅವುಗಳಲ್ಲಿ ಬಹಳ ಮಹತ್ತ್ವಪೂರ್ಣವಾದುದು ದೀಪಾವಳಿ. ಇದನ್ನು ಜ್ಞಾನಿಗಳು ಆಧ್ಯಾತ್ಮಿಕ ಪರ್ವವೆಂದೇ ಕರೆದಿದ್ದಾರೆ. ಜೈನರಾದವರು ಯಾವುದನ್ನೂ ತಿಳಿದು ಆಚರಿಸಬೇಕು. ಅದೇ ವಿಶೇಷ.

ಪ್ರತಿವರ್ಷವೂ ಕೋಟಿ ಕೋಟಿ ಮಾನವರ ಹೃದಯದಲ್ಲಿ ಅಧ್ಯಾತ್ಮ ಜ್ಞಾನ ಜ್ಯೋತಿಯನ್ನು ಬೆಳಗಿಸಲು ಈ ಪರ್ವ ಬರುತ್ತದೆ.

ಜ್ಞಾನವೇ ಸುಖ, ಅಜ್ಞಾನವೇ ದುಃಖ. ಜ್ಞಾನವೇ ಬೆಳಕು, ಅಜ್ಞಾನವೇ ಅಂಧಕಾರ. ಎಂಬ ಬೋಧೆಯನ್ನು ಸಾರುತ್ತಾ ಈ ಪರ್ವ ಬರುತ್ತದೆ. ಅಜ್ಞಾನಾಂಧಕಾರವನ್ನು ತೊಲಗಿಸಿ ಸುಜ್ಞಾನಜ್ಯೋತಿಯನ್ನು ಬೆಳಗಿಸಿ ಕಾಮ, ಕ್ರೋಧ, ಲೋಭ, ಮದ, ಮತ್ಸರ, ಮೋಹಾದಿಗಳಿಂದ ಕಲುಷಿತವಾದ ಅಂತರಂಗವನ್ನು ಮೃದು, ಮಧುರ, ಸರಳ, ಸತ್ಯ, ಅಹಿಂಸೆ, ಶಾಂತಿ, ಸಹನೆಗಳೆಂಬ ಅಮೃತಕಣಗಳಿಂದ ಸ್ವಚ್ಛಗೊಳಿಸಲು ಈ ದೀಪಾವಳಿ ಪರ್ವ ಬರುತ್ತದೆ. ಅಂಧಕಾರದಿಂದ ಪ್ರಕಾಶದ ಕಡೆಗೆ, ಹಿಂಸೆಯಿಂದ ಅಹಿಂಸೆಯ ಕಡೆಗೆ, ಅಸತ್ಯದಿಂದ ಸತ್ಯದ ಕಡೆಗೆ, ಲೋಭದಿಂದ ಉದಾರದ ಕಡೆಗೆ, ದುರಾಚಾರದಿಂದ ಸದಾಚಾರದ ಕಡೆಗೆ ಕೊಂಡೊಯ್ಯುವ ನೌಕೆಯಂತೆ ಬರುತ್ತದೆ, ಈ ಪಾವನ ಪರ್ವ ದೀಪಾವಳಿ. ಈ ಪರ್ವದ ಆಚರಣೆಯ ಸಂಕೇತವಾದರೂ ಇದೇ ಆಗಿದೆ.

ಆದರೆ ಎಲ್ಲೆಲ್ಲೂ ಬರೀ ದೀಪಗಳನ್ನು ಸಾಲುಸಾಲಾಗಿ ಹಚ್ಚಿ ಮನರಂಜನೆ ಮಾಡುವುದಷ್ಟೇ ಕಂಡುಬರುತ್ತದೆ. ಆದರೆ ಇಷ್ಟೇ ಸಾಲದು. ಇದರೊಂದಿಗೆ ಈ

ಪರ್ವದ ಆಚರಣೆಗೆ ಇರುವ ಹಿನ್ನೆಲೆ ಏನು? ಈ ಪರ್ವದ ಮಹತ್ತ್ವವೇನು? ಕರ್ತವ್ಯವೇನು? ಎಂಬುದನ್ನು ತಿಳಿಯಲು ಸಭೆ, ಉಪನ್ಯಾಸ, ಸ್ವಾಧ್ಯಾಯಾದಿಗಳನ್ನು ಏರ್ಪಡಿಸಿ ಅಂತರಂಗದಲ್ಲಿ ಜ್ಞಾನಜ್ಯೋತಿಯನ್ನು ಬೆಳಗಿಸಿಕೊಳ್ಳುವುದು ಅವಶ್ಯಕವಿದೆ.

ಈ ಪರ್ವವನ್ನು ಆಶ್ವಯುಜ ಅಮಾವಾಸ್ಯೆಯಂದು ಆಚರಿಸುವುದಕ್ಕೆ ಒಂದು ಪ್ರಸಿದ್ಧ ಪೌರಾಣಿಕ ಹಿನ್ನೆಲೆಯೂ ಉಂಟು.

ತೀರ್ಥಂಕರರ ಪರಂಪರೆಯಲ್ಲಿ ಈ ಕಾಲಕ್ಕೆ ಅಂತಿಮರಾದ ಭಗವಾನ್ ಮಹಾವೀರರು ವೈಶಾಲಿಯ ಕುಂಡಲಪುರದಲ್ಲಿ ಸಿದ್ಧಾರ್ಥರಾಜ ಮತ್ತು ತ್ರಿಶಲಾರಾಣಿಯ ಸುಪುತ್ರರಾಗಿ ಜನ್ಮತಾಳಿದ್ದರು. ಅವರು ಅಂದಿನ ಜನತೆಯಲ್ಲಿ ಹಬ್ಬಿದ್ದ ಹಿಂಸೆ, ಅಜ್ಞಾನ, ಅತ್ಯಾಚಾರವನ್ನು ಕಂಡು ಮರುಗಿದರು. ಅವರು ಅದನ್ನು ನಿವಾರಿಸುವ ಉಪಾಯವನ್ನು ಹುಡುಕಲು ತತ್ಪರರಾದರು. ಬಾಲಬ್ರಹ್ಮಚಾರಿಗಳಾಗಿದ್ದು ತನ್ನ ಮುವತ್ತನೇ ವಯಸ್ಸಿನಲ್ಲಿ ಸಕಲ ಪರಿಗ್ರಹಗಳನ್ನೂ ತೊರೆದು ದಿಗಂಬರಯತಿಯಾದರು. ಹನ್ನೆರಡು ವರ್ಷ ಘೋರ ತಪಶ್ಚರಣ ಮಾಡಿ ಕೇವಲಜ್ಞಾನವನ್ನು ಸಂಪಾದಿಸಿದರು; ಸರ್ವಜ್ಞರಾದರು. ಅವರು ಇಡೀ ಜಗತ್ತಿಗೆ ಕಲ್ಯಾಣವಾಗುವಂತೆ ಸರಳ, ಸತ್ಯ, ಸುಂದರ ಸನ್ಮಾರ್ಗದ ಉಪದೇಶ ಮಾಡಿದರು. 30 ವರ್ಷಕಾಲ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹಗಳ ವಿವರವನ್ನು ನೀಡಿ, ಇವುಗಳ ಪಾಲನೆಯಿಂದ ಸುಖ, ಶಾಂತಿ, ನೆಮ್ಮದಿಗಳು ಜೀವನದಲ್ಲಿ ದೊರಕುವುದೆಂದೂ, ಒಳ್ಳೆಯ ನಂಬಿಕೆ, ಒಳ್ಳೆಯ ಜ್ಞಾನ, ಒಳ್ಳೆಯ ಆಚರಣೆಯಿಂದ ಮೋಕ್ಷ ಸುಖಸಂಪದವು ಒದಗುವುದೆಂದೂ ತಿಳಿಸಿ ಜಗತ್ತಿನ ಜನರ ಹೃದಯದಲ್ಲಿದ್ದ ಅಜ್ಞಾನ, ಅಂಧಶ್ರದ್ಧೆಗಳನ್ನು ತೊಲಗಿಸಿ ಸುಜ್ಞಾನದೀವಿಗೆಯನ್ನು ಬೆಳಗಿಸಿದರು.

ಕೊನೆಗೊಮ್ಮೆ ಸ್ವಾಮಿಯ ವಿಹಾರವನ್ನು ನಿಲ್ಲಿಸಿ ನಿರ್ಜನ ಪ್ರದೇಶವಾದ ಪಾವಾಪುರದ ಮನೋಹರ ಉದ್ಯಾನಕ್ಕೆ ಹೋಗಿ, ಯೋಗನಿರೋಧವನ್ನು ಮಾಡಲಾರಂಭಿಸಿದರು. ಅನಂತರ ಅಲ್ಲಿಯೇ ಇದ್ದ ಕೆರೆಯ ಮಧ್ಯದ ಸ್ವಚ್ಛ ಶಿಲೆಯ ಮೇಲೆ ವಿರಾಜಮಾನರಾದರು. ಈ ಅವಸರ್ಪಿಣಿಯ ಚತುರ್ಥಕಾಲದಲ್ಲಿ ಮೂರುವರ್ಷ ಎಂಟುವರೆ ತಿಂಗಳು ಉಳಿದಿರುವಾಗಲೇ ಅವರು ಆಶ್ವಯುಜ ಅಮಾವಾಸ್ಯೆಯ ಸುಪ್ರಭಾತದ ಸುಸಮಯದಲ್ಲಿ ಮುಕ್ತರಾದರು. ಅವರ ಪವಿತ್ರ ಆತ್ಮವು ಸಿದ್ಧಲೋಕವನ್ನು ತಲುಪಿತು. ಆಗ ದೇವತೆಗಳು ಭಗವಾನರ ನಿರ್ವಾಣಕಲ್ಯಾಣ ಪೂಜೆಯನ್ನು ಮಾಡಿದರು. ದೇವತೆಗಳ, ರಾಜಾಧಿರಾಜರ



ಕಿರೀಟಗಳ, ಆಭರಣಗಳ ಸ್ವಯಂಪ್ರಕಾಶಿತವಾದ ರತ್ನಗಳ ಪ್ರಭೆಯು ಆ ಸಮಯದಲ್ಲಿ ಕೋಟಿ ಕೋಟಿ ದೀಪಮಾಲಿಕೆಯಂತೆ ಬೆಳಗಿ ಆ ಗಾಢಾಂಧಕಾರವನ್ನು ತೊಲಗಿಸಿದವು. ಆಗ ಅಗ್ನಿ ಕುಮಾರನು ಭಗವಾನರ ದಿವ್ಯ ಶರೀರವನ್ನು ತನ್ನ ಕಿರೀಟದ ರತ್ನಜ್ವಾಲೆಯಿಂದ ಅಗ್ನಿಸಂಸ್ಕಾರವನ್ನು ಮಾಡಿದನು. ಭಗವಾನರು ಮುಕ್ತರಾದ ಸ್ಥಳದಲ್ಲಿ ದೇವೇಂದ್ರನು ಮಹಾವೀರರ ಪಾದಚಿಹ್ನೆಯನ್ನು ತನ್ನ ವಜ್ರಾಯುಧದಿಂದ ಕೊರೆದನು. ಭಗವಾನರ ಮೋಕ್ಷಕಲ್ಯಾಣಕ್ಕೆ ಬಂದಿದ್ದ ದೇಶವಿದೇಶಗಳ ರಾಜಮಹಾರಾಜರು, ಪ್ರಜೆಗಳು ಅಲ್ಲಿ ಭಗವಾನರನ್ನು ಸ್ತುತಿಸಿ ಪ್ರಾರ್ಥಿಸಿದರು. 'ಹೇ ಭಗವನ್, ತಮ್ಮ ಉಪದೇಶದಿಂದ ಜಗತ್ತಿನ ಜೀವಿಗಳ ಅಜ್ಞಾನವು ನಾಶವಾಯಿತು. ನಿಮ್ಮ ಆದರ್ಶವನ್ನು ಇಟ್ಟುಕೊಂಡು ನೀವು ಹಾಕಿಕೊಟ್ಟ ಹಾದಿಯಲ್ಲಿ ನಡೆಯುತ್ತೇವೆ.' ಎಂದು ಪ್ರತಿಜ್ಞೆ ಮಾಡಿ ತಮ್ಮ ಮನೋಮಂದಿರದಲ್ಲಿ ಸುಜ್ಞಾನವನ್ನು ಬೆಳಗಿಸಿಕೊಂಡು ತೆರಳಿದರು. ಅಂದಿನಿಂದ ಈ ದೀಪಾವಳಿ ಪರ್ವವು ಪ್ರಾರಂಭವಾಯಿತು. ಇದು ನಡೆದು 2527 ವರ್ಷಗಳಾದರೂ ವರ್ಷ-ವರ್ಷವೂ ಭಗವಾನರ ಉಪದೇಶ ಮತ್ತು ಸನ್ಮಾರ್ಗವನ್ನು ನೆನಪುಮಾಡಿಕೊಳ್ಳುವ ಸುಸಂದರ್ಭವು ಹೊಸದಾಗಿಯೇ ತೋರುತ್ತದೆ. ಹೀಗೆ ದೀಪಾವಳಿ ಪರ್ವಕ್ಕೆ ವೀರ ಭಗವಾನರ ಪೌರಾಣಿಕ ಸಾಕ್ಷ್ಯವಿರುವುದರಿಂದ ಈ ಪರ್ವವನ್ನು ವೀರನಿರ್ವಾಣಪರ್ವವನ್ನಾಗಿಯೂ ಆಚರಿಸುತ್ತಾರೆ. ಇದು ಭಗವಾನ್ ಮಹಾವೀರರು ಮಾಡಿರುವ ಲೋಕೋಪಕಾರವನ್ನೂ ನೇಮನಿಷ್ಠೆಗಳನ್ನೂ ನೆನಪು ಮಾಡಿಕೊಟ್ಟು ಆಧ್ಯಾತ್ಮಿಕ ಜ್ಞಾನಜ್ಯೋತಿಯನ್ನು ಬೆಳಗಿಸುತ್ತದೆ.

ಈ ದೀಪಾವಳಿಯ ಪರ್ವಾಚರಣೆಯ ಮೂಲಕ ಭಗವಾನರು ಸಾರಿದ ಸತ್ಯ, ಅಹಿಂಸೆ, ಜ್ಞಾನ, ದರ್ಶನ, ಚಾರಿತ್ರದ ದಿವ್ಯ ಸಂದೇಶಗಳನ್ನು ಸಾರುವುದು ಅವಶ್ಯಕವಿದೆ. ದೀಪಾವಳಿಯ ನೆಪದಿಂದಲಾದರೂ ಒಳಗೂ ಹೊರಗೂ ಪ್ರಕಾಶನಾಗಬೇಕು. ಮನ ಕತ್ತಲೆಯಾಗಿ ತನು ಬೆಳಗಿದಿರೆ ಫಲವೇನು? ಜೀವನವನ್ನು ಸಫಲಗೊಳಿಸಲು ಅಜ್ಞಾನಾಂಧಕಾರವನ್ನು ತೊಲಗಿಸಿ ಸುಜ್ಞಾನದ ಕಡೆ ಸಾಗುವ ಸತ್‌ಪ್ರಯತ್ನ ಮಾಡಬೇಕಾಗಿದೆ. ತನ್ನ ಸುಖಕ್ಕಾಗಿ ಏನಾದರೂ ಮಾಡುವ ಸ್ವಾರ್ಥಮಯ, ಅಜ್ಞಾನಮಯ ವ್ಯವಹಾರವನ್ನು ಬಿಟ್ಟು ವೀರರ ಅಮರಸಂದೇಶವಾದ 'ನೀನು ಇರು. ಇತರರೂ ಇರಲಿ' ಎಂಬ ತತ್ತ್ವವನ್ನು ನಂಬಿ ತಿಳಿದು ಆಚರಿಸಬೇಕು. ಅಂತರಂಗದಲ್ಲಿ ಜ್ಞಾನ ಜ್ಯೋತಿಯನ್ನು ಬೆಳಗಿಸಿಕೊಳ್ಳಬೇಕು. ಪಟಾಕಿಯನ್ನು ಹಚ್ಚಬಾರದು. ಇದರಿಂದ ಹಿಂಸೆಯಾಗುವುದು.